# ಕೆಲಸಗಾರರ
# ನಷ್ಟಪರಿಹಾರ ಅಧಿನಿಯಮ

## ಕಾರ್ಯಕರ್ತರಿಗೊಂದು ಮಾರ್ಗದರ್ಶಿ


**ಅನುಜ ಮೀರ್‌ಚಂದಾನೀ**

ಪರ್ಯಾಯ ಕಾನೂನು ವೇದಿಕೆ

(ಆಲ್ಟರ್‌ನೇಟಿವ್ ಲಾ ಫೋರಂ)

ಕನ್ನಡಕ್ಕೆ

**ಎ. ಎಸ್. ಚಂದ್ರಮೌಳಿ**

# ಕೆಲಸಗಾರರ ನಷ್ಟಪರಿಹಾರ ಅಧಿನಿಯಮ

## ಕಾರ್ಯಕರ್ತರಿಗೊಂದು ಮಾರ್ಗದರ್ಶಿ

| | | |
|---|---|---|
| ಕನ್ನಡಕ್ಕೆ ಅನುವಾದ | : | ಎ. ಎಸ್. ಚಂದ್ರಮೌಳಿ<br>ಮುಖ್ಯಸ್ಥರು, ಪತ್ರಿಕೋದ್ಯಮ ವಿಭಾಗ,<br>ಸುರಾನಾ ಕಾಲೇಜು,<br>ಬೆಂಗಳೂರು – 560 004 |
| ಚಿತ್ರಗಳು | : | ಮುರಳೀಧರ್ ರಾಥೋಡ್ |
| ಪುಸ್ತಕ ವಿನ್ಯಾಸ | : | ವಿನಯ್ ಚಂದ್ರನ್ |
| ಪ್ರಕಾಶಕರು | : | **ಪರ್ಯಾಯ ಕಾನೂನು ವೇದಿಕೆ**<br>ಬೆಂಗಳೂರು, 2005 |

ಈ ಕೃತಿಯು ಸೃಜನಶೀಲ ಸಮಾನರ ವ್ಯಾಪಾರರಹಿತ/ಸಮಾನ ಹಂಚಿಕೆ ಒಪ್ಪಂದದ ಉಲ್ಲೇಖ ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಅನುಮತಿ ಪಡೆದಿದೆ. [ಅನುಮತಿಯ ಸಂಪೂರ್ಣ ಮೂಲಪಠ್ಯಕ್ಕಾಗಿ www.creativecommons.org ಅಂತರ್ಜಾಲ ನೋಡಿ]. ಇದರರ್ಥ ಈ ಪುಸ್ತಕವನ್ನು ಭಾಗಶಃ ಅಥವಾ ಪೂರ್ಣವಾಗಿ ವ್ಯಾಪಾರರಹಿತ ಉದ್ದೇಶಗಳಿಗೆ ಮುಕ್ತವಾಗಿ ಮರುಪ್ರತಿ, ಹಂಚಿಕೆ ಅಥವಾ ಪುನರ್ ನಿರ್ಮಿಸಬಹುದಾಗಿದೆಯಾದರೂ ಅದಕ್ಕಾಗಿ ಕೃತಿಯ ಮೂಲ ಕರ್ತೃವಿನ ನಾಮಾಂಕಿತವನ್ನು ಎಲ್ಲೆಡೆಯೂ ಸಂಪೂರ್ಣವಾಗಿ ನೀಡಬೇಕಾಗಿರುತ್ತದೆ. ಈ ಕೃತಿಯು ಅನುಮತಿ ಪಡೆದಿರುವ ಉಲ್ಲೇಖ ಹಾಗೂ ನಿಬಂಧನೆಗಳಿಗೆ ನೀವು ನಿರ್ಮಿಸುವ ಅಂಥಾ ಕೃತಿಗೂ ಅನ್ವಯಿಸುತ್ತದಾದ್ದರಿಂದ ಏನಾದರೂ ಬದಲಾವಣೆಗಳನ್ನು ಹಾಗೂ ಸೇರಿಸುವುದನ್ನು ಮಾಡಬಹುದಾದರೂ, ಅದರಡಿಯಲ್ಲೇ ಅನುಮತಿ ಪಡೆದಿರಬೇಕು.

# ಅನುಕ್ರಮಣಿಕೆ


ಮುನ್ನುಡಿ ........................................................................................ 7

ಅಧ್ಯಾಯ 1. ಕೆಲಸಗಾರರ ನಷ್ಟಪರಿಹಾರ ಅಧಿನಿಯಮ, 1923 ................11

ಪೀಠಿಕೆ ಮತ್ತು ಅಧಿನಿಯಮದ ಐತಿಹಾಸಿಕ ಪ್ರಕರಣ .....................11

ಈ ಅಧಿನಿಯಮವು ಯಾವ ಯಾವ ಸಂಸ್ಥೆಗಳಿಗೆ ಅನ್ವಯಿಸುತ್ತದೆ? ......................................................................13

ಈ ಕಾನೂನು ನೀಡುವ ಅನುಕೂಲಗಳನ್ನು ಪಡೆದುಕೊಳ್ಳಲು ಯಾರು ಅರ್ಹರು? (ಕ. 2 (1) (ಎನ್) ಜೊತೆಗೆ ಪರಿಚ್ಛೇದ IIನ್ನು ಓದಿಕೊಂಡಂತೆ) ....................................................................13

ಅಧ್ಯಾಯ 2. ನಷ್ಟಪರಿಹಾರ ಮತ್ತು ಊನತ್ವ .......................................17

ಮಾಲೀಕನೊಬ್ಬ ಯಾವಾಗ ನಷ್ಟಪರಿಹಾರ ನೀಡಲು ಬದ್ಧನಾಗಿರುತ್ತಾನೆ? (ಕಲಮು 3) ................................................17

ಅಧ್ಯಾಯ 3. ನಷ್ಟಪರಿಹಾರವನ್ನು ನಿರ್ಧರಿಸುವುದು .................................29

ನಷ್ಟಪರಿಹಾರದ ಮೊತ್ತವನ್ನು ಹೇಗೆ ನಿರ್ಧರಿಸುವುದು?..................29

(ಅ) ಒಂದು ಪಕ್ಷ ಕೆಲಸಗಾರನೊಬ್ಬ ಸತ್ತುಹೋದ, ಆಗ ಯಾರು ನಷ್ಟಪರಿಹಾರಕ್ಕೆ ಅರ್ಹರು ಮತ್ತು ಎಷ್ಟು ಪರಿಹಾರವನ್ನು ನೀಡಬೇಕು? ..............................................................31

(ಬ) ಗಾಯಗೊಂಡ ಸಂದರ್ಭಕ್ಕೆ ನಷ್ಟಪರಿಹಾರವನ್ನು ಹೇಗೆ ಲೆಕ್ಕಹಾಕಬೇಕು? .................................................33

i) ಸಂಪೂರ್ಣ ಶಾಶ್ವತ ಊನತ್ವದಲ್ಲಿ ಅಂತ್ಯಗೊಳ್ಳುವ ಘಾತದ ಸಚಿದರ್ಭದಲ್ಲಿ ಎಷ್ಟು ನಷ್ಟಪರಿಹಾರ?........33

ii) ಶಾಶ್ವತ ಭಾಗಶಃ ಊನತ್ವವುಂಟಾಗುವ ಘಾತದ ಸಂದರ್ಭದಲ್ಲಿ ಎಷ್ಟು ಪರಿಹಾರ? ..........................34

iii) 'ಪರಿಚ್ಛೇದದಲ್ಲಿರದ ಘಾತ ದಿಂದಾಗುವ ಶಾಶ್ವತ ಭಾಗಶಃ ಊನತ್ವಕ್ಕೆ ಪರಿಹಾರ ಲೆಕ್ಕಹಾಕುವ ಬಗ್ಗೆ .....35

iv) ತಾತ್ಕಾಲಿಕ ಊನತ್ವಕ್ಕೆ [ಕ.4(2)ರಿಂದ 4(4)ರ ವರೆಗೆ] ಈಡುಮಾಡುವ ಘಾತದ ಪ್ರಸಂಗದಲ್ಲಿ ಎಷ್ಟು ಪರಿಹಾರ? ................................................37

ಅಧ್ಯಾಯ 4. ಅಪಘಾತವೊಂದಾದಾಗ ನಷ್ಟಪರಿಹಾರ ಪಡೆದುಕೊಳ್ಳಲು ಅನುಸರಿಸಬೇಕಾದ ವಿಧಾನ.........................................................................41

1. ಅಪಘಾತವಾದ ಬಗ್ಗೆ ಮಾಲೀಕನಿಗೆ ತಿಳಿವಳಿಕೆ ಪತ್ರ. ............41
2. ದಂಡಗಳು (ಅಧಿನಿಯಮದ ಅಡಿಯಲ್ಲಿ ತನ್ನ ಕರ್ತವ್ಯ ನಿರ್ವಹಿಸದ ಮಾಲೀಕನ ಮೇಲೆ).......................................................43
3. ತೀವ್ರ ಅಪಘಾತದ ವಿಷಯಗಳಲ್ಲಿ ಇನ್ನಷ್ಟು ಠೇವಣಿ ಕೇಳಲು ಆಯುಕ್ತರಿಗೆ ಅಧಿಕಾರವಿದೆ (ಕಲಂ 22 ಎ) ........................44
4. ವೈದ್ಯಕೀಯ ತಪಾಸಣೆ (ಕಲಂ.11) .................................44
5. ಒಪ್ಪಂದವೊಂದಕ್ಕೆ ಬರಲು ಆಯ್ಕೆ (ಕಲಂ. 28) ..................45
6. ನಷ್ಟಪರಿಹಾರದ ವಿತರಣೆ (ಕೆಲಸಗಾರನ ಸಾವಿನ ವಿಷಯವೂ, ಸೇರಿದಂತೆ ಹಾಗೂ ಕಾನೂನು ಊನತ್ವಗಳಿರುವ ಮಹಿಳಾ ಕೆಲಸಗಾರರು / ವ್ಯಕ್ತಿಗಳಿಗೆ ನಷ್ಟ ಪರಿಹಾರ ನೀಡುವ ಬಗ್ಗೆ).......................................48

ಅಧ್ಯಾಯ 5. ಕಾನೂನಿನ ಪರಿಹಾರಗಳು ................................................55

i. ಯಾರು ಹಕ್ಕು ಚಲಾಯಿಸಬಹುದು? [ಕಲಂ 10 (1)]............................................................56

ii. ಯಾರಲ್ಲಿ ಹಕ್ಕು ಚಲಾಯಿಸಬೇಕು? (ಕ. 19) ..................56
iii. ಹಕ್ಕು ಚಲಾವಣೆ ಮಾಡಬೇಕಾದ ಕಾಲಾವಧಿ
ಮಿತಿ (ಕ. 10) ..................56
iv. ಅರ್ಜಿಯ ನಮೂನೆ (ಕ. 22) ..................58
v. ಕಾಣಿಸಿಕೊಳ್ಳುವುದು ಮತ್ತು ಪುರಾವೆಯ ದಾಖಲು
(ಕ. 24 & 25) ..................62
vi. ಮಾಲೀಕನು ನಷ್ಟಪರಿಹಾರವನ್ನು ನೀಡುವಲ್ಲಿ ನಿಧಾನ
ಮಾಡಿದರೆ ಏನಾಗುತ್ತದೆ (ಸೆಕ್ಷನ್ 4 – ಎ). ಬಡ್ಡಿ ಮತ್ತು
ಜುಲ್ಮಾನೆಗೆ ಅವಕಾಶ ..................63
vii. ಮೇಲ್ಮನವಿ (ಕ. 30) ..................65
ಎರಡು ಪರಿಹಾರಗಳ ವಿರುದ್ಧ ಪ್ರತಿಬಂಧ [ಕ. 3 (5)] ..................65
ಪರಿಶಿಷ್ಟ 1. ಮಾಸಿಕ ವೇತನ ಲೆಕ್ಕಹಾಕುವ ರೀತಿ ..................68
ಪರಿಶಿಷ್ಟ 2. ಮೇಲ್ಮನವಿಗೆ ನಿಬಂಧನೆಗಳು ..................70
ಪರಿಶಿಷ್ಟ 3. ಅಧಿನಿಯಮದ ಪರಿಚ್ಛೇದ 1 .................. 71
ಪರಿಶಿಷ್ಟ 4. ಅಧಿನಿಯಮದ ಪರಿಚ್ಛೇದ 2 .................. 75
ಪರಿಶಿಷ್ಟ 5. ಅಧಿನಿಯಮದ ಪರಿಚ್ಛೇದ 3 .................. 85
ಪರಿಶಿಷ್ಟ 6. ಅಧಿನಿಯಮದ ಪರಿಚ್ಛೇದ 4 .................. 90
ಪರಿಶಿಷ್ಟ 7. ನಷ್ಟಪರಿಹಾರಕ್ಕಾಗಿ ಕೆಲಸಗಾರನಿಂದ ಹಾಕಲು
ಅರ್ಜಿಯ ಸ್ವರೂಪ ..................91
ಪರಿಶಿಷ್ಟ 8. ಮಾಲೀಕನ ಬಾಧ್ಯತೆ ಕುರಿತು ಚರ್ಚೆ:
ಪ್ರಕರಣ ಅಧ್ಯಯನ ..................94

# ಮುನ್ನುಡಿ

ಅಸಂಘಟಿತ ಕೆಲಸಗಾರರ ಬಹು ದೊಡ್ಡ ಗುಂಪುಗಳೇ ಇವೆ, ಅದು ಸಣ್ಣ ಕೈಗಾರಿಕೆಯಲ್ಲಿರಬಹುದು, ಕೃ, ನಿರ್ಮಾಣ, ಸಾರ್ವಜನಿಕ ಸೇವೆ, ವಸ್ತ್ರವಿನ್ಯಾಸ ಕೈಗಾರಿಕೆ, ಅನೇಕ ರೀತಿಯ ಸ್ವಯಂ–ಉದ್ಯೋಗ, ಇತ್ಯಾದಿಗಳಲ್ಲಿರಬಹುದು. ಅಂತಹ ಕೆಲಸಗಾರರ ಪರಿಸ್ಥಿತಿ ಹೇಗಿರುತ್ತದೆ ಎಂದರೆ, ಒಕ್ಕೂಟ ನಿರ್ಮಾಣದ ಪ್ರಥಮ ವರ್ಷಗಳಲ್ಲಿ ದೊಡ್ಡ ಕೈಗಾರಿಕೆಯ ಕಾರ್ಮಿಕರುಗಳವರ ಒಕ್ಕೂಟದಂತೆಯೇ ಹೋಲುತ್ತದೆ. ಕೆಲವೇ ಕಾನೂನುಗಳು ಅವರಿಗೆ ಅನ್ವಯವಾಗುತ್ತವೆ; ಹಾಗೆ ಅಂಗೀಕೃತವಾದವುಗಳೂ ಜಾರಿಗೊಳ್ಳುವುದಿಲ್ಲ. ಇಂತಹ ಕೆಲಸಗಾರರುಗಳಲ್ಲಿ ಅನೇಕರಿಗೆ ಶಿಕ್ಷಣವಿಲ್ಲ, ಕಿಂಚಿತ್ತೇ ಕೌಶಲತೆ ಮತ್ತು ತಾವುಗಳೇ ಸಂಘಟಿತರಾಗಲು ಅತ್ಯಲ್ಪ ಸಮರ್ಥರು.

ದುಡಿಮೆಯ ಹಕ್ಕುಗಳ ಶಿಕ್ಷಣ ಕುರಿತ ಪುಸ್ತಕವೊಂದು ತುರ್ತಾಗಿ ಅವಶ್ಯಕವಾಗಿದೆ ಎಂಬ ಅನೇಕರ ಸಮಾನ ಅನಿಸಿಕೆಯಿಂದಾಗಿ ಈ ಕೈಪಿಡಿಯು ಹುಟ್ಟಿಬಂದಿದೆ. ಅಸಂಘಟಿತ ದುಡಿಮೆಗಾರರ ಜೊತೆಗೆ ಕೆಲಸಮಾಡುತ್ತಿರುವ ಕಾರ್ಯಕರ್ತರಿಗಾಗಿ ಈ ಪುಸ್ತಕ. ಹಕ್ಕುಗಳ ಬಗ್ಗೆ ತಿಳುವಳಿಕೆ ಇದ್ದ ಮಾತ್ರಕ್ಕೇ ಅವನ್ನು ಅನುಷ್ಠಾನಕ್ಕೆ ತರಲು ಸುಲಭವೆಂದು ಅರ್ಥವಲ್ಲ, ಆದರೆ ಆ ಹಕ್ಕುದಾರಿಕೆಗಳನ್ನು ಗಳಿಸಲು ಕಾನೂನು ರೀತ್ಯಾ ಅಥವಾ ಇನ್ನಿತರ ರೀತಿಗಳಲ್ಲಿ ಮತ್ತಷ್ಟು ಕಾರ್ಯತತ್ಪರತೆಗೆ ಮತ್ತು ಭವಿಷ್ಯದ ಯೋಜನೆಗಳಿಗೆ ಖಚಿತವಾಗಿ ಇದು ಮುಖ್ಯವಾಗುತ್ತದೆ.

ಈ ಕೈಪಿಡಿಯ ಮೂಲಕ ಕಾನೂನಿನ ಕಗ್ಗಂಟು ಭಾಷೆಯ ಜಾಲವನ್ನು ಬಿಡಿಸಿ ಕಾನೂನನ್ನು ಸರಳವಾಗಿ ಈ ಕಾಯ್ದೆಯಡಿ ಬರುವ ಹಕ್ಕುಗಳ ಬಗ್ಗೆ ಕೆಲಸಗಾರರುಗಳಿಗೆ ತಿಳಿಸಿಕೊಡುವುದರ ಜೊತೆಗೆ, ಬೆಂಗಳೂರಿನಲ್ಲಿ ಜಾರಿಗೊಳಿಸಲು ಇರುವ ನಿರ್ದಿಷ್ಟ ಕಾರ್ಯವಿಧಾನಗಳೂ, ವಾಸ್ತವಗಳೂ ಹಾಗೂ ಸಮಸ್ಯೆಗಳ ಬಗ್ಗೆ ಮಾಹಿತಿಗಳನ್ನು ತಿಳಿಸಿಕೊಡಲು ಪ್ರಯತ್ನಿಸಲಾಗಿದೆ.

ಕೆಲಸಗಾರರ ನಷ್ಟ ಪರಿಹಾರದ ಬಗ್ಗೆಯ ಈ ಕಿರುಹೊತ್ತಿಗೆಯ ಕಲ್ಪನೆಯು ಗುತ್ತಿಗೆ ಪೌರಕಾರ್ಮಿಕರ ಸಂಘದ ಗೌರವಾಧ್ಯಕ್ಷರಾದ ಶ್ರೀ ಸಿ. ಬಾಲಕೃಷ್ಣ ಅವರಿಂದ ಸೂಚಿಸಲ್ಪಟ್ಟಿತು. ಅವರು ಹೇಳಿದಂತೆ ಈ ಕಾಯ್ದೆಯು ಅಸಂಘಟಿತ ದುಡಿಮೆ ವಲಯಕ್ಕೆ ಬಹುಮುಖ್ಯ ಕಾನೂನುಗಳಲ್ಲೊಂದು. AITUCಯ ರಾಜ್ಯ ಕಾರ್ಯದರ್ಶಿ ಹಾಗೂ ಕಾರ್ಮಿಕ ವಕೀಲರಾದ ಶ್ರೀ ಮುರಳೀಧರ ಅವರಿಂದ ಮೌಲ್ಯಯುತ ಮಾರ್ಗದರ್ಶನ ದೊರಕಿತು. ಅಂತೆಯೇ ಕಾರ್ಮಿಕರ ಭವನದಲ್ಲಿ ಕಾರ್ಮಿಕರ ಪರಿಹಾರದ ಹಕ್ಕುಚಲಾವಣೆ ಅಧಿಕಾರಿಯಾದ ಶ್ರೀ

ಎನ್.ಬಿ. ರಾಮಚಂದ್ರ ರವರಿಂದಲೂ ಕೆಲವು ವಿಷಯಗಳ ಸಂಗ್ರಹಣೆ. ಈ ಪುಸ್ತಕದ ಕ್ರತುಶಕ್ತಿ ಎಂಬುದೇನಾದರೂ ಇದ್ದಲ್ಲಿ, ಅದು ಬಾಲಕಾರ್ಮಿಕ–ನೊಬ್ಬನಿಗಾಗಿ ಕೆಲಸಗಾರರ ನಷ್ಟ ಪರಿಹಾರ ದಾವೆಯೊಂದರ ವಕಾಲತ್ತು ವಹಿಸಿದ್ದ ಎ.ಎಲ್.ಎಫ್. ನ ಅನುಭವದಿಂದಾಗಿ ಎನ್ನಬಹುದು.

ಈ ಸಂಬಂಧದಲ್ಲಿ ಎ.ಎಲ್.ಎಫ್.ನ ಮಿರಿಯಮ್ ಚಿನ್ನಪ್ಪ, ಚಿತ್ರಾ ಬಾಲಕ್ರಿಷ್ಣನ್ ಮತ್ತು ಅರ್ವಿಂದ್ ನಾರೇನ್ ರವರುಗಳು ಈ ಕಾನೂನಿನ ಅಡಿಯಲ್ಲಿನ ಯಾವುದೇ ತೀರ್ಪು ಅಥವಾ ನಿರ್ಣಯಗಳ ಬಗ್ಗೆ ಗಮನ–ವಿಡಬೇಕಾದ ವಾಸ್ತವಾಂಶಗಳನ್ನು ಕುರಿತು ಉಪಯುಕ್ತ ಸಲಹೆಗಳನ್ನು ನೀಡಿರುತ್ತಾರೆ. ಈ ಸಲಹೆಗಳು ಮತ್ತು ಎ.ಎಲ್.ಎಫ್.ನ ಕ್ಲಿಫ್‌ಟನ್ ಡಿ' ರೊಜ಼ಾರಿಯೋ ಮತ್ತು ಆರ್ತಿ ಮುಂದ್ಕರ್ ರವರುಗಳ ಪುಸ್ತಕದ ರೂಪ ಮತ್ತು ವಸ್ತುಗಳ ಬಗ್ಗೆಯ ಇತರ ಅನೇಕ ಉಪಯುಕ್ತ ಸಲಹೆಗಳು ಕೈಪಿಡಿಯಲ್ಲಿ ಮೂಡಿವೆ. ಈ ಕಿರುಕೃತಿಯ ಪ್ರಾರಂಭಿಕ ರೂಪುರೇಷೆ NALSARನ ವಿದ್ಯಾರ್ಥಿಯಾದ ಗಣೇಶ್‌ರಾವ್‌ರದ್ದು.

ಆಳಕ್ಕಿಳಿದಷ್ಟೂ ನಮಗೆಷ್ಟು ಕಡಿಮೆ ತಿಳಿದಿದೆಯೆಂದು ಅರಿವಾಗುತ್ತದೆ. ಈ ಕೈಪಿಡಿ ಎಂದಿಗೂ ಮುಂದುವರೆಯಬೇಕಾದ ಕಾರ್ಯವೇ. ಸುಧಾರಣೆಯ ಎಲ್ಲಾ ಸಲಹೆಗಳೂ ಸ್ವಾಗತಾರ್ಹ, ಅವುಗಳನ್ನು ಈ–ಮೇಲ್ ನ ಮೂಲಕ–anuja@altlawforum.org ಇಲ್ಲಿಗೆ ಕಳುಹಿಸಬಹುದಾಗಿದೆ.

**ಅನುಜ ಮೀರ್‌ಚಂದಾನೀ**<br>
ಪರ್ಯಾಯ ಕಾನೂನು ವೇದಿಕೆ

# ಕೆಲಸಗಾರರ ನಷ್ಟಪರಿಹಾರ

ಕೆಲಸಗಾರರ ನಷ್ಟಪರಿಹಾರ

## ಸಂಕೇತಾಕ್ಷರಗಳ ವಿವರಣೆ

| | |
|---|---|
| **ಕೆ. & ಕಾ.** | ಕೆಲಸಗಾರರು ಮತ್ತು ಕಾರ್ಯಕರ್ತರುಗಳ ಅವಗಾಹನೆಗಾಗಿರುವ ವಿಭಾಗಗಳು. |
| **ಕಾ.** | ಕಾರ್ಯಕರ್ತರುಗಳಿಗಾಗೆಯೇ. ಹಾಗೂ ಬಹುಶಃ ಕೆಲಸಗಾರರುಗಳಿಗಾಗಿ, ಇದು ತರಬೇತುದಾರರ ನಿರ್ಧಾರಕ್ಕೆ ಬಿಟ್ಟದ್ದು. |
| **ಕ. ಸಂ.** | ನಿರ್ದಿಷ್ಟವಾಗಿ ಕರ್ನಾಟಕದ ಸ್ಥಿತಿಗೆ ಸಂಬಂಧಿಸಿದ್ದು. |
| **ಪ್ರ. & ಉ.** | ಆಗಿಂದಾಗ್ಗೆ ಮತ್ತೆಮತ್ತೆ ಕೇಳಿಬರುವ ಪ್ರಶ್ನೆಗಳು. |

## ಉಲ್ಲೇಖಗಳು

| | |
|---|---|
| **ಕಲಂ ಅಥವಾ ಕ.** | ಅಂದರೆ ಕೆಲಸಗಾರರುಗಳ ನಷ್ಟ ಪರಿಹಾರ ಅಧಿಯಮ 1948ದ ಅಡಿಯಲ್ಲಿ ಬರುವ ಕಲಮುಗಳು (ಸೆಕ್ಷನ್ನುಗಳು). |
| **ವಿಧಿಗಳು** | ಅಂದರೆ ಕರ್ನಾಟಕ ಕೆಲಸಗಾರರುಗಳ ನಷ್ಟ ಪರಿಹಾರ ವಿಧಿಗಳು, 1966 |
| **ಅಧಿನಿಯಮ** | ಅಂದರೆ ಕೆಲಸಗಾರರುಗಳ ನಷ್ಟ ಪರಿಹಾರ ಅಧಿನಿಯಮ, 1948 |
| **ವಿ/ರು** | ವಿರುದ್ಧ (ಎದುರಾಳಿ) |

# ಅಧ್ಯಾಯ 1 ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ 1923

## ಪೀಠಿಕೆ ಮತ್ತು ಅಧಿನಿಯಮದ ಐತಿಹಾಸಿಕ ಪ್ರಕರಣ

ಕೆಲಸಗಾರರ ನಷ್ಟಪರಿಹಾರ ಅಧಿನಿಯಮವು ಸಾಮಾಜಿಕ ಸುರಕ್ಷತೆಯೆಡೆಗೆ ಮೊಟ್ಟ ಮೊದಲ ಶಾಸನ. ಇದು ಕೆಲಸದ ಸಂದರ್ಭದಲ್ಲಿ ಗಾಯಗೊಂಡ ಕೆಲಸಗಾರರಿಗೆ ಆದ ನಷ್ಟಕ್ಕೆ ನೀಡುವ ಪರಿಹಾರದ ಬಗ್ಗೆ ತಿಳಿಸುತ್ತದೆ. ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಯೋಜನೆ ಕೆಲಸಗಾರನಿಗೆ ಅವನ ಸಂಪಾದನೆಯ ಬದಲಾಗಿ ನಷ್ಟಭರಿಸುವುದೆಂದಲ್ಲ. ಸಾಮಾನ್ಯ ತತ್ವವೇನೆಂದರೆ ಕೆಲಸಗಾರನೊಬ್ಬ ತನ್ನ ನೌಕರಿಯ ಸಂದರ್ಭದಲ್ಲಿ ಗಾಯಗೊಂಡು ಕಷ್ಟಕ್ಕೀಡಾದರೆ, ಊನತ್ವಕ್ಕೆ ಕಾರಣವಾಗುವುದಾದರೆ ಅಂಥವರು ನಷ್ಟಪರಿಹಾರ ಸ್ವೀಕರಿಸಲು ಅರ್ಹರಾಗುತ್ತಾರೆ ಮತ್ತು ಅಂಥಹ ಘಾಸಿಯು ತೀರ್ವವಾಗಿ ಸಾವಿಗೀಡಾದರೆ ಅವನ ಅವಲಂಬಿತರಿಗೆ ನಷ್ಟ ಪರಿಹಾರ ನೀಡಬೇಕಾಗುತ್ತದೆ. ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿ, ಪರಿಹಾರ ನೀಡುವ ಜವಾಬ್ದಾರಿ ಕೆಲಸ ಕೊಟ್ಟ ಮಾಲೀಕನದೇ ಆಗಿರುತ್ತದೆ. [ನೌಕರರ ರಾಜ್ಯ ವಿಮೆ ಸಂಸ್ಥೆಗಳಿಗೆ ಅನ್ವಯವಾಗುವ ನೌಕರರ ರಾಜ್ಯ ವಿಮಾ ಅಧಿನಿಯಮ ತಿಳಿಸುವಂತೆ ಇ.ಎಸ್.ಐ. ಕಾರ್ಪೊರೇಷನ್‌ಗಳು ನಷ್ಟ ಪರಿಹಾರ ನೀಡಲು ಬದ್ಧವಾಗಿರುತ್ತವೆ ಎಂಬುದಕ್ಕೆ ವ್ಯತಿರಿಕ್ತವಾದದ್ದು ಇದು.]

ಈ ಅಧಿನಿಯಮದಲ್ಲಿನ 'ಪರಿಹಾರ' ಎಂಬ ಪದದ ಅರ್ಥ ಅಧಿನಿಯಮದ ಅಡಿಯಲ್ಲಿ ಕಲ್ಪಿಸಲಾಗಿರುವ ಕೆಲಸದ ವೇಳೆಯಲ್ಲಾಗುವ ಕೆಲಸದಲ್ಲಾದ ಗಾಯಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅಲ್ಲದೆ, ನೌಕರಿಯ ಸಾಧಾರಣ ಪರಿಸ್ಥಿತಿಗಳ ಅಡಿಯಲ್ಲಿ ನೀಡಬಹುದಾದ ಇನ್ಯಾವುದೇ ರೂಪದ ಸಂಭಾವನೆ, ಪ್ರಯಾಣ ಭತ್ಯೆ, ಸಂಬಳ ಇವುಗಳನ್ನು ಹೊರತುಪಡಿಸಿದ ಹಣಕಾಸಿನ ಪರಿಹಾರಕ್ಕೆ ಮಾತ್ರ ಇದು ಅನ್ವಯವಾಗುತ್ತದೆ. ಅಧಿನಿಯಮವನ್ನು ಒಟ್ಟಾರೆ ಅರ್ಥೈಸಲು, 1923ರಲ್ಲಿ ಮೊದಲ ಬಾರಿಗೆ ಈ ಅಧಿನಿಯಮವನ್ನು ಜಾರಿಗೆ ತಂದಾಗ ಅದರ ಜೊತೆಗೆ ಪ್ರಕಾಶನಗೊಂಡ "ಉದ್ದೇಶಗಳು ಮತ್ತು ಕಾರಣಗಳ ವ್ಯಾಖ್ಯೆ" ಎಂಬುದನ್ನು ನೋಡುವುದು ಉಪಯುಕ್ತವಾಗುತ್ತದೆ. ಅದರಿಂದ ಉದ್ಧರಿಸಬಹುದಾದರೆ:

"... ಈ ದೇಶದಲ್ಲಿ ಹೆಚ್ಚುತ್ತಿರುವ ಕೈಗಾರಿಕೆಯ ಸಂಕೀರ್ಣತೆಯ ಜೊತೆಗೆ ಹೆಚ್ಚು ಹೆಚ್ಚು ಉಪಯೋಗಿಸುತ್ತಿರುವ ಉಪಕರಣಗಳು ಮತ್ತು ಅದರಿಂದ ಕೆಲಸಗಾರರಿಗಾಗುವ ಅಪಾಯ, ಇದರ ಜೊತೆಗೆ ಕೆಲಸಗಾರರುಗಳಲ್ಲೇ ಇರುವ ಒಂದು ಮಟ್ಟದ ಬಡತನ, ಇವೆಲ್ಲವೂ ಸೂಚಿಸುವುದೇನೆಂದರೆ ಅವರುಗಳಿಗೆ ಅಪಘಾತಗಳಿಂದ ಉಂಟಾಗುವ ಕಷ್ಟಕಾರ್ಪಣ್ಯಗಳಿಂದ ಎಷ್ಟು ಸಾಧ್ಯವೋ ಅಷ್ಟು ರಕ್ಷಣೆ ನೀಡಬೇಕು.

"ಈ ರೀತಿಯ ಶಾಸನವೊಂದರ ಮತ್ತೊಂದು ಅನುಕೂಲವೆಂದರೆ ಮಾಲೀಕರಿಗೆ ಸಮರ್ಪಕ ರಕ್ಷಣಾ ವಿಧಾನಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಡುವುದರಿಂದ, ಅದು ಕೆಲಸಗಾರರಲ್ಲಿ ಅಪಘಾತಗಳ ಸಂಖ್ಯೆಯನ್ನು ಎಷ್ಟರ ಮಟ್ಟಿಗೆ ಕಡಿಮೆ ಮಾಡುತ್ತದೆ ಎಂದರೆ ಆ ಮಟ್ಟದ ಇಳಿಮುಖ ಅಧಿಕೃತ ಅಧೀಕ್ಷಣೆಗಳಿಂದ ಸಾಧ್ಯವಿಲ್ಲ. ಅಲ್ಲದೆ, ತಮ್ಮ ಕೆಲಸಗಾರರಿಗೆ ಸಾಕಷ್ಟು ವೈದ್ಯಕೀಯ ಚಿಕಿತ್ಸೆ ನೀಡಲು ಮಾಲೀಕರುಗಳಿಗೆ ಉತ್ತೇಜನ ನೀಡುವುದರಿಂದ, ಅಂತಹ ಅಪಘಾತಗಳ ಪ್ರಭಾವಗಳನ್ನು ಕಡಿಮೆ ಮಾಡಬಹುದು.

ಹೀಗೆ ದೊರಕಿದ ಅನುಕೂಲಗಳಿಂದ, ಜೊತೆಗೆ ಆತನು ಅನುಭವಿಸುವ ಹೆಚ್ಚಿದ ಸುರಕ್ಷತಾ ಮನೋಭಾವದಿಂದ, ಕೈಗಾರಿಕಾ ಜೀವನವು ಹೆಚ್ಚು ಆಕರ್ಶಕವಾಗುತ್ತದೆ ಹಾಗೂ ಅದರಿಂದಾಗಿ ಕೆಲಸಗಾರರು ಸಿಗುವ ಅವಕಾಶಗಳೂ ಹೆಚ್ಚುತ್ತದೆ. ಇದೇ ಸಂದರ್ಭದಲ್ಲಿ ಸರಾಸರಿ ಕೆಲಸಗಾರರ ದಕ್ಷತೆಯಲ್ಲಿ ತತ್ಸಮಾನವಾದ ಹೆಚ್ಚಳವನ್ನು ನಿರೀಕ್ಷಿಸಬಹುದಾಗಿದೆ."

ಅಧಿಕೃತ ಉದ್ದೇಶಗಳು ಮತ್ತು ಕಾರಣ ಇವುಗಳಾದರೆ, ಭಾರತದ ಇಂದಿನ ವಾಸ್ತವವೇನೆಂದರೆ, ಈ ಅಧಿನಿಯಮವು ನೀಡಿರುವ ರಕ್ಷಣೆಯು ಕೆಲಸಗಾರರಿಗೆ ಪ್ರೋತ್ಸಾಹಕರ ಆಗುವುದಿಲ್ಲ, ಏಕೆಂದರೆ ಅವರಲ್ಲನೇಕರಿಗೆ ಇದರ ಬಗ್ಗೆ ಅರಿವಿಲ್ಲ ಮತ್ತು ಜೀವನೋಪಾಯಕ್ಕೋಸ್ಕರ ಸುಮ್ಮನೆ ಕೆಲಸಕ್ಕೆ ಸೇರಿಬಿಟ್ಟಿರುತ್ತಾರೆ. ಮಸೂದೆಯನ್ನು ರಚಿಸುವ ಸಮಯದಲ್ಲಿ ಈ ಅಧಿನಿಯಮವು ಯಾರಿಗೆ ಅನ್ವಯಿಸುತ್ತದೆ ಎಂದು ನಿರ್ಧರಿಸಲು ಎರಡು ಅಳತೆಗೋಲುಗಳನ್ನು ಅನುಸರಿಸಲಾಯಿತು:–

೧. ಹೆಚ್ಚು ಕಡಿಮೆ ಸಂಘಟಿತವಾಗಿರುವಂತಹ ಕೈಗಾರಿಕೆಗಳಿಗೆ,

೨. ಹಾನಿಕಾರಕ ಉದ್ಯೋಗಗಳಲ್ಲಿರುವ ಕೆಲಸಗಾರರಿಗೆ.

ಈ ದಿನಗಳಲ್ಲಿ ಸರ್ಕಾರವು (ರಾಜ್ಯ ಅಥವಾ ಕೇಂದ್ರ) ಈ ಅಧಿನಿಯಮವನ್ನು ಇತರೆ ಸಂಘಟಿತವಾಗಿಲ್ಲದಿರಬಹುದಾದ ಕೈಗಾರಿಕಾ ಸಂಸ್ಥೆಗಳಿಗೆ ಅನ್ವಯಿಸುವಂತೆ ವಿಸ್ತರಿಸುವ ಸಾಧ್ಯತೆ ಇದೆ.

## ಕೆ. & ಕಾ.

### ಈ ಅಧಿನಿಯಮವು ಯಾವ ಯಾವ ಸಂಸ್ಥೆಗಳಿಗೆ ಅನ್ವಯಿಸುತ್ತದೆ?

20 ಕೆಲಸಗಾರರು ಮತ್ತು ಅದಕ್ಕಿಂತ ಹೆಚ್ಚಿರುವ ಎಲ್ಲಾ ಸಂಸ್ಥೆಗಳೂ ನೌಕರರ ರಾಜ್ಯವಿಮೆ ಅಧಿನಿಯಮ (ಇ. ಎಸ್. ಐ ಅಧಿನಿಯಮ) ದ ಅಡಿಯಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳತಕ್ಕದ್ದು. ಅದಕ್ಕಿಂತ ಕಡಿಮೆ ಕೆಲಸಗಾರರನ್ನು ನೇಮಿಸಿಕೊಂಡಿರುವಂಥಾ ಸಂಸ್ಥೆಗಳಿಗೆ, ಹಾಗು ಇ.ಎಸ್.ಐ. ಅಧಿನಿಯಮದ ಪರಿಧಿಯ ಒಳಗೆ ಬಾರದಂಥವುಗಳಿಗೆ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮವು ಅನ್ವಯವಾಗುತ್ತದೆ. ಅಲ್ಲದೇ, ಮಾಲೀಕರು ಇ.ಎಸ್.ಐ. ಅಧಿನಿಯಮದಡಿ ತಾವು ನೋಂದಣಿ ಮಾಡಿಸಿಲ್ಲದಿದ್ದರೆ, ಆಗ ಅವರು ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿ ಪರಿಹಾರ ನೀಡಲು ಜವಾಬ್ದಾರರಾಗಿರುತ್ತಾರೆ.

ಆದರೆ, ಅಧಿನಿಯಮದ ಅಡಿಯಲ್ಲಿ ವ್ಯಾಖ್ಯಾನಿಸಿರುವ ‘ಕೆಲಸಗಾರರು’ ಎಂದು ಪರಿಗಣಿಸಿರುವ ವ್ಯಕ್ತಿಗಳಿಗೆ ಮತ್ತು ‘‘ಮಾಲೀಕರು’’ ಎಂದು ಪರಿಗಣಿಸಿರುವಂಥಾ ಮಾಲೀಕರುಗಳಿಗೆ ಮಾತ್ರ ಕೆಲಸಗಾರರ ನಷ್ಟಪರಿಹಾರ ಅಧಿನಿಯಮವು ಅನ್ವಯವಾಗುತ್ತದೆ.

### ಈ ಕಾನೂನು ನೀಡುವ ಅನುಕೂಲಗಳನ್ನು ಪಡೆದುಕೊಳ್ಳಲು ಯಾರು ಅರ್ಹರು? (ಕ. 2 (1) (ಎನ್) ಜೊತೆಗೆ ಪರಿಚ್ಛೇದ IIನ್ನು ಓದಿಕೊಂಡಂತೆ)

ಈ ಅಧಿನಿಯಮದಡಿ ಕೆಲಸಗಾರರು ಎಂದು ಪರಿಗಣಿಸಿರುವ ವ್ಯಕ್ತಿಗಳಿಗೆ ಮಾತ್ರ ಈ ಅಧಿನಿಯಮ ಅನ್ವಯವಾಗುತ್ತದೆ. ಈ ಕೆಳಗಿನ ನಿಬಂಧನೆಗಳನ್ನು ಪೂರೈಸಬೇಕಾಗುತ್ತದೆ:

- ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮವನ್ನು ಕ್ರಿ.ಶ. 2000 ಇಸವಿಯಲ್ಲಿ ತಿದ್ದುಪಡಿ ಮಾಡಿದ ಮೇಲೆ, ಸಂಬಂಧಿಸಿದ ಕೆಲಸಗಾರನೊಬ್ಬ ಮಾಲೀಕನ ವ್ಯಾಪಾರ ಅಥವಾ ವಹಿವಾಟಿನಲ್ಲೇ ತೊಡಗಿಸಿಕೊಂಡಿರಬೇಕು ಎಂಬುದು ಈಗ ಅವಶ್ಯಕವೇನಲ್ಲ. ಅಲ್ಲದೇ, 2000ರ ತಿದ್ದುಪಡಿಯಿಂದಾಗಿ, ಈಗ ಈ ಕಾನೂನಿನಲ್ಲಿ ಹಂಗಾಮಿ

ಕೆಲಸಗಾರರನ್ನೂ[1] ಸೇರಿಸಿಕೊಳ್ಳಲಾಗಿದೆ. ಒಂದೇ ಒಂದು ಅವಶ್ಯಕವೆಂದರೆ:

- ಕೆಲಸಗಾರನು **ನೌಕರಿಗಿರುವ ಚಟುವಟಿಕೆಯೊಂದು ಅಧಿನಿಯಮದ ಪರಿಚ್ಛೇದ IIರಲ್ಲಿ[2] ಪಟ್ಟಿಮಾಡಿರಬೇಕು ಅಥವಾ ಪರಿಚ್ಛೇದದಲ್ಲಿ ಹೇಳಿರುವ ಉಲ್ಲೇಖಿತ ಚಟುವಟಿಕೆಯೊಡನೆ ಸಂಬಂಧಿಸಿದ ಇನ್ನಾವುದೇ ಕೆಲಸದಲ್ಲಿರಬೇಕು.** ಇದಕ್ಕೆ ಸೇರಿದಂತೆ, ಅಧಿನಿಯಮದ ಪರಿಚ್ಛೇದ III[3] ರಲ್ಲಿ ಈ ಅಧಿನಿಯಮದ ಅಡಿಯಲ್ಲಿ ನಷ್ಟ ಪರಿಹಾರ ಕೋರಬಹುದಾದ ಸಾಂಕ್ರಾಮಿಕ ಇರಬಹುದಾದ ಖಾಯಿಲೆಗಳ ಹಾಗೂ ಉದ್ಯೋಗಗಳಲ್ಲಿರುವ ವ್ಯಕ್ತಿಗಳ ಪಟ್ಟಿ ಮಾಡಲಾಗಿದೆ. ಈ ಅಧಿನಿಯಮದ ಉದ್ದೇಶಗಳಿಗೆ ಅವರು 'ಕೆಲಸಗಾರರು' ಎನಿಸಿಕೊಳ್ಳುತ್ತಾರೆ.

- ಪರಿಚ್ಛೇದ II ದಲ್ಲಿ ತಿಳಿಸಿರುವ ರೀತಿಯ ನೌಕರಿಯಲ್ಲಿರುವ ವ್ಯಕ್ತಿಗಳು ಸೇರಿದಂತೆ, ವಾಹನ ಚಾಲಕ, ಯಂತ್ರಕರ್ಮಿ, ಸ್ವಚ್ಛಗಾರ ಅಥವಾ ಮೋಟಾರು ವಾಹನಕ್ಕೆ ಸಂಬಂಧಪಟ್ಟ ಇನ್ನಾವುದೇ ರೀತಿಯ ನೌಕರಿಯಲ್ಲಿರುವ ವ್ಯಕ್ತಿಗಳನ್ನೂ ಈ ಅಧಿನಿಯಮದಡಿಯಲ್ಲಿ ಕೆಲಸಗಾರರು ಎಂದು ಪರಿಗಣಿಸಲಾಗುತ್ತಾದೆ.

## ಗುತ್ತಿಗೆ ದುಡಿಮೆಗಾರರು ಇದರ ಲಾಭಗಳನ್ನು ಪಡೆಯಲು ಅರ್ಹರೇ? (ಕ. 12)

ಒಂದು ವೇಳೆ ಒಂದು ಸಂಸ್ಥೆಯ ಭಾಗಶಃ ಕೆಲಸವನ್ನು ಗುತ್ತಿಗೆದಾರನೊಬ್ಬನಿಗೆ ಗುತ್ತಿಗೆ ನೀಡಿದ್ದಲ್ಲಿ ಮತ್ತು ಆ ಗುತ್ತಿಗೆದಾರನಿಂದ ಈ ಉದ್ದೇಶಕ್ಕಾಗಿ ನೇಮಿಸಲ್ಪಟ್ಟ ಕೆಲಸಗಾರನೊಬ್ಬನು ಗಾಯಗೊಂಡರೆ, ಆಗ, ಆ ಕೆಲಸಗಾರನು ಮೂಲ ಮಾಲೀಕನಿಂದಲೇ ನೇಮಿಸಲ್ಪಟ್ಟವನು ಎಂಬಂತೆ, ಮೂಲ ಮಾಲೀಕನೇ ನಷ್ಟ ಪರಿಹಾರ ನೀಡಲು ಜವಾಬ್ದಾರನಾಗಿರುತ್ತಾನೆಯೇ ಹೊರತು

---

1 ಹಂಗಾಮಿ ನೌಕರಿ ಎಂಬುದು ಖಾಯಂ ಅಲ್ಲದ ಅಥವಾ ತೆರವಿಲ್ಲದ, ನಿರಂತರ ನೌಕರಿ. ಅದು ಅಲ್ಪಾವಧಿಗಳ ಇಲ್ಲವೇ ಮಿತಿಯ ಅಥವಾ ತಾತ್ಕಾಲಿಕ ಉದ್ದೇಶಕ್ಕಾಗಿರುವ ನೌಕರಿ. ವೆಬ್‌ಸ್ಟರ್ ನಿಘಂಟು ಅದನ್ನು 'happening without being forseen, coming without regularity' ಅಂದರೆ ಮುನ್ಸೂಚನೆ ಇಲ್ಲದೆ ಬರುವ ಘಟನೆ, ಕ್ರಮಬದ್ಧತೆಯಿಲ್ಲದೆ ಬರುವಂಥ ಕೆಲಸ ಎಂದು ವ್ಯಾಖ್ಯಾನಿಸುತ್ತದೆ.

2 ಅಧಿನಿಯಮದ ಪರಿಚ್ಛೇದ IIನ್ನು ಪರಿಶಿಷ್ಟ 4ರಲ್ಲಿ ನೋಡಿ.

3 ಅಧಿನಿಯಮದ ಪರಿಚ್ಛೇದ IIIನ್ನು ಪರಿಶಿಷ್ಟ 5ರಲ್ಲಿ ನೋಡಿ.



ಮಾಲೀಕನ ಮನೆಯಲ್ಲಿ ಬಾಬು ಎಂಬುವನು ಒಬ್ಬ ಗಿಡಗಳನ್ನು
ನೆಡುವ ಮಾಲಿಯಾಗಿ ಕೆಲಸಮಾಡುತ್ತಾನೆ. ಈ ಕಾನೂನಿನಡಿಯಲ್ಲಿ
ಅವನನ್ನು ಕೆಲಸಗಾರ ಎಂದು ಪರಿಗಣಿಸಲಾಗುವುದಿಲ್ಲ.
ಏಕೆಂದರೆ ಅವನ ಕೆಲಸವು ನೌಕರಿಗಳ ನಿಗದಿತ ಪಟ್ಟಿಯಲ್ಲಿಲ್ಲ.

ಅದು ಗುತ್ತಿಗೆದಾರ (ಕೆಲಸಗಾರನ ದಿಢೀರ್ ಮಾಲೀಕ)ನ ಜವಾಬ್ದಾರಿಯಲ್ಲ.

ಆದರೆ, ಗಾಯಗೊಂಡ / ಸಾವಿಗೀಡಾದ ಕೆಲಸಗಾರನೊಬ್ಬನಿಗೆ ನೀಡಲಾಗುವ ನಷ್ಟಪರಿಹಾರವನ್ನು ಸಾಮಾನ್ಯವಾಗಿ ನೀಡುವ ವ್ಯಕ್ತಿಯೊಡನೆ, ಅಂದರೆ ಗುತ್ತಿಗೆದಾರನೊಡನೆ ಈ ಮೂಲಮಾಲೀಕನು ಲುಕ್ಸಾನು ಭರ್ತಿಮಾಡಿ–ಕೊಡುವಂತೆ ಹಕ್ಕನ್ನು ಹೊಂದಿರುತ್ತಾನೆ.

ಅದೇನೇ ಇರಲಿ, ಒಟ್ಟಿನಲ್ಲಿ ಕೆಲಸಗಾರನು ನಷ್ಟ ಪರಿಹಾರವನ್ನು ಮೂಲ ಮಾಲೀಕನಿಂದ ಪಡೆಯುವುದನ್ನು ಯಾವ ರೀತಿಯಿಂದಲೂ ತಪ್ಪಿಸಲಾಗದು.

**ಸೂಚನೆ:** ದಿನಗೂಲಿ / ತುಣುಕು ಕೆಲಸದ ಕೆಲಸಗಾರರು ಈ ಅಧಿನಿಯಮದ ಅಡಿಯಲ್ಲಿ 'ಕೆಲಸಗಾರರೇ'.

**ಮಾಲೀಕ:** ಈ ಅಧಿನಿಯಮದಲ್ಲಿ, ಯಾವ ವ್ಯಕ್ತಿ/ಗಳ ಸಮೂಹಕ್ಕಾಗಿ ಕೆಲಸಗಾರನು ಕೆಲಸ ಕಲಿಯುವ ಗುತ್ತಿಗೆಗೆಂದು ಮುಂದಾಗಿರುತ್ತಾನೋ ಅಥವಾ ಸೇವೆ ಸಲ್ಲಿಸುತ್ತಿರುತ್ತಾನೋ ಆ ವ್ಯಕ್ತಿ/ಗಳ ಸಮೂಹವನ್ನು ಈ ಅಧಿನಿಯಮದಡಿ ಮಾಲೀಕ ಎಂದು ವ್ಯಾಖ್ಯಾನಿಸಲಾಗಿದೆ. 'ಮಾಲೀಕ' ಎಂಬ ಶಬ್ದವು ಅವನಿಂದ ನಿಯೋಜಿಸಿದ ಕಾರಭಾರಿ, ಮೃತ ಮಾಲೀಕನೊಬ್ಬನ ಕಾನೂನು ಪ್ರತಿನಿಧಿ, ಅಥವಾ ಕೆಲಸಗಾರನನ್ನು ಬಾಡಿಗೆರೀತ್ಯಾ ಎರವಲು ಕೊಟ್ಟಿರುವ ಯಜಮಾನ– ಇವರೆಲ್ಲರಿಗೂ ಅನ್ವಯಿಸುತ್ತದೆ.

# ಅಧ್ಯಾಯ 2 ನಷ್ಟಪರಿಹಾರ ಮತ್ತು ಊನತ್ವ

## ಕಾ.

### ಮಾಲೀಕನೊಬ್ಬ ಯಾವಾಗ ನಷ್ಟ ಪರಿಹಾರ ನೀಡಲು ಬದ್ಧನಾಗಿರುತ್ತಾನೆ?

ಅಧಿನಿಯಮದ ಕಲಂ 3ರ ಪ್ರಕಾರ, ಮಾಲೀಕನು ನಷ್ಟಪರಿಹಾರ ನೀಡಲು ಯಾವಾಗ ಬದ್ಧನಾಗುತ್ತಾನೆಂದರೆ, ಕೆಲಸಗಾರನು ಈ ಕೆಳಕಂಡ ರೀತಿಯ ಅಪಘಾತಳಿಂದ ಗಾಯಗೊಂಡರೆ:–

- ಕೆಲಸದಲ್ಲಿ ತೊಡಗಿರುವಾಗ ಸಂಭವಿಸುವಂತಹ; ಮತ್ತು
- ನೌಕರಿಯ ಅವಧಿಯಲ್ಲಿ (ಅಂದರೆ ಕೆಲಸದ ವೇಳೆಯಲ್ಲಿ); ಮತ್ತು
- ಅಂತಹ ಗಾಯವು ಕೆಲಸಗಾರನನ್ನು ಊನಗೊಳಿಸಿದರೆ.

ಈ ಮೂರು ನಿಬಂಧನೆಗಳೂ ಅನ್ವಯವಾಗುವುದಾದರೆ ಅಧಿನಿಯಮದ ಅಡಿಯಲ್ಲಿ ಬರುವ ಸ್ಥಾಪನೆಯೊಂದರ ಮಾಲೀಕನು ನಷ್ಟ ಪರಿಹಾರ ನೀಡಲು ಬಾಧ್ಯನಾಗುತ್ತಾನೆ. ಎರಡನೇ ನಿಬಂಧನೆಯು, ಅಂದರೆ ಕೆಲಸದ ವೇಳೆಯಲ್ಲಿ ಎಂಬುದು ರುಜುವಾತು ಮಾಡುವುದು ಸುಲಭ, ಆದರೆ, ಮೊದಲ ನಿಬಂಧನೆ (ಅಂದರೆ, ಅಪಘಾತವು ಕೆಲಸದಲ್ಲಿ ತೊಡಗಿರುವಾಗ ಸಂಭವಿಸುವುದು) ಕೆಲವು ಪ್ರಕರಣಗಳಲ್ಲಿ ಪುಷ್ಟೀಕರಿಸಲು ಕಷ್ಟಕರವಾಗಿದ್ದಿದೆ.

**ಉದಾರಹಣೆ:** ಬಸ್ಸೊಂದು ದಿನವೊಂದರ ಕೊನೆಯ ಪಾಳಿಯಲ್ಲಿ ಅಂತಿಮ ಪ್ರಯಾಣದಲ್ಲಿತ್ತು. ಕೆಲವು ದುಷ್ಕರ್ಮಿಗಳು ಬಸ್ಸೊಳಗೆ ನುಗ್ಗಿ, ಪ್ರಯಾಣಿಕರ ಮೇಲೆ ಮೆಣಸಿನಪುಡಿ ಎರಚಿ, ಬಸ್ಸಿನ ನಿರ್ವಾಹಕನನ್ನು ಕೊಂದುಹಾಕಿದರು. ಇದು ಕೆಲಸದ ವೇಳೆಯಲ್ಲೇ ನಡೆದ ಘಟನೆ, ಆದರೆ ಈ ಘಾತವು ಕೆಲಸದಲ್ಲಿ ತೊಡಗಿರುವಾಗ ಆದದ್ದು ಎನ್ನಬಹುದೇ? ಈ ಪ್ರಕರಣದಲ್ಲಿ ವಾದ ಮಾಡಲಾಯಿತು; ಅದೂ ಸಫಲವಾಗಿಯೇ– ಏನೆಂದರೆ, ಈ ರೀತಿಯ ಘಟನೆಯು ಕರ್ತವ್ಯದ ಸಂದರ್ಭದಲ್ಲಿ ಹುಟ್ಟಬಹುದಾದ ಒಂದು ಅನಿಶ್ಚಿತ ಸಂಭವ ಎಂಬುದಾಗಿ. ಆ ನಿರ್ವಾಹಕನು ಅಂತಹ ವಿಶಿಷ್ಟ ಅಪಾಯಕ್ಕೆ ತನ್ನ ನೌಕರಿಯ ಕಾರಣದಿಂದಾಗಿಯೇ ಒಡ್ಡಿಕೊಂಡಂತಾದದ್ದು[4].

4 ಇದರ ಮೇಲಿನ ಇನ್ನಷ್ಟು ಚರ್ಚೆಗಾಗಿ ಪರಿಶಿಷ್ಟ 8 ನೋಡಿ.

## 'ಊನತ್ವ' ಎಂಬುದರ ವ್ಯಾಖ್ಯಾನ

ಈ ಅಧಿನಿಯಮದಲ್ಲಿ 'ಊನತ್ವ' ಎಂಬುದರ ವ್ಯಾಖ್ಯಾನ ಬಹಳ ಮುಖ್ಯವಾದುದು, ಏಕೆಂದರೆ ಅದು ತನ್ನ ನೌಕರಿಯ ಸಂದರ್ಭದಲ್ಲಿ ಗಾಯಗೊಂಡ ಕೆಲಸಗಾರನೊಬ್ಬ ಕೇಳಬಹುದಾದ ನಷ್ಟಪರಿಹಾರದ ಮಟ್ಟವನ್ನು ನಿರ್ಧರಿಸುತ್ತದೆ. ಈ ಅಧಿನಿಯಮದ ಅಡಿಯಲ್ಲಿ, ನಷ್ಟ ಪರಿಹಾರ ನೀಡಬಹುದಾದ ನಾಲ್ಕು ರೀತಿಯ ಸಂಭವನೀಯ ಸಂಗತಿಗಳಿವೆ. ಅವು ಹೀಗಿವೆ:

1. ಸಾವು
2. **ಶಾಶ್ವತ ಸಂಪೂರ್ಣ ಊನತ್ವ:** ಕೆಲಸಗಾರನನ್ನು ಎಲ್ಲಾ ರೀತಿಯ ಕೆಲಸಗಳಿಂದ ಸಮರ್ಥಹೀನನ್ನಾಗಿ ಮಾಡುವ ಊನತ್ವ.
3. **ಶಾಶ್ವತ ಭಾಗಶಃ ಊನತ್ವ:** ಅಪಘಾತದ ವೇಳೆಯಲ್ಲಿ ಕೆಲಸಗಾರನು ಮಾಡುತ್ತಿದ್ದ ಕೆಲಸದಂತೆಯೇ ಇರುವ ಇನ್ಯಾವುದೇ ನೌಕರಿಯಲ್ಲಿ ಕೆಲಸ ಮಾಡಲು ಸಾಮರ್ಥ್ಯವನ್ನು ಕುಂದಿಸಿರುವ ಊನತ್ವ.
4. **ತಾತ್ಕಾಲಿಕ ಊನತ್ವ:** ಇದು ಪೂರ್ಣ ಅಥವಾ ಭಾಗಶಃ ಊನತ್ವ ಇರಬಹುದು, ಅದು ತಾತ್ಕಾಲಿಕ ರೀತಿಯದ್ದಾಗಿದ್ದು, ಊನತೆಯ ಅವಧಿಯಲ್ಲಿ ಇನ್ಯಾವುದೇ ತತ್ಸಮಾನ ನೌಕರಿ ಮಾಡಿ ಗಳಿಸುವ ಸಾಮರ್ಥ್ಯವನ್ನು ಕೆಲಸಗಾರನಲ್ಲಿ ಕುಂಠಿತಗೊಳಿಸುವಂತಹದ್ದು.

**ಸೂಚನೆ:** ಸಂಪೂರ್ಣ ಊನತ್ವ (ಅಂದರೆ 100% ಊನತ್ವ) ಎಂಬುದು ಅದರ ಮಾಮೂಲು ಭಾಷೆಯಲ್ಲಿನ ಅರ್ಥಕ್ಕಿಂತ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿ ಬೇರೆಯ ಅರ್ಥವಿರುತ್ತದೆ. ಈ ಅಧಿನಿಯಮದ ಪ್ರಕಾರ, ಅಪಘಾತಕ್ಕೆ ದಿಢೀರ್ ಮುನ್ನ ಕೆಲಸಗಾರನು ಮಾಡುತ್ತಿದ್ದ ಕೆಲಸ ಸಂಬಂಧಿತವಾಗಿ ಊನತ್ವವನ್ನು ನಿರ್ಧರಿಸಲಾಗುತ್ತದೆ ಮತ್ತು ಹಾಗಾದ ಗಾಯವು ಅವನನ್ನು ಆ ತೆರನಾದ ಯಾವುದೇ ಕೆಲಸವನ್ನು ಮಾಡಲು ಅನರ್ಹಗೊಳಿಸಿದರೆ, ಆಗ ಅವನ ಊನತ್ವವನ್ನು 100% ಎಂದು ಪರಿಗಣಿಸಲಾಗುತ್ತದೆ.


**ಉದಾಹರಣೆ:** ಅಪಘಾತವೊಂದು ಕೆಲಸಗಾರ – ಕೂಲಿಯೊಬ್ಬನ ಕಾಲಿನ ಅಂಗಹೀನನನ್ನಾಗಿ ಮಾಡಿತು[5], ಹಾಗಾಗಿ ಕೂಲಿ ಕೆಲಸ ಮಾಡಲು

5 ಇದನ್ನು ಮುಂಬೈ ಉಚ್ಚನ್ಯಾಯಾಲಯದಲ್ಲಿ ಸದಾಶಿವ್‌ಕೃಷ್ಣ ಅಡ್ಕೆ ವಿ/ರು. ಮೆಸಸ್. ಟೈಂ ಟ್ರೇಡರ್ 1992 ILLJ 877 (ಮುಂಬೈ)ನಲ್ಲಿ ಎತ್ತಿಹಿಡಿಯಲಾಗಿದೆ.





ವೇಲು, ಮುದ್ರಣ ವಹಿವಾಟಿನಲ್ಲಿ ಕೆಲಸಮಾಡುತ್ತಿದ್ದ ಅವಧಿಯಲ್ಲಿ
ಅಪಘಾತವಾಗಿ ಅವನ ಬೆರಳುಗಳು ಕತ್ತರಿಸಿಹೋದವು.
ಇದು ಭಾಗಶಃ ಊನತ್ವ. ಏಕೆಂದರೆ ಅದು ಅಂತಹುದೇ
ರೀತಿಯ ಇನ್ನ್ಯಾವುದೇ ನೌಕರಿಯಲ್ಲಿ ಅವನ ಕೆಲಸದ
ಸಾಮರ್ಥ್ಯವನ್ನು ಕುಂಠಿಸುತ್ತದೆ.

Temporary disablement (1)






**ರಾಮಮೂರ್ತಿ ಒಬ್ಬ ಪೌರಕಾರ್ಮಿಕ (ಬೆಂಗಳೂರು ಮಹಾನಗರ ಪಾಲಿಕೆಯಿಂದ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕಿರುವ ರಸ್ತೆ ಗುಡಿಸುವಾತ). ಆತ ಕಸದ ಲಾರಿಯ ಮೇಲಿಂದ ಕಾಲುಜಾರಿ ಬಿದ್ದು ಕೈ-ಮುರಿದುಕೊಂಡ. ಅವನಿಗೆ ಒಂದು ತಿಂಗಳ ಕಾಲ ಕೆಲಸಮಾಡಲು ಆಗಲಿಲ್ಲ. ಇದು ತಾತ್ಕಾಲಿಕ ಊನತ್ವ.**







ಶಿರಾಜ಼ನು ಇನ್ನೆಂದಿಗೂ
ಕೂಲಿಕಾರನಾಗಿ ಅಥವಾ
ತತ್ಸಮಾನ ಯಾವುದೇ ಕೆಲಸದಲ್ಲಿ
ತೊಡಗಿಸಿಕೊಳ್ಳಲಾರನಾದ್ದರಿಂದ
ಈ ಕಾನೂನಿನಡಿಯಲ್ಲಿ ಇವನು
100% ಊನತೆ ಹೊಂದಿದವನು
ಎಂದು ಪರಿಗಣಿಸಬಹುದು.

ಅನರ್ಹನಾದನು. ಕಾನೂನು ರೀತ್ಯಾ ಆತನನ್ನು 100% ಊನಿ ಎಂದು ಪರಿಗಣಿಸಬಹುದು. ಈ ಪ್ರಕರಣದಲ್ಲಿ ಕೆಲಸಗಾರನು ಅಪಘಾತ ಸಮಯದಲ್ಲಿ ಮಾಡುತ್ತಿದ್ದ ಕೆಲಸಕ್ಕೆ ಸಂಬಂಧಪಟ್ಟಂತೆ ಗಳಿಕೆಯ ಅಸಮರ್ಥತೆಯನ್ನು ನಿರ್ಧರಿಸಬೇಕು ಎಂದು ನ್ಯಾಯಾಲಯ ಹೇಳಿದೆ.

**ಪ್ರ. & ಉ.**

**ಪ್ರ:** ಕೆಲಸಗಾರನು ಈಗಾಗಲೇ ಯಾವುದೋ ಕಾಯಿಲೆಯಿಂದ ನರಳುತ್ತಿದ್ದು, ಅವನಿಗಾದ ಅಪಘಾತದ ಜೊತೆಗೆ ಖಾಯಿಲೆ ಸೇರಿ ಗಾಯವೂ ಆಯಿತು/ ಸಾವುಂಟಾಯಿತು, ಎಂದಾದರೆ, ಮಾಲೀಕನು ನಷ್ಟ ಪರಿಹಾರ ನೀಡಲು ಬಾಧ್ಯನೇ?

**ಉ:** ಕೆಲಸಗಾರನು ಅನುಭವಿಸುವ ಗಾಯವು ಖಾಯಿಲೆಯನ್ನು ತಂದೊಡ್ಡಿದರೆ, ಅದರಿಂದ ಮುಂಚೆಯೇ ಇದ್ದ ಖಾಲೆ ಉಲ್ಬಣಗೊಂಡು, ಸಾವು ಅಥವಾ ಊನತ್ವ ಸಂಭವಿಸಿದರೆ, ಆಗಲೂ ಅದು ನಷ್ಟ ಪರಿಹಾರಗೊಳ್ಳಬಲ್ಲಂಥದ್ದು (ಅಂದರೆ ನಷ್ಟ ಪರಿಹಾರ ನೀಡಬಹುದಾದಂಥದ್ದು). ಕೆಲಸಗಾರನಲ್ಲಿ ಈಗಾಗಲೇ ಖಾಯಿಲೆಯೊಂದು ಇತ್ತು ಎಂದು ಹೇಳಿ ಮಾಲೀಕನು ತನ್ನನ್ನು ತಾನೇ ಸಮರ್ಥಿಸಿಕೊಳ್ಳುವ ಹಾಗಿಲ್ಲ.


**ಉದಾಹರಣೆ:** ಕೆಲಸಗಾರನೊಬ್ಬನಿಗೆ ಹಿಂದೆಯೇ ಹೃದಯದ ದುರ್ಬಲತೆ–ಯಿದ್ದು, ಅದು ಕೆಲಸದ ಅತಿಒತ್ತಡದಿಂದಲೋ, ಆಯಾಸದಿಂದಲೋ ಅವನ ಸಾವು ಸಂಭವಿಸುತ್ತದೆ, ಆಗಲೂ ಮಾಲೀಕನು ನಷ್ಟ ಪರಿಹಾರ ನೀಡಲು ಬಾಧ್ಯನಾಗಿರುತ್ತಾನೆ. ಕೇವಲ ಅವಶ್ಯಕವಾದುದೇನೆಂದರೆ ಕೆಲಸದ ಸಂದರ್ಭದಲ್ಲಿ ಮತ್ತು ಕೆಲಸದಿಂದ ಉಂಟಾಗುವ ಅಪಘಾತವು ಕೂಡಲೆ ಅವನ ಸಾವಿನ ಹಾನಿಗೆ ಎಡೆಮಾಡಿಕೊಟ್ಟಿತು, ಎಂಬುದು.

**ಕಾನೂನಿನ ಭಾಷೆಯಲ್ಲಿ:** ಕೆಲಸಗಾರನು ಕೆಲಸದ ಸಂದರ್ಭದಲ್ಲಿ ಅನುಭವಿಸಿದ ಘಾತವು ಅವನ ಸಾವಿಗೆ 'ಹತ್ತಿರದ ಕಾರಣ' ವಾಗಿರಬೇಕು, ಅಥವಾ ಅಪಘಾತ ಮತ್ತು ಗಾಯದ ನಡುವೆ ಒಂದು 'ನಿಕಟಕಾರಕ ಸಂಬಂಧ' ವಿರಬೇಕು.

ಒಂದು ಸಣ್ಣ ಗಾಯದ ಫಲವಾಗಿ ಆದ ಒಟ್ಟಾರೆ ಫಲಿತಾಂಶವು ಸಾವು ಎಂದಾದರೂ ಆಗ ಅಂತಹ ಘಾತವು ಪರಿಹಾರಾರ್ಹವಾದುದು.[6]

---

6 ಗುಜರಾತ್ ಉಚ್ಚನ್ಯಾಯಾಲಯ ಎತ್ತಿಹಿಡಿದ ತೀರ್ಪು. ದೇವಿ ಬೆಹ್ನ್ ದುಧಾಭಾಯಿ ವಿ/ರು. ಮ್ಯಾನೇಜರ್, ಲಿಬರ್ಟಿ ಟಾಕೀಸ್, ಮತ್ತು ಇನ್ನೊಬ್ಬರು 1994 II ಐಐಎ 1207(ಗುಜ್)



ಶಿವಣ್ಣನಿಗೆ ಕೆಲಸ ಮಾಡುವಾಗ ಗಾಯವಾಯಿತು. ಏಕೆಂದರೆ ಅವನು ಮದ್ಯದ ಪ್ರಭಾವಕ್ಕೊಳಗಾಗಿದ್ದನು. ಹೀಗೆ ಸಂಭವಿಸಿದ ಊನತ್ವಕ್ಕೆ ನಷ್ಟ ಪರಿಹಾರ ನೀಡಲು ಮಾಲೀಕನು ಜವಾಬ್ದಾರನಲ್ಲ.



ಕೆಲಸದ ವೇಳೆಯಲ್ಲಿ
ಕೆಲಸಗಾರರ ಕಾರ್ಯ
ನಿಮಿತ್ತವಾಗಿಲ್ಲದಿದ್ದಾಗ
ಅಪಘಾತಗಳಿಂದಾಗಿ ಆಗುವ
ಗಾಯಕ್ಕೆ ಯಾವ
ನಷ್ಟ ಪರಿಹಾರವನ್ನೂ
ನೀಡುವ ಅಗತ್ಯವಿಲ್ಲ.

**ಪ್ರ. & ಉ.** **ಪ್ರ:** ಗಾಯವಾದ ಮೇಲೆ, ಕೆಲಸಗಾರನು ತನ್ನ ಹಳೆಯ ಹುದ್ದೆಯನ್ನು ಕಳೆದುಕೊಳ್ಳದೇ, ಅದೇ ಸಂಬಳವನ್ನು ಪಡೆಯುತ್ತಿದ್ದರೆ, ಆಗಲೂ ಮಾಲೀಕನು ನಷ್ಟ ಪರಿಹಾರ ನೀಡಬೇಕಾಗುತ್ತದೆಯೇ?

**ಉ:** ಇಂತಹುದು ಮದ್ರಾಸಿನ ಉಚ್ಚನ್ಯಾಯಾಲಯದ ತೀರ್ಪಿನಿಂದರಿಂದ (1989 11 LLJ 38) ಸ್ಪಷ್ಟವಾಗುತ್ತದೆ. ಇಲ್ಲಿ ನೌಕರನು ಬಲ ಕತ್ತಿನ ಭುಜದ ಮೇಲೆ ಮತ್ತು ತಲೆಯಲ್ಲಿ, ಇಲ್ಲೆಲ್ಲಾ ಗಾಯಗೊಂಡನು. ಬಲಕಿವಿ 100% ಕಿವುಡು ಆುತು ಮತ್ತು ಎಡಕಿವಿಯೂ ಭಾಗಶಃ ಶ್ರವಣಶಕ್ತಿ ಕಳೆದುಕೊಂಡಿತು. ಆಗ ನ್ಯಾಯಾಲಯವು ಹೀಗೆ ವಾಸ್ತವವನ್ನು ಅನುಮೋದಿಸಿತು – ಅವನು ಹಳೆಯ ಹುದ್ದೆಯನ್ನೇ ಹೊಂದಿದ್ದು, ಆ ಹಳೆಯ ಸಂಬಳ ಪಡೆಯುವುದು ಅವನನ್ನು ಈ ಅಧಿನಿಯಮದನ್ವಯ ಪರಿಹಾರಕ್ಕೆ ಅನರ್ಹನನ್ನಾಗಿ ಮಾಡುವುದಿಲ್ಲ. ಇದೇಕೆಂದರೆ, ಅವನು ಅನುಭವಿಸಿದ ಗಾಯದಿಂದಾಗಿ ಅವನಿಗೆ ಬೇರೊಬ್ಬ ಮಾಲೀಕನಲ್ಲಿ ಅಂತಹುದೇ ರೀತಿಯ ಇನ್ನೊಂದು ಕೆಲಸ ಸಿಗುವುದಕ್ಕೆ ತೊಂದರೆಗೀಡು ಮಾಡುತ್ತದೆ.

## ಕೆ. & ಕಾ.

ಈ ಕೆಳಕಂಡ ಸಂದರ್ಭಗಳಲ್ಲಿ ನಷ್ಟ ಪರಿಹಾರವು ಮಾಲೀಕನಿಂದ ನೀಡಲ್ಪಡುವುದಿಲ್ಲ:

- ಊನತ್ವವು ಮೂರಕ್ಕಿಂತ ಹೆಚ್ಚು ದಿನ ಇಲ್ಲದಿದ್ದಾಗ.
- ಊನತ್ವವು ಈ ಕೆಳಕಂಡವುಗಳಿಂದ ಉಂಟಾಗಿದ್ದಲ್ಲಿ:
    1) ಮಾದಕದ್ರವ್ಯಗಳು ಅಥವಾ ಮದ್ಯ;
    2) ಅವಿಧೇಯ ವರ್ತನೆ;
    3) ಮುಂಜಾಗ್ರತೆಯಾಗಿ ತಿಳಿಸಿದ ಸುರಕ್ಷತಾ ಉಪಾಯಗಳಿಗೆ ಅಸಡ್ಡೆ ತೋರುವುದು.

ಈ ವಿಭಾಗದಲ್ಲಿನ ಸ್ವಲ್ಪ ಅಸ್ಪಷ್ಟ ವಿಷಯುವೇನೆಂದರೆ, 'ಮದ್ಯ', 'ಮಾದಕದ್ರವ್ಯ', 'ಅವಿಧೇಯತೆ', ಅಥವಾ 'ಸುರಕ್ಷಣಾ ಉಪಾಯಗಳಿಗೆ ಅಸಡ್ಡೆ ತೋರುವುದು' ಎಂಬವುಗಳನ್ನು ವ್ಯಾಖ್ಯಿಸುವ ಯಾವುದೇ ವ್ಯಾಖ್ಯಾನಗಳು ಇಲ್ಲ.[7]


7 ಈ ಸಮರ್ಥನೆಗಳ ಜೊತೆಗೆ, ಕೆಲಸಗಾರ ನಿರ್ಲಕ್ಷ್ಯವಾಗಿದ್ದ ಎಂಬ ವಾದಕ್ಕೆ ಮಾಲೀಕರು ಆಗಾಗ್ಗೆ ಶರಣು ಹೋಗುತ್ತಾರೆ. ಇದಕ್ಕೂ ರಕ್ಷಣೋಪಾಯಗಳ ನೀಡಿಕೆಗೂ ಯಾವುದೇ ಸಂಬಂಧವಿಲ್ಲದಿರಬಹುದು. ಉದಾ: ಕೆಲಸಗಾರನು





ಪೌರಕಾರ್ಮಿಕರುಗಳು ಸತತ
ಬಗ್ಗಿ ಮಾಡುವ ಕೆಲಸಗಳಿಂದ
ಅನುಭವಿಸುವ ಬೆನ್ನು-
ಸಂಬಂಧೀ ತೊಂದರೆಗಳನ್ನು
ಔದ್ಯೋಗಿಕ ಖಾಯಿಲೆ
ಎಂದು ಪರಿಗಣಿಸಬಹುದು.

ಪುನಃ ಪುನಃ ಕಾಂಗ್ರೆಸ್
ಗಿಡದೊಡಗಿನ ಸಹವಾಸದಿಂದ
ಉಂಟಾಗುವ ಆಸ್ತಮಾ ಅನ್ನು ಕೂಡ
ಉದ್ಯೋಗಸಂಬಂಧೀ ಖಾಯಿಲೆ
ಎಂದು ಪರಿಗಣಿಸಬಹುದು.



ಮಾಲೀಕರುಗಳು ಈ ವಿಭಾಗದ ಅನುಕೂಲ ಪಡೆದು ನಷ್ಟ ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಬಹುದು. ಆದರೆ, ಕೆಲಸಗಾರನು/ರು, ಮಾದಕದ್ರವ್ಯ ಅಥವಾ ಮದ್ಯದ ಪ್ರಭಾವಕ್ಕೊಳಗಾಗಿದ್ದುದು ಅವನಿ/ರಿಗಾಗುವ ಘಾತದಿಂದ ಸಾವು ಅಥವಾ ಸಂಪೂರ್ಣ ಊನತ್ವ ಉಂಟಾದರೆ ಮಾಲೀಕನಿಗೆ ಇದು ಸಮರ್ಥನೆ ಅಲ್ಲ. ಎರಡನೆಯದಾಗಿ, ಅವಿಧೇಯತೆಯ ಪ್ರಸಂಗದಲ್ಲಿ ಅಂತಹ ಅವಿಧೇಯತೆಯು ಮೊಂಡುತನವಾಗಿರಬೇಕು, ಹಟಮಾರಿತನದ್ದು ಎಂದಾಗಿರಬೇಕು.

**ಕೆಲಸಗಾರನೊಬ್ಬನಿಗೆ 'ಉದ್ಯೋಗಸಂಬಂಧೀ ಖಾಯಿಲೆಗಳು' ಹೊಡೆತ ಕೊಟ್ಟ ಪ್ರಸಂಗಗಳಲ್ಲಿ ಮಾಲೀಕನು ನಷ್ಟ ಪರಿಹಾರ ನೀಡಲು ಬಾಧ್ಯನೇ?[ಕ. ೩(೨)]**

ಕೆಲಸಗಾರರು ತಾವಿರುವ ಉದ್ಯೋಗದಲ್ಲಿ, ಆ ನೌಕರಿಗೆ ಸಂಬಂಧಿಸಿದ ಹಾನಿಕರ ಕೆಲಸದ ವಾತಾವರಣಕ್ಕೆ ಒಡ್ಡಿಕೊಂಡ ಕಾರಣದಿಂದ ಉಂಟಾಗುವ ಖಾಯಿಲೆಗೆ ತುತ್ತಾಗುವುದನ್ನು ಸೇವೆಯಲ್ಲಿರುವಾಗಿನ "ಉದ್ಯೋಗ ಸಂಬಂಧೀ ಖಾಯಿಲೆ" ಎನ್ನುತ್ತಾರೆ.

ಕೆಲಸಗಾರನೊಬ್ಬನಿಗೆ ಅಂತಹ ಖಾಯಿಲೆ ಬಂದರೆ, ಆಗ ಮಾಲೀಕನು ಒಂದು ಷರತ್ತಿನ ಮೇಲೆ ನಷ್ಟ ಪರಿಹಾರ ನೀಡಲು ಬಾಧ್ಯನಾಗುತ್ತಾನೆ, ಏನೆಂದರೆ, ಕೆಲಸಗಾರನಿಗೆ ಮಾಲೀಕನಿಂದ ಸತತ ಆರು ತಿಂಗಳ ಅವಧಿಯಷ್ಟು ಅವಿರತ ನೌಕರಿ ನೀಡಲ್ಪಟ್ಟಿರಬೇಕು. ನೌಕರಿಯ ಅವಧಿಯಲ್ಲಿ ತಗಲುವ ಉದ್ಯೋಗಸಂಬಂಧೀ ಖಾಯಿಲೆಯೊಂದರ ಅರ್ಥವು ಈ ಅಧಿನಿಯಮದ ಉದ್ದೇಶಗಳಿಗೆ ಅಪಘಾತ ಎಂಬುದರ ಅರ್ಥದೊಳಗೇ ಬರುತ್ತದೆ. ಅಂತಹ ಖಾಯಿಲೆಯೊಂದು ತಗಲಿದ್ದ ಪ್ರಸಂಗದಲ್ಲಿ, ಅದಕ್ಕೆ ತುತ್ತಾದ ಕೆಲಸಗಾರನಿಗೆ ನಷ್ಟಪರಿಹಾರ ನೀಡಲು ಮಾಲೀಕನು ಬಾಧ್ಯನಾಗಿರಬೇಕಾಗುತ್ತದೆ. ನಷ್ಟಪರಿಹಾರ ಆಗಬೇಕಾದ ಉದ್ಯೋಗಸಂಬಂಧೀ ಖಾಯಿಲೆಗಳನ್ನು ಅಧಿನಿಯಮಕ್ಕೆ ಹೊಂದಿಕೊಂಡಂತಿರುವ ಪಟ್ಟಿಯೊಂದರಲ್ಲಿ ವಿವರಿಸಲಾಗಿದೆ. ನಿರ್ದಿಷ್ಟವಾಗಿ ಪರಿಚ್ಛೇದ 3ರ ಭಾಗ (A) ನಲ್ಲಿ [ಪರಿಶಿಷ್ಟ 5 ನೋಡಿ]

ಉದ್ಯೋಗ ಸಂಬಂಧೀ ಖಾಯಿಲೆಗಳ ಕೆಲವು ಉದಾಹರಣೆಗಳು:

(೧) ಭೌತಿಕ, ರಾಸಾಯನಿಕ ಅಥವಾ ಜೈವಿಕ ವಸ್ತುಗಳಿಂದ ಉಂಟಾಗುವ ಚರ್ಮದ ಖಾಯಿಲೆಗಳು.

7 ...ಕಾರ್ಯದ ವೇಳೆಯಲ್ಲಿ ನಿದ್ರೆ ಹೋಗಿರಬಹುದು, ಇಂತಹ ಪ್ರಸಂಗಗಳಲ್ಲಿ ಯಾವುದೇ ನಷ್ಟಪರಿಹಾರ ನೀಡಲಾಗುವುದಿಲ್ಲ ಅಥವಾ ಸ್ವಲ್ಪ ಕಡಿಮೆ ಪರಿಹಾರ ನೀಡಬಹುದಾಗಿದೆ.

(೨) ನಾರು, ಸೆಣಬು ಮತ್ತು ಸಿಸಾಲ್ ಧೂಳಿನಿಂದ ಉಂಟಾಗುವ ಶ್ವಾಸಕೋಶಸಂಬಂಧೀ ಖಾಯಿಲೆ (ಬೈಸ್ಸಿನಾಸಿಸ್ಸ್).

(೩) ಕೆಲಸ ಪ್ರಕ್ರಿಯೆಯಲ್ಲಿ ಸ್ವಾಭಾವಿಕವಾದ ಅಧಿಕೃತ ಶೀಘ್ರಕಾರೀ ವಾಹಕ (ಸೆನ್ಸಿಟೈಸಿಂಗ್ ಏಜೆಂಟ್ಸ್ /ಸ್ಪಂದಕ ರಾಸಾಯನಿಕ ಮಿಶ್ರಣಗಳು) ಗಳಿಂದಾಗಿ ಉಂಟಾಗುವ ಉದ್ಯೋಗಸಂಬಂಧೀ ಆಸ್ತಮಾ.

**ಚರ್ಚೆಯ ಅಂಶ:** ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆಯಾಧಾರಿತ ಪೌರಕಾರ್ಮಿಕರು ಎದುರಿಸುತ್ತಿರುವ ಔದ್ಯೋಗಿಕ ಹಾನಿಗಳು / ಉದೋಗಸಂಬಂಧೀ ಖಾಯಿಲೆಗಳು ಯಾವುವು?

## ಮಾಲೀಕನು ದಿವಾಳಿಯಾದರೆ ಏನು ಮಾಡುವುದು? – ಸಾಲಗ್ರಸ್ಥಗೊಂಡಂಥಾ ಪ್ರಕರಣಗಳಲ್ಲಿ ಬಾಧ್ಯತೆ (ಕ. 14)


ಕೆಲಸಗಾರನ ಮಾಲೀಕನು ನಷ್ಟಪರಿಹಾರ ನೀಡಲು ವಿಮಾಕರ್ತರೊಡನೆ ಒಪ್ಪಂದವೊಂದಕ್ಕೆ ಬಂದಿರುವಂಥ ಪ್ರಸಂಗದಲ್ಲಿ ಹಾಗೂ ಕಾಲಾಂತರದಲ್ಲಿ ಮಾಲೀಕನು ದಿವಾಳಿಯಾಗಿ ಹೋದಾಗ, ಅಪಘಾತವೊಂದೇನಾದರೂ ಸಂಭವಿಸಿದಲ್ಲಿ, ಮಾಲೀಕನ ಬಾಧ್ಯತೆಗಳೆಲ್ಲಾ ವಿಮಾಕರ್ತನಿಗೆ ವರ್ಗಾಯಿಸಲ್ಪಡುತ್ತದೆ ಮತ್ತು ದುಃಖತಪ್ತ ಕೆಲಸಗಾರನಿಗೆ ನಷ್ಟ ಪರಿಹಾರ ನೀಡುವ ಉದ್ದೇಶಗಳಿಗೆ ಅವರನ್ನು ಮಾಲೀಕರೆಂಬಂತೆ ಪ್ರತಿಪಾದಿಸಲಾಗುತ್ತದೆ. ಮಾಲೀಕನು ದಿವಾಳಿ ಆಗಿರಲಿ, ಇಲ್ಲದಿರಲಿ, ಇದು ಅನ್ವಯಿಸುತ್ತದೆ.


ಕೆಲಸಗಾರರ ಅಪಘಾತಗಳಿಂದಾಗಿ ಪಡೆಯುವ ದೇಣಿಗೆಗಳಿಗೆಂದು ವಿಮೆಗಳನ್ನು ಆತನು ಮಾಡಿಸಿದಲ್ಲಿ, ಆ ವಿಮೆ ಕಂಪನಿಯು ನಷ್ಟಪರಿಹಾರ ನೀಡಲು ಜವಾಬ್ದಾರಿಯಾಗುತ್ತದೆ.

ಸ್ವಾರಸ್ಯಕರ ವಿಷಯವೆಂದರೆ, ಮಾಲೀಕನು ವಿಮೆ ತೆಗೆದುಕೊಂಡಿರುವ ಪ್ರಸಂಗಗಳಲ್ಲಿ, ಮಾಲೀಕನೇ ವಿಮಾಕಂಪನಿಯ ವಿರುದ್ಧ ದೇಣಿಗೆಗಾಗಿ ಕೆಲಸಗಾರರ ಪರವಹಿಸುತ್ತಾನೆ. ಸಹಜವಾಗಿಯೇ, ಅವರು ಕೆಲಸಗಾರನಿಗೆ ನಷ್ಟಪರಿಹಾರ ನೀಡಲು ಜವಾಬ್ದಾರರಲ್ಲದ ಮೇಲೆ, ವಿಮಾಕಂಪನಿಯ ಮೇಲೆ ಜವಾಬ್ದಾರಿ ವರ್ಗಾವಣೆ ಆಗಿದೆ. ವಿಮೆ ತೆಗೆದುಕೊಳ್ಳುವ ಅಭ್ಯಾಸ ದೊಡ್ಡ ದೊಡ್ಡ ಗುತ್ತಿಗೆದಾರರು /ಕಂಪನಿಗಳವರುಗಳಲ್ಲಿ ಮಾತ್ರ ಸಾಮಾನ್ಯವಾಗಿದೆ.

ಇಷ್ಟಾದರೂ, ವಿಮೆ ಕಂಪನಿಗಳು ಕೆಲಸಗಾರನಿಗೆ ಅವನ ಮೂಲ ಮಾಲೀಕನಿಗಿಂತ ಹೆಚ್ಚೇನು ಬಾಧ್ಯರಾಗುವುದಿಲ್ಲ. ವಿಮಾಕರ್ತನ ಬಾಧ್ಯತೆ ಮೂಲ ಮಾಲೀಕನಿಗಿಂತ ಕಡಿಮೆ ಇದ್ದಲ್ಲಿ, ಆಗ ಕೆಲಸಗಾರನು ಉಳಿದ ಹಣವನ್ನು ಸಾಲಗಾರಿಕೆ ಪ್ರಕ್ರಿಯೆ ರೀತ್ಯಾ ಪಡೆಯಲು ಹಕ್ಕಿದೆ.

ನಷ್ಟ ಪರಿಹಾರವು ಅರ್ಧಮಾಸಿಕ ರೀತ್ಯಾ ನೀಡಲಾಗುತ್ತಿದ್ದರೆ, ವಿಮಾಕರ್ತರು ಅದನ್ನು ಒಂದು ಸೂಕ್ತ ಗಂಟುಮಾಡಿ, ಒಟ್ಟಾಗಿ ಅದನ್ನು ಪರಿಹಾರವಾಗಿ ಕೆಲಸಗಾರನಿಗೆ ನೀಡಬಹುದು.




**ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿ ಮಾಲೀಕರು ತಮ್ಮ ಬಾಧ್ಯತೆಗಳನ್ನು ವಿಮೆಮಾಡಿಸಿದ್ದಲ್ಲಿ, ವಿಮಾಕರ್ತನು ಘಾಸಿಗೊಂಡ ಕೆಲಸಗಾರರಿಗೆ ನಷ್ಟ ಪರಿಹಾರ ನೀಡಬೇಕಾಗುತ್ತದೆ.**

# ಅಧ್ಯಾಯ 3 ನಷ್ಟ ಪರಿಹಾರವನ್ನು ನಿರ್ಧರಿಸುವುದು

## ಕಾ.

### ನಷ್ಟಪರಿಹಾರದ ಮೊತ್ತವನ್ನು ಹೇಗೆ ನಿರ್ಧರಿಸುವುದು?

ಕೆಲಸಗಾರನಿಗೆ ಆದ ಗಾಯುಗಳಿಗೆ ಮಾಲೀಕನು ನೀಡಬೇಕಾದ ನಷ್ಟ ಪರಿಹಾರವು ಆ ಕೆಲಸಗಾರನು ಅನುಭವಿಸಿದ ಊನತ್ವದ ಮಟ್ಟದ ಮೇಲೆ ಅವಲಂಬಿಸಿರುತ್ತದೆ; ಹೆಚ್ಚು ತೀವ್ರತರ ಊನತ್ವಗಳು ಸಹಜವಾಗಿ ಹೆಚ್ಚಿನ ನಷ್ಟ ಪರಿಹಾರ ಪಡೆಯುತ್ತವೆ.

ಇದನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ:–

ನಷ್ಟಪರಿಹಾರ ನೀಡಬಹುದಾದ ಪ್ರಸಂಗಗಳು:

1. ಸಾವು
2. ಊನತ್ವ
   - ಅ) ಶಾಶ್ವತ ಪೂರ್ಣ ಊನತ್ವ
   - ಆ) ಶಾಶ್ವತ ಭಾಗಶಃ ಊನತ್ವ
   - ಇ) ತಾತ್ಕಾಲಿಕ ಊನತ್ವ
     - i) ತಾತ್ಕಾಲಿಕ ಪೂರ್ಣ ಊನತ್ವ
     - i) ತಾತ್ಕಾಲಿಕ ಭಾಗಶಃ ಊನತ್ವ

ಇದಕ್ಕೆ ಸೇರಿದಂತೆ, ಒಂದು ಮಾರ್ಗದರ್ಶಕ ತತ್ವವೆಂದರೆ, ಗಾಯಗೊಂಡ ಕೆಲಸಗಾರನ ವಯಸ್ಸು ಹೆಚ್ಚಾದಷ್ಟೂ, ನಷ್ಟಪರಿಹಾರ ಕಡಿಮೆ.

### ನಷ್ಟಪರಿಹಾರದ ಮೊತ್ತದ ಲೆಕ್ಕಾಚಾರ ಯಾವ ಆಧಾರದ ಮೇಲೆ ಮಾಡಲಾಗುತ್ತದೆ?

ನೀಡಲಾಗುವ ನಷ್ಟಪರಿಹಾರದ ಮೊತ್ತ ವೇತನಗಳ ಆಧಾರದ ಮೇಲೆ. ಕೆಲಸಗಾರರಿಬ್ಬರು ಅನುಭವಿಸಿರಬಹುದಾದ ಹಾನಿಯು ಒಂದೇ ರೀತಿಯದಾಗಿದ್ದರೂ ಅವರು ಪಡೆಯುವ ಸಂಬಳಗಳು ಭಿನ್ನಮಟ್ಟದ್ದಾಗಿದ್ದರೆ

ಅವರಿಗೆ ಸಲ್ಲುವ ನಷ್ಟಪರಿಹಾರದ ಮೊತ್ತಗಳೂ ಭಿನ್ನವಾಗಿರುತ್ತವೆ. ಈ ಅಧಿನಿಯಮದ ಅಡಿಯಲ್ಲಿ ನಷ್ಟಪರಿಹಾರವನ್ನು ಕೆಲಸಗಾರನು ಪಡೆಯುವ ತಿಂಗಳ ವೇತನದ ಮೇಲೆ ಲೆಕ್ಕಾಚಾರ ಮಾಡಲಾಗುತ್ತದೆ. ಅದು ದಿನವಹೀ, ವಾರರೀತ್ಯಾ ಅಥವಾ ತುಂಡುಗೆಲಸದ ಆಧಾರವಾಗಿಯೇ ನೀಡುತ್ತಿದ್ದರೂ ಅಧಿನಿಯಮದ ಪ್ರಕಾರ ತಿಂಗಳ ಸೇವೆಗೆ ನೀಡಲಾಗುವ ವೇತನಗಳ ಮೊತ್ತವೇ ಆಧಾರ. 'ತಿಂಗಳ ವೇತನಗಳು' ಲೆಕ್ಕ ಹಾಕುವ ವಿಧಾನಕ್ಕಾಗಿ ಪರಿಶಿಷ್ಟ 1 ನೋಡಿ.

**ಸೂಚನೆ: ವೇತನ** ಎಂಬುದು, ಕೆಲಸಗಾರನೊಬ್ಬನು ತನ್ನ ನೌಕರಿಯ ಸಂದರ್ಭದಲ್ಲಿ ಪ್ರಯಾಣ ಭತ್ಯೆ, ಕ್ಷೇಮ ನಿಧಿ ಅಥವಾ ಪಡೆಯಬಹುದಾದ ಇನ್ನಾವುದೇ ವಿಶೇಷ ಸವಲತ್ತುಗಳ ಹೊರತಾಗಿ ಇರುವ, ಹಣದ ರೀತಿಯಲ್ಲಿ ಅಳೆಯಬಹುದಾದ ಒಂದು ಹಕ್ಕು ಅಥವಾ ಪ್ರಯೋಜನ.

- **ತಿಳುವಳಿಕೆ ನೀಡಲಾಗಿದ್ದಲ್ಲಿ, ನಷ್ಟ ಪರಿಹಾರವನ್ನು ಕನಿಷ್ಠ ವೇತನದ ಆಧಾರದ ಮೇಲೆ ಲೆಕ್ಕಹಾಕಬೇಕು.**

  ಕೆಲಸಗಾರನೊಬ್ಬನು/ಳು 1948ರ ಕನಿಷ್ಟ ವೇತನ ಕಾಯ್ದೆಯ ಅಡಿಯಲ್ಲಿ ತಿಳಿಸಿರುವುದಕ್ಕಿಂತ ಕಡಿಮೆ ತಿಂಗಳ–ವೇತನ ಪಡೆಯುತ್ತಿದ್ದಲ್ಲಿ ನಷ್ಟ ಪರಿಹಾರ ಲೆಕ್ಕಮಾಡುವ ಸಲುವಾಗಿ ಅವಳು/ಅವನು ಕಾಯ್ದೆಯಲ್ಲಿ ತಿಳಿಸಿರುವಂತೆಯೇ ತಿಂಗಳ ವೇತನಗಳನ್ನು ಪಡೆಯುತ್ತಿದ್ದಾಳೆ/ನೆ ಎಂದು ಪರಿಗಣಿಸಲಾಗುತ್ತದೆ.

- **ಉದ್ಯೋಗಸಂಬಂಧೀ ಖಾಯಿಲೆಯಿಂದ ಬಳಲುತ್ತಿರುವ ಕೆಲಸಗಾರನ ವಿಷಯದಲ್ಲಿ ವೇತನಗಳನ್ನು ನಿರ್ಧರಿಸುವ ಬಗ್ಗೆ.**

  ಕರ್ನಾಟಕದ ಉಚ್ಚನ್ಯಾಯಾಲಯದ[8] ಪ್ರಕಾರ ಉದ್ಯೋಗಸಂಬಂಧೀ ಖಾಯಿಲೆ ಅಂಟಿಕೊಂಡ ಪರಿಸ್ಥಿತಿಯಲ್ಲಿ ನೌಕರಿಯನ್ನು ಬಿಟ್ಟ ಸಮಯದಲ್ಲಿ ಪಡೆಯುತ್ತಿದ್ದ ವೇತನಗಳ ಆಧಾರದ ಮೇಲೆ ನಷ್ಟಪರಿಹಾರವನ್ನು ಲೆಕ್ಕಹಾಕಬೇಕೇ ಹೊರತು ಆ ಉದ್ಯೋಗಸಂಬಂಧೀ ಖಾಯಿಲೆ ಅಂಟಿದಾಗಿನ ದಿನಾಂಕದಿಂದಲ್ಲ.

---

8. ಇದನ್ನು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿನ ದಾವೆ ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಹಾಗೂ ಹನೂಮಾನ್ (1992) ನಡುವೆ 1 ಐಐಒ1023 ದಾವೆಯಲ್ಲಿನ ತೀರ್ಪಿನಲ್ಲಿ ಎತ್ತಿಹಿಡಿಯಲಾಗಿದೆ.

## ಅ) ಒಂದು ಪಕ್ಷ ಕೆಲಸಗಾರನೊಬ್ಬ ಸತ್ತುಹೋದ, ಆಗ ಯಾರು ನಷ್ಟಪರಿಹಾರಕ್ಕೆ ಅರ್ಹರು ಮತ್ತು ಎಷ್ಟು ಪರಿಹಾರವನ್ನು ನೀಡಬೇಕು?

ಹಾನಿಯಿಂದ ಸಾವುಂಟಾದರೆ, ನಷ್ಟ ಪರಿಹಾರವನ್ನು ಆ ಕೆಲಸಗಾರರ ಅವಲಂಬಿತರಿಗೆ ನೀಡಬಹುದಾಗಿದೆ.

**ಅವಲಂಬಿತ ಎಂದರೆ ಯಾರು?**

ಅಧಿನಿಯಮದ ಕ. 2(ಡಿ) ಅಡಿಯಲ್ಲಿ 'ಅವಲಂಬಿತ' ಎಂಬುದರ ವ್ಯಾಖ್ಯೆ ಇದೆ. ಈ ವ್ಯಾಖ್ಯಾನವು ಬಹಳ ಮುಖ್ಯ ಮೌಲ್ಯವುಳ್ಳದ್ದು, ಏಕೆಂದರೆ ಅದು ಕೆಲಸಗಾರನು ತನ್ನ ನೌಕರಿಯ ಸಂದರ್ಭದಲ್ಲಿ ಸತ್ತರೆ, ನಷ್ಟ ಪರಿಹಾರವನ್ನು ಪಡೆಯಲು ಯಾರು ಅರ್ಹರು ಎಂಬುದನ್ನು ನಿರ್ಧರಿಸುತ್ತದೆ.

i) ಅ) ವಿಧವೆ

ಆ) 'ಅಪ್ರಾಪ್ತ ವಯಸ್ಕ', ಸ್ವಂತ/ದತ್ತು ಮಗ.

ಇ) ಅವಿವಾಹಿತ ಸ್ವಂತ/ದತ್ತು ಮಗಳು ಮತ್ತು;

ಈ) ಗಂಡನಿಲ್ಲದ ತಾಯಿ.

ಈ ಮೇಲಿನ ಎಲ್ಲಾ ಜನರು ಅಸುನೀಗಿದ ಕೆಲಸಗಾರನ ಅವಲಂಬಿತರಾಗಿ ಒಂದೇ ವರ್ಗದಡಿಯಲ್ಲಿ ಬರುತ್ತಾರೆ.

ii) ಕೆಲಸಗಾರನ ಗಳಿಕೆಯ ಮೇಲೆಯೇ ಸಂಪೂರ್ಣ ಅವಲಂಬಿತರಾಗಿದ್ದಲ್ಲಿ, ಆಗ ಇದರ ಜೊತೆಗೆ:

ಅ) ಮಗ ಅಥವಾ

ಆ) 18 ವರ್ಷ ತುಂಬಿರುವ, ಆದರೆ ಅಪಾಂಗೆಯಾದ ಅಥವಾ ಖಾಯಿಲೆಯುಕ್ತ ಮಗಳು

iii) ಕೆಲಸಗಾರನ ಮೇಲೆ ಸಂಪೂರ್ಣವಾಗಿ ಅಥವಾ ಭಾಗಶಃ ಅವಲಂಬಿತವಾಗಿದ್ದಾಗ, ಈ ಕೆಳಗಿನವರುಗಳನ್ನು ಅಸುನೀಗಿದ ಕೆಲಸಗಾರನ ಅವಲಂಬಿತರೆಂದು ಎಣಿಸಲಾಗುತ್ತದೆ.

ಅ) ವಿದುರನಾದವ;

ಆ) ಪೋಷಕ (ಗಂಡನನ್ನು ಕಳೆದುಕೊಂಡ ತಾಯಿ ಬಿಟ್ಟು)

ಇ) ಅಪ್ರಾಪ್ತ ವಯಸ್ಸಿನ ಕಾನೂನು ಸಮ್ಮತವಲ್ಲದ ಮಗ

ಈ) ಅವಿವಾಹಿತ ಅಥವಾ ವಿಧವೆಯಾದ, ದತ್ತು ಪಡೆದಿರುವ, ಸ್ವಂತ ಅಥವಾ ಕಾನೂನು ಸಮ್ಮತವಲ್ಲದ ಮಗಳು

ಉ) ಅಪ್ರಾಪ್ತ ವಯಸ್ಸಿನ ಸೋದರ;

ಊ) ಅವಿವಾಹಿತ ಸೋದರಿ;

ಋ) ವಿಧವೆಯಾದ ಸೋದರಿ, ಅಪ್ರಾಪ್ತ ವಯಸ್ಕಳಾಗಿದ್ದಲ್ಲಿ;

ಎ) ವಿಧವೆಯಾದ ಸೊಸೆ;

ಏ) ತೀರಿಹೋಗಿರುವ ಮಗನ ಅಪ್ರಾಪ್ತ ವಯಸ್ಕ ಮಗ/ಳು

ಐ) ಅನಾಥ ಮೊಮ್ಮಗ/ಳು

ಒ) ತೀರಿಕೊಂಡ ಕೆಲಸಗಾರನ ತಂದೆ-ತಾಯಿಗಳೂ ಸತ್ತುಹೋಗಿದ್ದಲ್ಲಿ ಅವನ ತಂದೆಯ ತಂದೆ/ಅವನ ತಂದೆಯ ತಾಯಿ.

**ವಿಮರ್ಶೆ:** 'ಅವಲಂಬಿತ' ಎಂಬ ಪದದ ವ್ಯಾಖ್ಯಾನ ಏನನ್ನು ತೋರಿಸುತ್ತದೆಂದರೆ, ಸತ್ತ ಕೆಲಸಗಾರನ ಎಲ್ಲಾ ಕಾನೂನುಬದ್ಧ ವಾರಸುದಾರರಿಗೂ ಅನುಕೂಲವಾಗುವ ಉದ್ದೇಶ ಹೊಂದಿಲ್ಲ ಎಂದು. ಬದಲಾಗಿ ತಮ್ಮ ದೈನಂದಿನ ಅವಶ್ಯಕತೆಗಳಿಗಾಗಿ ಕೆಲಸಗಾರನ ಗಳಿಕೆಗಳ ಮೇಲೆ ಸ್ವಲ್ಪ ಮಟ್ಟಿಗೆ ಅವಲಂಬಿಸಿರುವ ಸಂಬಂಧಿಕರ ಅನುಕೂಲಕ್ಕೆ ಮಾತ್ರ.

ಇಷ್ಟಾದರೂ, ಈ ಮೇಲಿನ (i) ನಮೂದಿಸಿರುವ ಎಲ್ಲಾ ಫಲಾನುಭವಿಗಳೂ ಕೇವಲ ಸತ್ತ ಕೆಲಸಗಾರನೊಂದಿಗಿನ ತಮ್ಮ ಸಂಬಂಧವನ್ನು ಪುಷ್ಟೀಕರಿಸಬೇಕೇ ಹೊರತು, ಆ ಕೆಲಸಗಾರನ ಗಳಿಕೆಗಳ ಮೇಲೆ ಅವಲಂಬಿತರಾಗಿದ್ದರೆಂದು ಪುಷ್ಟೀಕರಿಸುವ ಅಗತ್ಯ ಇಲ್ಲ.

**ಇವರಿಗೆ ಎಷ್ಟು ಪರಿಹಾರ ಕೊಡಬೇಕು?**

ಸಾವಿಗೀಡಾದ ಕೆಲಸಗಾರನ ತಿಂಗಳ ಸಂಬಳದ ಶೇಕಡಾ ಐವತ್ತರಷ್ಟನ್ನು 'ಪ್ರಸ್ತುತ ಅಪವರ್ತನ'ಕ್ಕೆ ಗುಣಾಕಾರ ಮಾಡಿದ ಮೊತ್ತ ಅಥವಾ ಎಂಭತ್ತು ಸಾವಿರ ರೂಪಾಯಿಗಳು, ಇವೆರಡರಲ್ಲಿ ಯಾವುದು ಹೆಚ್ಚೋ ಅದು ಅವಲಂಬಿತರುಗಳಿಗೆ ಸಲ್ಲುವ ನಷ್ಟಪರಿಹಾರವಾಗುತ್ತದೆ. ಸಾವಿಗೆ ಸಂಬಂಧಿಸಿದ ಕನಿಷ್ಠ ನಷ್ಟಪರಿಹಾರವು ಯಾವುದೇ ಕಾರಣಕ್ಕೂ ರೂ. 80,000/- ಗಳಿಗಿಂತ ಕಡಿಮೆ ಇರಬಾರದು.

'ಪ್ರಸ್ತುತ ಅಪವರ್ತನ' ಎಂಬುದನ್ನು ಅಧಿನಿಯಮದ ಪರಿಚ್ಛೇದ IV ರಲ್ಲಿ ತಿಳಿಸಲಾಗಿದೆ. (ಪ್ರಸ್ತುತ ಅಪವರ್ತನಗಳಿಗಾಗಿ ಪರಿಶಿಷ್ಟ 6 ನೋಡಿ). ಈ ಅಪವರ್ತನವು ವ್ಯಕ್ತಿಯ ಸತ್ತಾಗಿನ ವಯಸ್ಸನ್ನು ಅವಲಂಬಿಸಿರುತ್ತದೆ, ಅಂದರೆ, ವ್ಯಕ್ತಿಯು ನೌಕರಿಯ ವೇಳೆಯಲ್ಲಿ ಹಾಗೆ ಸತ್ತಿಲ್ಲದಿದ್ದರೆ ಆತನು ಮಾಡಬಹುದಾಗಿದ್ದ ನೌಕರಿಯ ವರ್ಷಗಳಷ್ಟು.

**ಉದಾಹರಣೆ:** 35 ವರ್ಷದ ಮುನಿಯಪ್ಪ ಕೆಲಸದ ವೇಳೆಯಲ್ಲಿ ಅಪಘಾತವಾಗಿ ಸಾವಿಗೀಡಾಗುತ್ತಾನೆ (ಅಂದರೆ ನೌಕರಿಯ ಅವಧಿಯಲ್ಲಿ). ಸಾವಿಗೀಡಾದ ಸಮಯದಲ್ಲಿ ಅವನ ತಿಂಗಳ ವೇತನ ರೂ.2,500/- ಇದ್ದಿತು. ಅಧಿನಿಯಮದ ಪರಿಚ್ಛೇದ IVರ ಪ್ರಕಾರ ಅವನಿಗೆ ಅನ್ವಯವಾಗುವ ಪ್ರಸ್ತುತ ಅಪವರ್ತನ ರೂ. 197.06 ಆಗುತ್ತದೆ. ಒಟ್ಟಾರೆ, ಅವನ ಅವಲಂಬಿತರಿಗೆ ನೀಡಬೇಕಾದ ನಷ್ಟಪರಿಹಾರದ ಮೊತ್ತ ನಿರ್ಧರಿಸುವ ಬಗೆ ಹೀಗೆ:

(i) ರೂ. 2500 ರ ಶೇಕಡಾ 50% = 1,250/-

(ii) 1,250 X ಪ್ರಸ್ತುತ ಅಪವರ್ತನ (ಅಂದರೆ 197.06) = ರೂ. 2,46,325/- (ನೀಡಬೇಕಾದ ಒಟ್ಟು ಪರಿಹಾರ)

ಕೆಲಸಗಾರನೊಬ್ಬನ ತಿಂಗಳ ವೇತನಗಳು ರೂ. 4,000/- ಕ್ಕೂ ಹೆಚ್ಚಿದ್ದಲ್ಲಿ, ಸಾವು ಅಥವಾ ಶಾಶ್ವತ ಊನತ್ವದ ಸಂದರ್ಭದಲ್ಲಿ ನಷ್ಟಪರಿಹಾರ ಲೆಕ್ಕ ಹಾಕಲು ಅದನ್ನು ರೂ.4,000/- ಎಂದೇ ಲೆಕ್ಕಕ್ಕೆ ತೆಗೆದುಕೊಳ್ಳುವುದು.

## ಕಾ.

### (ಬ) ಗಾಯಗೊಂಡ ಸಂದರ್ಭಕ್ಕೆ ನಷ್ಟಪರಿಹಾರವನ್ನು ಹೇಗೆ ಲೆಕ್ಕಹಾಕಬೇಕು?

### i) ಸಂಪೂರ್ಣ ಶಾಶ್ವತ ಊನತ್ವದಲ್ಲಿ ಅಂತ್ಯಗೊಳ್ಳುವ ಘಾತದ ಸಂದರ್ಭದಲ್ಲಿ ಎಷ್ಟು ನಷ್ಟಪರಿಹಾರ?

ಘಾತಕ್ಕೊಳಗಾಗಿ ಅದರಿಂದ ಸಂಪೂರ್ಣ ಶಾಶ್ವತ ಊನತ್ವ ಉಂಟಾದಾಗ, ಕೆಲಸಗಾರನು ತನ್ನ ತಿಂಗಳ ಸಂಬಳದ ಶೇಕಡಾ ಅರವತ್ತರಷ್ಟನ್ನು ಪ್ರಸ್ತುತ ಅಪವರ್ತನದಿಂದ ಗುಣಿಸಿದಷ್ಟು ಅಥವಾ, ತೊಂಭತ್ತು ಸಾವಿರ ರೂಪಾಯಿಗಳನ್ನು, ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಪಡೆಯಲು ಅರ್ಹನಾಗಿರುತ್ತಾನೆ. *ಸಂಪೂರ್ಣ ಶಾಶ್ವತ ಊನತ್ವದ ಸಂದರ್ಭದಲ್ಲಿ ಕನಿಷ್ಠ ನಷ್ಟಪರಿಹಾರವು ಯಾವ ಕಾರಣಕ್ಕೂ ರೂ.90,000/ –ಕ್ಕಿಂತ ಕಡಿಮೆ ಇರಕೂಡದು.*

**ಉದಾಹರಣೆ:** ಶಕೀಲಾ ಬಾನೋ, ಎಂಬ 35 ವರ್ಷದ ಕೆಲಸಗಾರಳೊಬ್ಬಳು ಕೆಲಸದ ಸಂದರ್ಭದಲ್ಲಿ (ಅಚಿಥಾ ನೌಕರಿಯು ಅವಧಿಯಲ್ಲಿ) ಅಪಘಾತಕ್ಕೊಳಗಾಗಿ ಶಾಶ್ವತ ಸಂಪೂರ್ಣ ಊನತ್ವಕ್ಕೊಳಗಾಗುತ್ತಾಳೆ.

ಆ ಸಮಯದಲ್ಲಿ ಅವಳ ತಿಂಗಳ ವೇತನ ರೂ. 2,500/-ವನ್ನು ಪಡೆಯುತ್ತಿದ್ದಳು. ಪಡೆಯಬೇಕಾದ ನಷ್ಟಪರಿಹಾರದ ಮೊತ್ತ ಹೀಗೆ ನಿಗದಿಯಾಗುತ್ತದೆ.

i) ರೂ. 2500ರ ಶೇಕಡಾ 60% = 1,500

ii) 1,500 X ಪ್ರಸ್ತುತ ಅಪವರ್ತನ (ಅಂದರೆ 197.06) = 2,95,590.00 (ನೀಡಬೇಕಾದ ಒಟ್ಟು ಪರಿಹಾರ)

**ಕಾ.**

### ii) ಶಾಶ್ವತ ಭಾಗಶಃ ಊನತ್ವವುಂಟಾಗುವ ಘಾತದ ಸಂದರ್ಭದಲ್ಲಿ ಎಷ್ಟು ಪರಿಹಾರ?

ಕೆಲಸಗಾರನ ಭಾಗಶಃ ಊನತ್ವದ ಸಂದರ್ಭದಲ್ಲಿ, ಆತನು ಪಡೆಯಬಹುದಾದ ಮೊತ್ತವೇನೆಂದರೆ, ಸಂಪೂರ್ಣ ಶಾಶ್ವತ ಊನತ್ವಕ್ಕಿರುವುದರ ಒಂದಷ್ಟು ಶೇಕಡಾ ದರದಷ್ಟು. ಈ ಶೇಕಡಾವಾರು ದರವನ್ನು ಅಧಿನಿಯಮದ ಪರಿಚ್ಛೇದದಲ್ಲಿ ನೀಡಲಾಗಿದೆ. ಅಧಿನಿಯಮದ ಪರಿಚ್ಛೇದ 1[9], ಭಾಗ IIರಲ್ಲಿ ಶಾಶ್ವತ ಭಾಗಶಃ ಊನತ್ವದಲ್ಲಿ ಕೊನೆಗೊಳ್ಳುವ ಘಾತಗಳ ಮತ್ತು ಅದಕ್ಕನುಗುಣವಾದ ಸಂಪಾದನಾ ಸಾಮರ್ಥ್ಯದಲ್ಲಾಗುವ ನಷ್ಟದ ಪಟ್ಟಿ ಇದೆ.

**ಉದಾಹರಣೆಗಳು:**

| *ಗಾಯಹಾನಿಯ ವಿವರಣೆ* | *ಸಂಪಾದನಾ ಸಾಮರ್ಥ್ಯದ ಶೇಕಡಾ (%) ನಷ್ಟ* |
|---|---|
| ಭುಜದ ಕೀಲಿನ ಅಂಗ ಛಿದ್ರಗೊಂಡಿರುವುದು | ೯೦ |
| ಒಂದು ಪಾದದ ಮೆಟಾ–ಟೋಸೋರ್ ಗಿಣ್ಣಿನ ಕೀಲಿನ ಮೂಲಕ ಎಲ್ಲಾ ಬೆರಳುಗಳ ನಾಶ | ೨೦ |

9 ಅಧಿನಿಯಮದ ಪರಿಚ್ಛೇದ 1ನ್ನು ಪರಿಶಿಷ್ಟ 3ಕ್ಕೆ ಅಳವಡಿಸಲಾಗಿದೆ.

ಇನ್ನ್ಯಾವುದೇ ತೊಡಕುಗಳಿಲ್ಲದಂತೆ
ಒಂದುಕಣ್ಣಿನ ನಾಶ, ಮತ್ತೊಂದು
ಸರಿಯಾಗಿದ್ದು ೪೦

ಸಂಬಂಧಿಸಿದ ಕೆಲಸಗಾರನ ವಯಸ್ಸಿಗೆ ತಕ್ಕಂತೆ ಪರಿಚ್ಛೇದ IV[10] ರಿಂದ ತೆಗೆದುಕೊಂಡ ಸೂಕ್ತ 'ಪ್ರಸ್ತುತ ಅಪವರ್ತನ ದೊಂದಿಗೆ' ಅನುಭವಿಸಿದ ಊನತ್ವದ ಶೇಕಡಾವರನ್ನು ಹೊಂದಿಸಿ ಶಾಶ್ವತ ಸಂಪೂರ್ಣ ಊನತ್ವಕ್ಕೆ ಈ ಮೇಲಿನ ಉದಾಹರಣೆಗಳ ರೀತ್ಯಾ ನಷ್ಟ ಪರಿಹಾರ ಲೆಕ್ಕ ಹಾಕಲಾಗುತ್ತದೆ.

## ಕಾ.

### iii) 'ಪರಿಚ್ಛೇದದಲ್ಲಿರದ ಘಾತ' ದಿಂದಾಗುವ ಶಾಶ್ವತ ಭಾಗಶಃ ಊನತ್ವಕ್ಕೆ ಪರಿಹಾರ ಲೆಕ್ಕಹಾಕುವ ಬಗ್ಗೆ :

ಘಾತದಿಂದಾಗುವ ಭಾಗಶಃ ಊನತ್ವವೊಂದು ಪರಿಚ್ಛೇದದಲ್ಲಿ ಪಟ್ಟಿ ಮಾಡಿಲ್ಲವಾದಾಗ ಲೆಕ್ಕಾಚಾರಕೆ ತೊಂದರೆ ಹುಟ್ಟಿಕೊಳ್ಳುತ್ತದೆ. ಆಗ, ಒಂದು ಸಮಂಜಸ ಶೇಕಡಾದರವನ್ನು, ಆಯುಕ್ತರು ನಿರ್ಧರಿಸಿದಂತೆ ನೀಡಬೇಕಾಗುತ್ತದೆ.

**ಉದಾಹರಣೆ:** ಗಿರಿಜಾ ಎಂಬ ಬಾಲಕಾರ್ಮಿಕಳೊಬ್ಬಳು ಬೆಂಗಳೂರಿನ ಸಮೀಪದ ಮಾಗಡಿಯ ರೇಷ್ಮೆ ನೇಯ್ಗೆ ಮತ್ತು ಸಂಗ್ರಹಣಾ ಘಟಕದಲ್ಲಿ ನೌಕರಿಗಿದ್ದು ಕೆಲಸದ ಸಂದರ್ಭದಲ್ಲಿ ರೇಷ್ಮೆಹುಳುಗಳ ಗೂಡುಗಳನ್ನು ಕುದಿಸಲು ಉಪಯೋಗಿಸುವ ಕುದಿವ ನೀರಿನ ಪಾತ್ರೆ ಅವಳ ಮೇಲೆ ಬಿದ್ದು ಮೂರನೇ ದರ್ಜೆಯ ಸುಟ್ಟಗಾಯಗಳು ಆದವು. ಅಂತಹ ಗಾಯದ ಬಗ್ಗೆ ಪರಿಚ್ಛೇದದಲ್ಲಿ ಉಲ್ಲೇಖವಿಲ್ಲ. ಇಲ್ಲಿ ಸಂಪಾದನಾ ಸಾಮರ್ಥ್ಯದ ನಷ್ಟವನ್ನು ನಿಗದಿಮಾಡುವುದಾದರೂ ಹೇಗೆ?

ಇಂತಹ 'ಪರಿಚ್ಛೇದದಲ್ಲಿ ಇಲ್ಲದ ಘಾತ'ಗಳ ಪ್ರಸಂಗದಲ್ಲಿ ಅನುಸರಿಸುವ ಪದ್ಧತಿ ಏನೆಂದರೆ, ವೈದ್ಯಕೀಯ ವೃತ್ತಿಯವರೊಬ್ಬರಿಂದ ಒಂದು ಪ್ರಮಾಣಪತ್ರ ಕೋರಿದರೆ ಆಗಿರುವ ಊನತೆಯ ಶೇಕಡಾದರವನ್ನು ಕುರಿತು ಅವರು ಒಂದು ಪ್ರಮಾಣ ಪತ್ರ ನೀಡುತ್ತಾರೆ. ಈ ಪ್ರಮಾಣಪತ್ರವು ಸಂಪಾದನಾ ಸಾಮರ್ಥ್ಯದ ನಷ್ಟವನ್ನು ನಿಗದಿ ಮಾಡಲು ಆಧಾರವಾಗಿದ್ದು, ಇದು ಕಾರ್ಮಿಕ ಆಯುಕ್ತರ ಕರ್ತವ್ಯವಾಗಿದೆ. ಆದ್ದರಿಂದ, ಸಂಪಾದನಾ ಸಾಮರ್ಥ್ಯದ ನಷ್ಟದ ಶೇಕಡಾವಾರು, ಅನುಭವಿಸಿರುವ ಊನತ್ವದ ಶೇಕಡಾವಾರಿಗೆ

10 ಅಧಿನಿಯಮದ ಪರಿಚ್ಛೇದ IVನ್ನು ಪರಿಶಿಷ್ಟ 6 ಎಂದಾಗಿ ಲಗತ್ತಿಸಲಾಗಿದೆ.

ಸಮನಾಗಿಲ್ಲದಿರಬಹುದು. ಕೆಲವು ಪ್ರಸಂಗಗಳಲ್ಲಿ ಅದು ಜಾಸ್ತಿ ಇರಬಹುದು, ಅದನ್ನು ಆಯುಕ್ತರೇ ನಿರ್ಧರಿಸುವುದು. ಈ ದಿಶೆಯಲ್ಲಿನ ಉಪಯುಕ್ತ ಪ್ರಕರಣಗಳೆಂದರೆ:

1. ಓರಿಯೆಂಟಲ್ ಇಂಶೂರೆನ್ಸ್ ಲಿಮಿಟೆಡ್ ವಿ/ರು. ಮೊಹಮದ್ ಹನೀಫ್, 1995 (6) Kar.LJ 696 ಇದರ ಕರ್ನಾಟಕ ಉಚ್ಚನ್ಯಾಯಾಲಯದ ತೀರ್ಪು.

2. ಪ್ರತಾಪ್ ನಾರಾಯಣ್ ಸಿಂಘ್ ವಿ/ರು. ಶ್ರೀನಿವಾಸ್ ಮತ್ತು ಇತರರು, 1976-1, ಎಲ್.ಎಲ್.ಜೆ. 235

3. ಕಾಶೀನಾಥ್ ಪ್ರಸಾದ್ ವಿ/ರು. ಟಾಟಾ ಎಂಜಿನೀರಿಂಗ್ ಮತ್ತು ಲೋಕೋಮೋಟೀವ್ ಕಂಪನಿ, (1998) 2 ಟಿ.ಎ.ಸಿ, 452 (ಎಲ್ಲಾ)

ಆದ್ದರಿಂದ ವೈದ್ಯರು ನೀಡುವ ಪ್ರಮಾಣಪತ್ರದಲ್ಲಿ ಈ ಎಲ್ಲಾ ಪ್ರಸ್ತುತ ವಿವರಗಳೂ ಇರುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಅವುಗಳಲ್ಲಿ ಇವೂ ಸೇರಿವೆ:

- ಘಾತದಿಂದಾಗಿ ಅನುಭವಿಸಿದ ಊನತ್ವದ ಶೇಕಡಾ ದರ.
- ಅನುಭವಿಸಿದ ಊನತ್ವವು ಶಾಶ್ವತ ರೀತಿಯದ್ದೇ ಎಂಬುದು.

ಪರಿಚ್ಛೇದದಲ್ಲಿರದ ಹೆಸರಿನ ಗಾಯ ಜರುಗಿದ ಪ್ರಸಂಗದಲ್ಲಿ, ಒಮ್ಮೆ ವೈದ್ಯರು ಶಾಶ್ವತ ಊನತ್ವದ ಶೇಕಡಾ ದರ ನಿಗದಿಪಡಿಸಿದರೆ, ಮೇಲೆ ತಿಳಿಸಿರುವ ಲೆಕ್ಕಾಚಾರದ ರೀತಿಯಲ್ಲಿ ಗಾಯಗೊಂಡ ಕೆಲಸಗಾರನ ನಷ್ಟ ಪರಿಹಾರದ ಮೊತ್ತವನ್ನು ಪಡೆಯಬಹುದು. ಉದಾಹರಣೆಯಲ್ಲಿ ಇರುವ 60% ಊನತ್ವದ ಸಂಖ್ಯೆಯನ್ನು ವೈದ್ಯರು ಶೇಕಡಾ ದರವನ್ನು ಮತ್ತು ಸಂಬಂಧಿಸಿದ ಕೆಲಸಗಾರನ ವಯಸ್ಸಿನಾಧಾರದಂತೆ ಪರಿಚ್ಛೇದ Iಗೆ ರಿಂದ ಪಡೆದ ಪ್ರಸ್ತುತ ಅಪವರ್ತನವನ್ನು ಬದಲಿಯಾಗಿ ಇಡಬಹುದು. (ಪರಿಚ್ಛೇದ IV ಕ್ಕಾಗಿ ಪರಿಶಿಷ್ಟ 6 ನೋಡಿ)

**ಉದಾಹರಣೆ:** ಮೇಲೆ ತಿಳಿಸಿದ ರೇಷ್ಮೆ ನೇಯ್ಗೆ ಘಟಕದಲ್ಲಿ ನೌಕರಿಗಿರುವ ಬಾಲಕಾರ್ಮಿಕಳಾದ ಗಿರಿಜಳಿಗೆ ಅವಳು ಅಪಘಾತದಿಂದ ಅನುಭವಿಸಿರುವ ಮೂರನೇ ದರ್ಜೆ ಸುಟ್ಟಗಾಯಗಳಿಂದಾಗಿ 28% ಊನತ್ವ ಅವಳದ್ದು ಎಂದು ಸರ್ಕಾರೀ ಆಸ್ಪತ್ರೆಯ ವೈದ್ಯರು ಪ್ರಮಾಣ ಪತ್ರ ನೀಡಿದರು. ಅವಳ ಸಂಬಳ ದಿನಕ್ಕೆ ರೂ.50/-. ಅಧಿನಿಯಮದ ಪ್ರಕಾರದಂತೆ, ನಷ್ಟ ಪರಿಹಾರ ಲೆಕ್ಕಾಚಾರಕ್ಕೆಂದು ಆ ನೌಕರಿಗೆ ಪ್ರಚುರಪಡಿಸಿದ ಕನಿಷ್ಟ ವೇತನದಂತೆ ಅವಳ ಸಂಬಳವಾಗುತ್ತದೆ. ಅಂದರೆ, ದಿನಕ್ಕೆ ರೂ.65/- ರಂತೆ, ತಿಂಗಳಿಗೆ 1950/

- ಆಗುತ್ತದೆ. 16 ವರ್ಷಕ್ಕಿಂತ ಚಿಕ್ಕವಳಾಗಿದ್ದು, ಅವಳಿಗೆ ವೇತನದ ಕೇವಲ 60% ಮಾತ್ರ ಅನ್ವಯಿಸುತ್ತದೆ. ಅಂದರೆ, ರೂ.1170/- (ರೇಷ್ಮೆ ಕೈಗಾರಿಕೆಗಿರುವ ಕನಿಷ್ಟ ವೇತನ ಆದೇಶದಂತೆ). ಪರಿಹಾರವನ್ನು ಈ ರೀತಿ ಲೆಕ್ಕಹಾಕಲಾಗುತ್ತದೆ:

i) ಊನತ್ವದ ಶೇಕಡಾ ದರ = 28 %

ii) ಕನಿಷ್ಠ ವೇತನ ಕಾಯ್ದೆಯ ಪ್ರಕಾರ ಸಂಬಳ = ರೂ.1950/-

iii) ಬಾಲಕಾರ್ಮಿಕರೆಂದು ಕೊಡಬೇಕಾದ 60% = ರೂ.1170/-

iv) 14 ವರ್ಷದ ಕೆಲಸಗಾರ ( ಅಂದರೆ ಗಿರಿಜಾಳ ವಯಸ್ಸು) ರಿಗೆ ಪ್ರಸ್ತುತ ಅಪವರ್ತನ = 228.54

v) ಆದ್ದರಿಂದ ಪರಿಹಾರವು: 28/100 X 1170 X 228.54 (ಪ್ರಸ್ತುತ ಅಪವರ್ತನ) = ರೂ. 74,869.70

ಈ ಅಪಘಾತವು 29, ಸೆಪ್ಟೆಂಬರ್ 1998 ರಲ್ಲಿ ಜರುಗಿತು, ಆದರೆ ನಷ್ಟ ಪರಿಹಾರವು ಡಿಸೆಂಬರ್ 2003 ರಲ್ಲಿ ಮಾತ್ರವೇ ನೀಡಲಾಯಿತು. ಆದ್ದರಿಂದ ಅಪಘಾತವಾದ ದಿನಾಂಕದಿಂದ ವಾರ್ಷಿಕ 1% ರಂತೆ ಬಡ್ಡಿಯನ್ನು ಈ ಕೆಳಗಿನಂತೆ ಲೆಕ್ಕ ಹಾಕಲಾಯಿತು.

i) 12 / 100 X 74,869.70 = ರೂ. 8984.36 (ಒಂದು ವರ್ಷಕ್ಕೆ ನೀಡಬೇಕಾದ ಬಡ್ಡಿ)

ii) ರೂ. 8984.36 X 5 (ವರ್ಷಗಳು) = ರೂ. 44,921/- (ಸೆಪ್ಟೆಂಬರ್ 1998ರಿಂದ ಸೆಪ್ಟೆಂಬರ್ 2003 ರವರೆಗೆ ಬಡ್ಡಿ) + ರೂ. 2246.09 (ಅಕ್ಟೋಬರ್ ನಿಂದ ಡಿಸೆಂಬರ್ ೨೦೦೪ ರವರೆಗಿನ ಬಡ್ಡಿ)

ಆದ್ದರಿಂದ ನೀಡಬೇಕಾದ ಒಟ್ಟು ಮೊತ್ತ (ಮೂಲಧನ + ಬಡ್ಡಿ) = ರೂ. 12,2036.70

## ಕೆ. & ಕಾ.

### iv) ತಾತ್ಕಾಲಿಕ ಊನತ್ವಕ್ಕೆ [ಕ.೪(2)ರಿಂದ 4 (4)ರ ವರೆಗೆ] ಈಡುಮಾಡುವ ಘಾತದ ಪ್ರಸಂಗದಲ್ಲಿ ಎಷ್ಟು ಪರಿಹಾರ?

ತಾತ್ಕಾಲಿಕ ಊನತ್ವದ ಸಂದರ್ಭದಲ್ಲಿ, ಕೆಲಸಗಾರರ ವೇತನಗಳ 25% ರಷ್ಟು ಹಣವನ್ನು ಅರ್ಧಮಾಸಿಕ ಅಂತರಗಳಲ್ಲಿ ನೀಡತಕ್ಕದ್ದು. ತಾತ್ಕಾಲಿಕ ಊನತ್ವಕ್ಕೆ ಪರಿಹಾರದ ಬಗ್ಗೆ ಉಪಕಲಮು 4(1) ರ ಉಪಪರಿಚ್ಛೇದ (ಡಿ)

ತಿಳಿಸಿಕೊಡುತ್ತದೆ. ಊನತ್ವವು 28 ದಿನಗಳಿಗಿಂತಲೂ ಹೆಚ್ಚು ದಿವಸಗಳದ್ದಾಗಿರುವಾಗ ಹಾಗೆ ಊನತೆ ಉಂಟಾದ ದಿನದಿಂದ 16ನೇ ದಿವಸದಲ್ಲಿ ಮಾಲೀಕನು ಹಣ ನೀಡಬೇಕಾಗುತ್ತದೆ.

ಊನತ್ವದ ಅವಧಿಯು 28 ದಿವಸಗಳಿಗಿಂತ ಕಡಿಮೆ ಆದರೆ 3 ದಿನಗಳು ಕಳೆದ ನಂತರ ಹಣವನ್ನು ಸಂದಾಯಮಾಡಬಹುದು. ಈ 3 ದಿನಗಳ ಕಾಯುವಿಕೆ ತಾತ್ಕಾಲಿಕ ಊನತ್ವವು ಎಷ್ಟು ಕಾಲ ಇರಬಹುದೆಂದು ಖಚಿತಮಾಡಿಕೊಳ್ಳುವುದಕ್ಕಾಗಿ; ಅದು 28 ದಿವಸಗಳಿಗೆ ಮುನ್ನ ಗುಣವಾಗಬಹುದೋ ಅಥವಾ ಇನ್ನೂ ಹೆಚ್ಚು ದಿನಗಳು ಬೇಕಾಗುವುದೋ ಹೇಗೆ ಎಂದು ತಿಳಿಯಲು.

ಈ ಅರ್ಧಮಾಸಿಕ ಅಥವಾ ಒಟ್ಟಾರೆ ಮೊತ್ತವನ್ನು ನೀಡುವ ಮುನ್ನ ಕೆಲಸಗಾರನಿಗೆ ಮಾಲೀಕನು ಇನ್ಯಾವ ಹಣವನ್ನಾದರೂ ನೀಡಿದ್ದಲ್ಲಿ, ಅದನ್ನು ಮೊತ್ತದಿಂದ ಕಳೆದು ನೀಡತಕ್ಕದ್ದು[ಕಲಮು 4 (2) (ಎ)]

**ಕ. ಸಂ.**

ಈ ಅನುಕೂಲವು ಕೆಲಸಗಾರ ಇನ್ನೂ ಚಿಕಿತ್ಸೆ ಪಡೆಯುತ್ತಾ ಸುಧಾರಣೆ-ಯಾಗುತ್ತಿರುವಾಗಲೇ ಹಾಕುವ ಅರ್ಜಿಯೊಂದರ ಪ್ರಸಂಗವನ್ನು ಮುಂದಾಲೋಚಿಸಿ ಮಾಡಲ್ಪಟ್ಟಿದೆ. ಬೆಂಗಳೂರಿನ ಕೆಲಸಗಾರರುಗಳಲ್ಲಿ ಇದು ಸಾಧ್ಯವಾದರೂ, ಸಾಮಾನ್ಯವಾಗಿ ಅವರು ಘಾತದಿಂದ ಚೇತರಿಸಿಕೊಂಡು ಕೆಲಸವೇ ಇಲ್ಲದ ಸ್ಥಿತಿಗೆ ಬಂದಾಗಲೇ ತಾತ್ಕಾಲಿಕ ಊನತ್ವದ ಪರಿಹಾರಕ್ಕಾಗಿನ ಅರ್ಜಿಗಳು ಹಾಕುವುದು ರೂಢಿ. ನಂತರ ಅವರು ಪರಿಹಾರ ಪಡೆದುಕೊಳ್ಳಲು ಅರ್ಜಿಯೊಂದನ್ನು ಹಾಕಿಕೊಳ್ಳುವುದು. ಇಚಿಥ ಪ್ರಸಂಗಗಳಲ್ಲಿ, ಕೆಲಸಗಾರನು ನೀಡಲು ಸಾಧ್ಯವಾಗುವ ಅಪಘಾತವಾದ ದಿನದಿಂದ ಕೊನೆಯ ವೈದ್ಯಕೀಯ ದಾಖಲಿನ (ಅಂದರೆ, ವೈದ್ಯರ ಔಷಧಿಸೂಚಿ ಚೀಟಿ, ಕೇಸ್ ಶೀಟ್, ಹೊರರೋಗಿ ಕೂಪನ್, ಇತ್ಯಾದಿ) ಮೇಲೆ ನಮೂದಿಸಿರುವ ದಿನಾಂಕದ ವರೆಗಿನ ಅವಧಿಗೆ ಅರ್ಧ-ಮಾಸಿಕಗಳ ಪರಿಹಾರ ಮೊತ್ತವನ್ನು ಒಟ್ಟಾಗಿ ಆಯುಕ್ತರು ನೀಡುತ್ತಾರೆ. ಜೊತೆಗೆ, ಆಯುಕ್ತರು 12% ಬಡ್ಡಿಯನ್ನು ನೀಡುತ್ತಾರೆ. *ಆದ್ದರಿಂದ, ಗಾಯಸಂಬಂಧೀ ಊನತ್ವದಿಂದ ಬಳಲುತ್ತಿದ್ದರೆ, ಕೆಲಸಗಾರರು ಈ ವೈದ್ಯಕೀಯ ದಾಖಲುಗಳನ್ನು ಕಾಪಾಡಿಟ್ಟುಕೊಳ್ಳಬೇಕು. ಏಕೆಂದರೆ,* ಸಾಕ್ಷ್ಯಾಧಾರಗಳ ಮೇಲೆಯೇ ಅವರಿಗೆ ಪರಿಹಾರ ಸಿಗುವುದು.

## ತಾತ್ಕಾಲಿಕ ಊನತ್ವವಾದಲ್ಲಿ ಹಣಸಂದಾಯದ ಪುನರಾವಲೋಕನ (ಕಲಂ 6)

ಅರ್ಧ–ಮಾಸಿಕ ವೇತನಗಳನ್ನು ನೀಡಬೇಕಾದ ತಾತ್ಕಾಲಿಕ ಊನತ್ವದ ಸಂದರ್ಭಗಳಲ್ಲಿ, ಅಂತಹ ಮೊತ್ತವನ್ನು ಪುನರಾವಲೋಕಿಸಲು ಆಯುಕ್ತರಿಗೆ ಅವಕಾಶವಿದೆ. ಎರಡೂ ಪಾರ್ಟಿಗಳಲ್ಲ್ಯಾರೊಬ್ಬರಾದರೂ ಸರಿ, ವೈದ್ಯಕೀಯ ತಪಾಸಣೆಕಾರರಿಂದ ದೃಢೀಕೃತ ಪ್ರಮಾಣಪತ್ರವನ್ನು ಲಗತ್ತಿಸಿ ಆಯುಕ್ತರ ಪುನರಾವಲೋಕನಕ್ಕೆ ಅರ್ಜಿ ಹಾಕಿಕೊಳ್ಳಬಹುದು. ಈ ಪುನರ್ ಪರಿಶೀಲನೆಯಿಂದಾಗಿ, ಕೆಲಸಗಾರನ ಪರಿಸ್ಥಿತಿಯನ್ನು ಅವಲಂಬಿಸಿ, ಅರ್ಧ–ಮಾಸಿಕ ವೇತನಗಳು ಹೆಚ್ಚಾಗಬಹುದು, ಕಡಿಮೆಯಾಗಬಹುದು ಅಥವಾ ಹಾಗೇ ಇರಬಹುದು. ಒಂದು ವೇಳೆ, ತಾತ್ಕಾಲಿಕ ಊನತ್ವವು ಶಾಶ್ವತ ಊನತ್ವಕ್ಕೆ ಎಡೆಯಾದರೆ, ಆಗ ಕೆಲಸಗಾರನಿಗೆ ನೀಡಬೇಕಾದ ಗಂಟು ಮೊತ್ತ ಪರಿಹಾರಕ್ಕಾಗಿ ಆದೇಶ ಹೊರಡಿಸುವ ಶಕ್ತಿ ಪುನರಾವಲೋಕನಕ್ಕಿದೆ. ಕೆಲಸಗಾರನಿಗೆ ಸಲ್ಲಬೇಕಾದ ಈ ಗಂಟು ಹಣ ಅವನು/ಳು ಈಗಾಗಲೇ ಪಡೆದಿರುವ ಅರ್ಧ–ಮಾಸಿಕ ಸಂದಾಯಗಳನ್ನು ಕಳೆದು ಉಳಿದದ್ದಾಗಿರುತ್ತದೆ.

ತಾತ್ಕಾಲಿಕ ಊನತ್ವದ ವಿಷಯದಲ್ಲಿ, ಅರ್ಧ–ಮಾಸಿಕ ಹಣಸಂದಾಯ–ವಾಗುತ್ತಿರುವ ಯಾವ ಕೆಲಸಗಾರನಿಗಾದರೂ ಆಗಿಂದಾಗ್ಗೆ ತಾನೇ ತಾನಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ.

ಕರ್ನಾಟಕ ಕೆಲಸಗಾರರ ನಷ್ಟಪರಿಹಾರ ನಿಯಮ 1966ರ ನಿಯಮ 17ರ ಪ್ರಕಾರ, ಕೆಲಸಗಾರನ ಗೃಹವು ತಪಾಸಣೆಯ ಜಾಗದಿಂದ ಬಲುದೂರವಿದ್ದರೆ, ಕೆಲಸಗಾರನು/ಳು ಅಪಘಾತವಾದ ದಿನದಿಂದ ಒಂದು ತಿಂಗಳೊಳಗೆ ಕೇವಲ ಎರಡು ಬಾರಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿಕೊಳ್ಳಬೇಕಾಗುತ್ತದೆ ಹಾಗೂ ಮುಂಬರುವ ತಿಂಗಳುಗಳಲ್ಲಿ ಒಮ್ಮೊಮ್ಮೆ ಮಾತ್ರ.

| ಅಧ್ಯಾಯ 4 | ಅಪಘಾತವೊಂದಾದಾಗ ನಷ್ಟ ಪರಿಹಾರ ಪಡೆದುಕೊಳ್ಳಲು ಅನುಸರಿಸಬೇಕಾದ ವಿಧಾನ |
|---|---|

## ಕೆ. & ಕಾ.

### 1. ಅಪಘಾತವಾದ ಬಗ್ಗೆ ಮಾಲೀಕನಿಗೆ ತಿಳಿವಳಿಕೆ ಪತ್ರ.

ಅಪಘಾತವೊಂದರ ಪ್ರಸಂಗದಲ್ಲಿ ಅಥವಾ ಅಪಘಾತವೊಂದರಿಂದ ಸಾವುಂಟಾದಾಗ, ಹಾಗೆ ಆದ ಅಪಘಾತದ ನಂತರ ಸಾಧ್ಯವಾದಷ್ಟು ಬೇಗ ಮಾಲೀಕನಿಗೆ ಅಥವಾ ಅದೇ ಸಂಸ್ಥೆಯಲ್ಲಿ ಕೆಲಸ ಮೇಲ್ವಿಚಾರಿಸಲು ನೌಕರಿಯಲ್ಲಿರುವ ಇನ್ನ್ಯಾವುದೇ ವ್ಯಕ್ತಿಗೆ ತಿಳಿವಳಿಕೆ ಪತ್ರವೊಂದನ್ನು ರವಾನಿಸಬೇಕು. ಸಂಕಟಕ್ಕೀಡಾದವರ ಕಡೆಯಿಂದ ಮಾಲೀಕರಿಗೆ ಅಂತಹ ತಿಳಿವಳಿಕೆಪತ್ರವನ್ನು, ಮಾಲೀಕನ ಕಚೇರಿ ಅಥವಾ ಮನೆಗೆ ರಿಜಿಸ್ಟರ್ ಪೋಸ್ಟ್ ಮೂಲಕ, ಅಥವಾ ಅಂತಹ ಪತ್ರವನ್ನು ಕಚೇರಿಯ ವಲಯಗಳಲ್ಲಿ ಇಡಲಾಗುವ ಸೂಚನಾಪುಸ್ತಕದಲ್ಲಿ (ತಿಳಿವಳಿಕೆ ಪುಸ್ತಕ) ಬರೆಯಬಹುದಾಗಿದೆ.

ಕೆಲವು ವರ್ಗದ ಸಂಸ್ಥೆಗಳು ನೌಕರರಿಗೆ ಸದಾಕಾಲ ಕೈಗೆ ಸಿಗುವಂಥ 'ಸೂಚನಾಪುಸ್ತಕ'ವೊಂದನ್ನು ಹೊಂದಿರುವುದು ರಾಜ್ಯಸರ್ಕಾರಕ್ಕೆ ಅವಶ್ಯಕವಾಗಿರಬಹುದಾಗಿದೆ.

ಅಂಥಾ ತಿಳಿವಳಿಕೆಪತ್ರವು ಈ ಕೆಳಗಿನವುಗಳನ್ನು ಹೊಂದಿರಬೇಕು:

ಅ) ಸತ್ತ ಅಥವಾ ಘಾತಕ್ಕೊಳಗಾದ ವ್ಯಕ್ತಿಯ ಹೆಸರು ಮತ್ತು ವಿಳಾಸ ಹಾಗೂ;

ಆ) ಘಾತದ ಕಾರಣವನ್ನು ಸಾಮಾನ್ಯ ಭಾಷೆಯಲ್ಲಿ ತಿಳಿಸಿರಬೇಕು, ಹಾಗೂ;

ಇ) ಹಾಗೆ ಘಾತವಾದ ದಿನಾಂಕ ನಮೂದಿಸಿರಬೇಕು.

**ಪ್ರ. & ಉ.**

**ಪ್ರ:** ಉಡುಪು ತಯಾರಿಸುವ ಸಂಸ್ಥೆಗಳು (ಇ.ಎಸ್.ಐ.ಕಾಯ್ದೆ ಅಡಿಯಲ್ಲಿ ಬಂದಿಲ್ಲದಂಥವು) ಈ ವರ್ಗಕ್ಕೆ ಸೇರುವವೇ?

**ಉ:** ಹೌದು, ಸೇರುತ್ತವೆ.

## ಕಾ.

**ಸಾವಿನಲ್ಲಿ ಅಂತ್ಯವಾಗುವ ಅಪಘಾತದ ವಿಷಯದಲ್ಲಿ ಆಯುಕ್ತರ ಅಧಿಕಾರಗಳು (ಕ. 10-ಎ)**

ಕೆಲಸಗಾರನೊಬ್ಬ ಅಪಘಾತವೊಂದರಿಂದ ಸಾವಿಗೀಡಾಗಿದ್ದರೆ ಯಾರೊಬ್ಬರಾದರೂ ಕಾರ್ಮಿಕ ಆಯುಕ್ತರಿಗೆ ಸುದ್ದಿ ನೀಡಬಹುದಾಗಿದೆ.

ಒಂದು ವೇಳೆ, ತೀವ್ರ ಅಪಘಾತವೊಂದು ಆಯುಕ್ತರ ಗಮನಕ್ಕೆ ಬಂದರೆ, ಅವರು ಮಾಲೀಕನಿಗೆ ಒಂದು ತಿಳಿವಳಿಕೆ ಪತ್ರವನ್ನು ಕಳುಹಿಸಲು ಅಧಿಕಾರ ಹೊಂದಿರುತ್ತರೆ (ಅಂದರೆ, ಯಾವುದೇ ಅರ್ಜಿ ಸ್ವೀಕರಿಸದೆಯೇ), ಅವನಿಂದ ಒಂದು ತಿಂಗಳೊಳಗಾಗಿ ಒಂದು ವಿವರಣೆ ಪತ್ರ ನೀಡುವಂತೆಯೂ ಕೇಳುತ್ತಾರೆ.

ಹಾಗೆ ತಿಳಿವಳಿಕೆಯನ್ನು ಕಳುಹಿಸಿದ ಮೂವತ್ತು ದಿನಗಳೊಳಗಾಗಿ, ಮಾಲೀಕನು ಅಂಥಾ ಸಾವಿಗೆ ಕಾರಣವಾದ ಪರಿಸ್ಥಿತಿಗಳನ್ನು ವಿವರಿಸಿ ಮತ್ತು ಆತನ ಅಭಿಪ್ರಾಯದಲ್ಲಿ, ನಷ್ಟಪರಿಹಾರವನ್ನು ಆಯುಕ್ತರಲ್ಲಿ ಠೇವಣಿಯಾಗಿ ಇಡಬೇಕೋ ಇಲ್ಲವೋ ಎಂದೂ ತಿಳಿಸಿ ಉತ್ತರ ನೀಡಬೇಕು.

ಮಾಲೀಕನಿಗೆ ತಾನು ಹಾಗೆ ಮಾಡುವುದು ತನ್ನ ಜವಾಬ್ದಾರಿ ಎಂದೆನಿಸಿದರೆ, ಆಗ ತಿಳಿವಳಿಕೆ ಪಡೆದ ಮೂವತ್ತು ದಿನಗಳೊಳಗಾಗಿ ನಷ್ಟ ಪರಿಹಾರವನ್ನು ಠೇವಣಿಯಾಗಿಡಬೇಕು. ಅವನಿಗೆ ಅದರ ವಿರುದ್ಧವಾಗೆನಿಸಿದರೆ, ಅಂತಹ ವಿನಾಯಿತಿಯನ್ನು ಯಾವ ಆಧಾರದ ಮೇಲೆ ಕೇಳುತ್ತಿದ್ದಾನೆಂದು ಆಯುಕ್ತರಿಗೆ ತಿಳಿಸಬೇಕಾಗುತ್ತದೆ.

ಅಂಥಾ ವಿನಾಯಿತಿ ಕೇಳಿಪಡೆದದ್ದೇ ಆಗಿದ್ದಲ್ಲಿ, ಆಗ ಸತ್ತ ಕೆಲಸಗಾರನ ಅವಲಂಬಿತರಿಗೆ ಆಯುಕ್ತರು ಇದನ್ನು ತಿಳಿಸಿ, ಆ ಅವಲಂಬಿತರು ನಷ್ಟ ಪರಿಹಾರವನ್ನು ಕೇಳಲು ಇಷ್ಟಪಡುತ್ತಾರೋ ಇಲ್ಲವೋ ಎಂಬುದನ್ನು ಅವರ ಮುಕ್ತ ನಿಲುವಿಗೇ ಬಿಟ್ಟು ಬಿಡುತ್ತಾರೆ.

ನೌಕರನೊಬ್ಬನ ಗಂಭೀರವಾದ ದೈಹಿಕ ಹಾನಿ ಅಥವಾ ಸಾವಿನ ಬಗ್ಗೆ ಮಾಲೀಕನು ತಿಳಿವಳಿಕೆ ಪತ್ರವನ್ನು ನೀಡಬೇಕಾಗುವಂಥ ಯಾವುದಾದರೂ ಕಾನೂನು ಚಾಲ್ತಿಯಲ್ಲಿದ್ದರೆ, ಮಾಲೀಕನು ಹಾಗೆ ಮಾಡಲು, ಘಟನೆ ನಡೆದ ಏಳು ದಿನಗಳೊಳಗಾಗಿ ಹಾನಿಯ ಅಥವಾ ಸಾವಿನ ಸನ್ನಿವೇಶವನ್ನು ವಿವರಿಸಿ ತಿಳಿವಳಿಕೆ ಪತ್ರವನ್ನು ಕಾರ್ಮಿಕರ ಆಯುಕ್ತರಿಗೆ[11] ನೀಡಬೇಕಾಗುತ್ತದೆ. ಈ ಕಾನೂನು ಕರ್ನಾಟಕದಲ್ಲಿ ಚಾಲ್ತಿಯಲ್ಲಿದೆ. ಈ ಕಿರುಹೊತ್ತಿಗೆಯಲ್ಲಿ ಆಯುಕ್ತರೆಂದು ಉಲ್ಲೇಖವಿರುವಲ್ಲೆಲ್ಲಾ ಅದು ಕೆಲಸಗಾರರ ನಷ್ಟಪರಿಹಾರ ದಾವೆಗಳನ್ನು ಕೈಗೆತ್ತಿಕೊಳ್ಳುವ ಕಾರ್ಮಿಕಾಧಿಕಾರಿ ಎಂಬುದಾಗಿ ತಿಳಿಯಬೇಕು.

## 2. ದಂಡಗಳು (ಅಧಿನಿಯಮದ ಅಡಿಯಲ್ಲಿ ತನ್ನ ಕರ್ತವ್ಯ ನಿರ್ವಹಿಸದ ಮಾಲೀಕನ ಮೇಲೆ)

ಮಾಲೀಕನೊಬ್ಬನು ಈ ಕೆಳಗಿನವುಗಳಲ್ಲಿ ವಿಫಲನಾದರೆ–

- ವಿವರಣಾಪತ್ರವೊಂದನ್ನು ಆಯುಕ್ತರಿಗೆ ರವಾನಿಸದಿದ್ದಲ್ಲಿ; ಅಥವಾ ತೀವ್ರ ಅಪಘಾತಗಳಾದಾಗ ಅವಶ್ಯಕವಾಗುವ ವರದಿ ಸಲ್ಲಿಸದೇ ಇದ್ದಲ್ಲಿ; ಅಥವಾ,
- ತಿಳಿವಳಿಕೆ ಪುಸ್ತಕ (ಸೂಚನಾ ಪುಸ್ತಕ) ಇಟ್ಟಿರದಿದ್ದಲ್ಲಿ

ಆಗ, ಅವನು/ಳು ಐದು ಸಾವಿರ ರೂಪಾಯಿಗಳವರೆಗೆ ಇರಬಹುದಾದ ಜುಲ್ಮಾನೆ ನೀಡಲು ಬಾಧ್ಯನಾ/ಳಾಗಿರುತ್ತಾನೆ/ಳೆ. ಆಯುಕ್ತರ ಮುನ್ನಾ ಅಪ್ಪಣೆ ಇಲ್ಲದೇ ಇಂತಹ ಕಾರ್ಯವಿಧಾನ ಮಾಡಲಾಗುವುದಿಲ್ಲ ಮತ್ತು ಆಯುಕ್ತರಿಗೆ ಇಂತಹ ಅಪರಾಧದ ಬಗ್ಗೆ ಅರಿವಾದ ಸಮಯದಿಂದ ಆರು ತಿಂಗಳೊಳಗಾಗಿಯಾದರೂ

---

11 ಈ ಅಧಿನಿಯಮದ ಅಡಿಯಲ್ಲಿ, ಭಾರತೀಯ ದಂಡಸಂಹಿತೆಯ ಪ್ರಕಾರ, ಆಯುಕ್ತರು ಒಬ್ಬ ಸಾರ್ವಜನಿಕ ಸೇವೆಯಲ್ಲಿರುವವರು ಮತ್ತು ಅವರನ್ನು ರಾಜ್ಯಸರ್ಕಾರವು ಅಧಿಕೃತ ಗೆಜ಼ೆಟ್‌ನಲ್ಲಿ ಪ್ರಚುರಪಡಿಸುವ ಮೂಲಕ ನೇಮಕ ಮಾಡಲಾಗುತ್ತದೆ. ರೂಢಿಯಲ್ಲಿ, ಕಾರ್ಮಿಕ ಅಧಿಕಾರಿಗಳನ್ನು ಕೈಗಾರಿಕಾ ವ್ಯಾಜ್ಯ ಕಾಯ್ದೆ ಅಡಿಯಲ್ಲಿ ಹೊಂದಾವಣಿಕೆ ಮತ್ತು ಅಧೀಕ್ಷಣೆಯ ಕೆಲಸ ಮಾಡಲು ನೇಮಿಸಿರುತ್ತಾರೆ. ಕರ್ನಾಟಕದಲ್ಲಿ, ರಾಜ್ಯ ಸರ್ಕಾರವು ಅಧಿಕೃತ ಗೆಜ಼ೆಟ್‌ನಲ್ಲಿ ತಿಳಿವಳಿಕೆ ಹೊರಡಿಸಿ ಕೆಲವು ಕಾರ್ಮಿಕ ಅಧಿಕಾರಿಗಳನ್ನು 'ಕೆಲಸಗಾರರ ನಷ್ಟ ಪರಿಹಾರಕ್ಕಾಗಿ ನಾಮಾಂಕಿತ ಆಯುಕ್ತರು' ಎಂದು ನೀಮಕ ಮಾಡುತ್ತದೆ. ಆದ್ದರಿಂದ ಅವರುಗಳು ಹಕ್ಕು ಪ್ರಾಧಿಕಾರವೊಂದರ ಹೆಚ್ಚುವರಿ ಕೆಲಸ ನಿರ್ವಹಿಸುತ್ತ, ಕೆಲಸಗಾರರ ನಷ್ಟ ಪರಿಹಾರ ಅಧಿನಿಯುಮದ ಅಡಿಯುಲ್ಲಿ ವಿಚಾರಣೆ ಮತ್ತು ಹಕ್ಕು ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಆಯುಕ್ತರನ್ನು ಒಂದು ನಿರ್ದಿಷ್ಟ ಸೂಚಿತ ಪ್ರದೇಶದ ಕೆಲಸಗಾರರ ನಷ್ಟ ಪರಿಹಾರಕ್ಕಾಗಿ ನೇಮಕ ಮಾಡಲಾಗಿರುತ್ತದೆ; ಬೆಂಗಳೂರು ಉತ್ತರ ಒಂದು ಸೂಚಿತ ಪ್ರದೇಶ, ಅಂತೆಯೇ ಬೆಂಗಳೂರು ದಕ್ಷಿಣ, ಇತ್ಯಾದಿ.

ಈ ವಿಷಯುವನ್ನು ನ್ಯಾಯಾಲಯುದ ಮುಂದೆ ತರದಿದ್ದಲ್ಲಿ, ಆಗ ನ್ಯಾಯಾಲಯುದಿಂದ ಇದರಲ್ಲಿ ಯಾವುದೇ ಅಪರಾಧವನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

### 3. ತೀವ್ರ ಅಪಘಾತದ ವಿಷಯುಗಳಲ್ಲಿ ಇನ್ನಷ್ಟು ಠೇವಣಿ ಕೇಳಲು ಆಯುಕ್ತರಿಗೆ ಅಧಿಕಾರವಿದೆ (ಕಲಂ 22–ಎ).

- ತೀವ್ರ ಅಪಘಾತದ ವಿಷಯುದಲ್ಲಿ, ನಷ್ಟ ಪರಿಹಾರಕ್ಕೆ ಠೇವಣಿ–ಯಾಗಿಟ್ಟಿರುವ ಮೊತ್ತವು ಸಾಕಾಗುವುದಿಲ್ಲ ಎಂದು ಆಯುಕ್ತರಿಗೆ ಅನ್ನಿಸಿದಾಗ, ಅವರು ತಮ್ಮ ಕಾರಣಗಳನ್ನು ತಿಳಿಸಿ ಮಾಲೀಕನಿಗೆ ತಿಳಿವಳಿಕೆಯೊಂದನ್ನು ರವಾನಿಸಬಹುದು ಮತ್ತು ಹಾಗೆ ಠೇವಣಿ ಇಟ್ಟ ಮೊತ್ತ ಸಮರ್ಪಕವಾಗಿ ಏಕೆ ಇಲ್ಲ ಎಂದು ಕಾರಣ ಕೇಳಬಹುದು.
- ಮಾಲೀಕನು ಕಾರಣ ತೋರಿಸಲು ವಿಫಲನಾದಲ್ಲಿ, ಆಯುಕ್ತರು ತೀರ್ಮಾನ ಕೈಗೊಳ್ಳಬಹುದು ಮತ್ತು ಮಾಲೀಕನಿಗೆ ಉಳಿದ ಹಣವನ್ನು ಕೊಡುವಂತೆ ಆದೇಶಿಸಬಹುದು.
- ಇಂಥ ವಿಷಯುಗಳಲ್ಲಿ ತೀರ್ಮಾನವು ಸಾಮಾನ್ಯವಾಗಿ ಅಧಿನಿಯುಮದ ಆಧಾರವಾಗಿರುತ್ತದೆ. (ಅಂದರೆ ವೇತನದ 50% ಕ್ಕೆ ಪ್ರಸ್ತುತ ಅಪವರ್ತನ ಗುಣಾಕಾರ ಮಾಡಿದು. "ಏಷ್ಟು ನೀಡಬೇಕು?" ಎಂಬ ವಿಭಾಗದಲ್ಲಿನ ಉದಾಹರಣೆ ನೋಡಿ.)

## ಕೆ. & ಕಾ.

### 4. ವೈದ್ಯಕೀಯು ತಪಾಸಣೆ (ಕಲಂ.11)

ಸಾವು ಸಂಭವಿಸುವಂಥಾ ಘಾತದ ವಿಷಯುದಲ್ಲಿ, ಮಾಲೀಕನಿಗೆ ಅಪಘಾತದ ತಿಳಿವಳಿಕೆ ಪತ್ರ ರವಾನೆಯಾಗಿದ್ದಲ್ಲಿ, ನೌಕರನು ಯಾವ ಶುಲ್ಕವಿಲ್ಲದೇ, ಬಿಟ್ಟಿಯಾಗಿ ವೈದ್ಯಕೀಯು ತಪಾಸಣೆಗೆ ಒಳಗಾಗುವಂತೆ ಮಾಲೀಕನು ನೋಡಿಕೊಳ್ಳತಕ್ಕದ್ದು. ಘಾತಕ್ಕೊಳಗಾದ ಕೆಲಸಗಾರನು ಅಂತಹ ವೈದ್ಯಕೀಯು ತಪಾಸಣೆಗೆ ಒಳಗಾಗಲು ತನ್ನನ್ನು ತೊಡಗಿಸಿಕೊಳ್ಳಬೇಕು.

- ಕೆಲಸಗಾರನು ನಿರ್ದಿಷ್ಟವಾಗಿ ಒಪ್ಪಿಕೊಂಡದ್ದನ್ನು ಹೊರತಾಗಿ, ತಪಾಸಣಾ ಸಮಯು ಸಂಜೆ 7ರಿಂದ ಬೆಳಿಗ್ಗೆ 6ರವರೆಗೆ ಆಗಿರಬಾರದು.
- ಕೆಲಸಗಾರನ ಪರಿಸ್ಥಿತಿಯು ತನ್ನ ಮನೆಯುನ್ನು ಬಿಟ್ಟು ಹೊರಡುವಷ್ಟು ಸಲಹಾರ್ಹವಲ್ಲದಾದಾಗ ಅಥವಾ ಅಸಾಧ್ಯವಾದಾಗ, ಮಾಲೀಕನು

ಅವನ ಮನೆಯನ್ನು ಬಿಟ್ಟು ಬೇರೆ ಯಾವ ಜಾಗದಲ್ಲಿಯೂ ತಪಾಸಣೆಗೆ ಒಳಗಾಗುವಂತೆ ಆತನಿಗೆ ಬಲವಂತ ಮಾಡಲಾಗದು.

- ಮಹಿಳಾ ಕೆಲಸಗಾರಳೊಬ್ಬಳನ್ನು ಪುರುಷ ವೈದ್ಯರು ತಪಾಸಣೆ ಮಾಡುವಾಗ ಆಕೆಯು ತನ್ನೊಡನೆ ಮತ್ತೊಬ್ಬ ಮಹಿಳೆ ಇರುವಂತೆ ಕೇಳುವ ಹಕ್ಕಿದೆ. (ನಿಯಮ 19)

ಕೆಲಸಗಾರನು ಅರ್ಹ ವೃತ್ತಿಪರ ವೈದ್ಯರೊಬ್ಬರಿಂದ ತನ್ನನ್ನು ತಾನೇ ವೈದ್ಯಕೀಯ ತಪಾಸಣೆಗೆ ಒಳಪಡಿಸಿಕೊಳ್ಳಲು ಒಪ್ಪದಿದ್ದರೆ, ಆಗ ತನ್ನ ಮಾಲೀಕನಿಂದ ಪಡೆಯುವ ನಷ್ಟ ಪರಿಹಾರದ ಹಕ್ಕನ್ನು ಅವನು ಕಳೆದುಕೊಳ್ಳುತ್ತಾನೆ, ಹಾಗೂ ಅವನು ತಪಾಸಣೆಗೆ ಮುಂದೆ ಬರಲು ಒಪ್ಪದವರೆವಿಗೂ ಅವನ ಹಕ್ಕನ್ನು ಅಮಾನತ್ತಿನಲ್ಲಿಡಲಾಗುತ್ತದೆ. ಒಂದು ವೇಳೆ ಕೆಲಸಗಾರನು ತಪಾಸಣೆಗೆ ತೊಡಗಿಕೊಳ್ಳದೆ ಅದಕ್ಕೆ ಮುನ್ನವೇ ಸತ್ತು ಹೋದರೆ, ಆ ಕೆಲಸಗಾರನ ಅವಲಂಬಿತರಿಗೆ ಪರಿಹಾರ ನೀಡಲು ಆಯುಕ್ತರು ಆದೇಶವೊಂದನ್ನು ಹೊರಡಿಸಬಹುದು.

**ಸೂಚನೆ:** ಮಾಲೀಕನು ಕೆಲಸಗಾರನನ್ನು ವೈದ್ಯಕೀಯ ತಪಾಸಣೆಗೆ ಕರೆದೊಯ್ಯದಿದ್ದಲ್ಲಿ, ಅಥವಾ ಕೆಲಸಗಾರನಿಗೆ ಮಾಲೀಕನ ವೈದ್ಯರ ವೈದ್ಯಕೀಯ ಪ್ರಮಾಣಪತ್ರವು ತೃಪ್ತಿಕರವಾಗದಿದ್ದರೆ, ಕೆಲಸಗಾರನು ಪ್ರಮಾಣಪತ್ರಕ್ಕಾಗಿ ಇನ್ಯಾವುದೋ ನೋಂದಣಿಯಾದ ವೃತ್ತಿಪರ ವೈದ್ಯರ ಹತ್ತಿರ ಹೋಗಬಹುದು. ವಿವಿಧ ಶೇಕಡದರಗಳಾಗಿ ಊನತ್ವವನ್ನು ಪ್ರಮಾಣೀಕರಿಸಿದ್ದ ಪಕ್ಷದಲ್ಲಿ, ಕೆಲಸಗಾರನ ಸಂಪಾದನಾ ಸಾಮರ್ಥ್ಯದ ನಷ್ಟವನ್ನು ತೀರ್ಮಾನಿಸುವಾಗ, ಏನನ್ನು ಅವಲಂಬಿಸಬೇಕೆಂದು ನಿರ್ಧರಿಸಲು ಹಕ್ಕುಪಡೆಯುವ ನಡಾವಳಿಯಲ್ಲಿ ತೊಡಗಿರುವ ಕಾರ್ಮಿಕ ಅಧಿಕಾರಿಗೆ ಬಿಟ್ಟದ್ದು.

**ಕೆ. & ಕಾ.**

## 5. ಒಪ್ಪಂದವೊಂದಕ್ಕೆ ಬರಲು ಆಯ್ಕೆ(ಕಲಂ. 28)

ಮಾಲೀಕ ಮತ್ತು ನೌಕರ, ಒಪ್ಪಂದವೊಂದಕ್ಕೆ ಬರುವ ಆಯ್ಕೆ ಇದೆ. ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿ ಬರುವ ಒಪ್ಪಂದಗಳಿಗೆ ಸಂಬಂಧಿಸಿದಂತೆ ಇರುವ ಅವಕಾಶಗಳು ನ್ಯಾಯಾಲಯದ ಯಾವುದೇ ವಿಚಾರಣೆ ನಡೆಯುವ ಮುನ್ನವೇ ಎರಡೂ ಪಂಗಡದವರೂ ಒಪ್ಪಂದವೊಂದಕ್ಕೆ ಬಂದಿರುವಂಥಾ ಪ್ರಸಂಗಗಳಿಗೆ ಸಂಬಂಧಿಸಿದೆ. ನಷ್ಟ ಪರಿಹಾರದ ಪ್ರಮಾಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ಯಾವುದೇ ಅಸ್ಥಿತ್ವದಲ್ಲಿರುವ ವ್ಯಾಜ್ಯದ ಪಾರ್ಟಿಗಳ ನಡುವೆ ಆದ ಯಾವ ಒಪ್ಪಂದಕ್ಕೂ

ಈ ಅವಕಾಶಗಳು ಉಲ್ಲೇಖಿಸಿಲ್ಲ. ಈ ಒಪ್ಪಂದಗಳು ಈ ಕೆಳಗಿನವುಗಳಿಂದಾಗಿ ಇರಬಹುದು–

- ಪರಿಹಾರವಾಗಿ ನೀಡಬಹುದಾದ ಯಾವುದೇ ಗಂಟು ಮೊತ್ತದ ವ್ಯವಹಾರ ಇತ್ಯರ್ಥಗೊಳಿಸುವುದು [ಅಂದರೆ, ಮಾಲೀಕನ ಅರ್ಧ–ಮಾಸಿಕ ಸಂದಾಯಗಳ ಬಾಧ್ಯತೆಯನ್ನು ಪರಿವರ್ತಿಸಲು ಗಂಟು ಹಣ (ಒಂದೇ ಬಾರಿಗೆ) ನೀಡುವುದು, ಅಥವಾ ಅದರ ಅದಲು–ಬದಲು ರೀತಿಯಾಗಿ ಮಾಡುವುದು] ಅಥವಾ;
- ಒಬ್ಬ ಮಹಿಳೆಗೆ ಅಥವಾ ವ್ಯಕ್ತಿಯೊಬ್ಬರಿಗೆ ಯಾವುದೇ ಕಾನೂನುವಿಶ್ಲೇತ ಊನತ್ವದ [12] ಅಡಿಯಲ್ಲಿ ನೀಡಬಹುದಾದ ಯಾವುದಾದರೂ ನಷ್ಟ ಪರಿಹಾರ.

ಇಂಥಾ ಸಂದರ್ಭದಲ್ಲಿ ಆಯುಕ್ತರಿಗೆ ಜ್ಞಾಪನಪತ್ರವೊಂದನ್ನು ಕಳುಹಿಸಬೇಕು, ಅವರು ಅಂತಹ ಜ್ಞಾಪನದ ಅಪ್ಪಟತೆ ಬಗ್ಗೆ ಪರೀಕ್ಷಿಸಿದ ನಂತರ, ಸೂಚಿಸಿದ ರೀತಿಯಲ್ಲಿ ಅದನ್ನು ನೋಂದಣಿ ಮಾಡಿಸಬೇಕು.

ಒಪ್ಪಂದ ಪತ್ರದಲ್ಲಿ ಮಾಲೀಕನು ಮೊತ್ತವನ್ನು ಅನುಕಂಪದಿಂದಾಗಿ ಮಾತ್ರವೇ ನೀಡಿರುವ ಹಣ ಎಂದು ಉಲ್ಲೇಖಿಸಿದ್ದರೆ ಮತ್ತು ರಸೀದಿಯ ಭಾಷೆಯೂ ಆ ಹಣವನ್ನು ನಷ್ಟಪರಿಹಾರ ಸರಿದೂಗಿಸಲು ನೀಡಲಾದದ್ದು ಎಂದು ತೋರದಿದ್ದರೆ, ಆಗ ನಷ್ಟ ಪರಿಹಾರ ನೀಡಬೇಕಾದ ಮಾಲೀಕನ ಬಾಧ್ಯತೆ ಇನ್ನೂ ಹಾಗೆ ಅಸ್ಥಿತ್ವದಲ್ಲಿರುತ್ತದೆ.[13]

**ಒಪ್ಪಂದಗಳನ್ನು ನೋಂದಾಯಿಸುವುದು ಮತ್ತು ಹಾಗೆ ಮಾಡದಿರುವುದರ ಪರಿಣಾಮಗಳು (ಕಲಂ 29)**

ಮಾಲೀಕನು ಇಂಥಾ ಒಪ್ಪಂದಗಳನ್ನು ಆಯುಕ್ತರಲ್ಲಿ ನೋಂದಾಯಿಸಿ–ಕೊಳ್ಳಬೇಕೆಂದು ಕಾನೂನು ಹೇಳುತ್ತದೆ. ತಪ್ಪಿದರೆ, ಮಾಲೀಕನು ಪೂರ್ಣ ಮೊತ್ತವನ್ನು ನೀಡಲು ಜವಾಬ್ದಾರನಾಗುತ್ತಾನೆ ಹಾಗೂ ಇತ್ಯರ್ಥ / ಒಪ್ಪಂದದ

12 ಕಾನೂನುವಿಶ್ಲೇತ ಊನತ್ವ ಎಂಬುದು ಜಾರಿಗೆ ತರಬಹ್ಮದಾದಂತಹ, ಕಾನೂನಿನ ಚೌಕಟ್ಟಿಗೆ ನಿಲುಕುವ ಒಂದು ಊನತ್ವ. ಕಾನೂನುವಿಶ್ಲೇತ ಊನತ್ವದ ಅಡಿಯಲ್ಲಿರುವ ವ್ಯಕ್ತಿಯೊಬ್ಬನೆಂದರೆ ತನ್ನನ್ನೇ ಕಾನೂನಿಗೆ ಪ್ರತಿನಿಧಿಸಿಕೊಳ್ಳಲು ಸಾಧ್ಯವಾಗದಂಥವನು. ಉದಾ: ಅಪ್ರಾಪ್ತ ವಯಸ್ಕ ಅಥವಾ ಮಾನಸಿಕ ಅಸ್ವಸ್ಥ ವ್ಯಕ್ತಿ.

13 ಗುಜರತ್ ಉಚ್ಚನ್ಯಾಯಾಲಯ, ಬಾಯಿ ಚಂಚಲ್ ಬೆನ್ ವಿ/ರು. ಬುರ್ರೋಜ್ಜಿ ದಿನ್‌ಶಾ ಸೇತ್ನಾ (1969) 2 ಎಲ್.ಎಲ್.ಜೆ. 357ನಲ್ಲಿ ಎತ್ತಿ ಹಿಡಿದ ತೀರ್ಪಿನಂತೆ.

ಅಡಿಯಲ್ಲಿ ಉಳಿದ ಹಣವೇನಾದರೂ ಇದ್ದರೆ ಅದನ್ನು ಕಿಂಚಿತ್ತೂ ಕಡಿಮೆ ಮಾಡುವ ಹಾಗಿಲ್ಲ. ಮಾಲೀಕನು ಅಂತಹ ಜ್ಞಾಪನವೊಂದನ್ನು ನೋಂದಾಯಿಸಲು ವಿಫಲನಾದರೆ, ಅಧಿನಿಯಮವು ಅನುಕೂಲ ನೀಡುವ ಎಲ್ಲಾ ಅವಕಾಶಗಳ ರೀತಿಯೂ ನಷ್ಟ ಪರಿಹಾರದ ಸಂಪೂರ್ಣ ಮೊತ್ತವನ್ನು ಮಾಲೀಕನು ಕೊಡುವಂತೆ ಆಯುಕ್ತರು ಆದೇಶ ಮಾಡಬಹುದು.

ಒಪ್ಪಂದದ ಅಡಿಯಲ್ಲಿ ಮಾಲೀಕನಾದವನು ಅಧಿನಿಯಮದ ಅವಕಾಶದಂತೆ ಸಂದಾಯವಾಗಬೇಕಾದ ಮೂಲ ಮೊತ್ತಕ್ಕಿಂತ ಕಡಿಮೆ ನೀಡಲು ಸಾಧ್ಯವಿಲ್ಲ. ಹಾಗೆ ಅವನು/ಳು ಮಾಡಿದರೆ, ಒಪ್ಪಂದವು ನೋಂದಾವಣೆಯಾಗುವುದಿಲ್ಲ. ಮಾಲೀಕನಿಂದ ಬಡ್ಡಿ ಮತ್ತು ದಂಡದ ರೀತಿಯಲ್ಲಿ ಮಾತ್ರ ರಾಜಿ ಮಾಡಿಕೊಳ್ಳಲು ಸಾಧ್ಯ.

## ಕ. ಸಂ.

ರೂಢಿಯಲ್ಲಿ, ಕರ್ನಾಟಕದಲ್ಲಿ ಅನೇಕ ಬಾರಿ ಮೂಲ ಧನವನ್ನೇ ಸಂದಾಯ–ಮಾಡಿರುವುದಿಲ್ಲ ಮತ್ತು ಅಂಥಾ ಒಪ್ಪಂದಗಳು ಆಯುಕ್ತರಲ್ಲಿ ನೋಂದಣಿ–ಗೋಸ್ಕರ ಸಲ್ಲಿಸಿರದೇ ಇರುವುದರಿಂದ ಅವೂ ಕೂಡ ಪರಾಮರ್ಶೆಗೆ ಬರುವುದಿಲ್ಲ. ಈ ಅಭ್ಯಾಸವು ನಿರ್ಮಾಣ ಕೈಗಾರಿಕೆಯಲ್ಲಿ ಸರ್ವೇ ಸಾಮಾನ್ಯ. ಬೆಂಗಳೂರಿನಲ್ಲಿ ಆಯುಕ್ತರ ಮುಂದೆ ಇಟ್ಟ ಒಪ್ಪಂದದ ಪ್ರಸಂಗಗಳಲ್ಲಿ 'ತೀವ್ರತೆಯ' ಘಟನೆಗಳಲ್ಲಿ ನಷ್ಟ ಪರಿಹಾರದ ಮೂಲ ಮೊತ್ತದಲ್ಲಿ ಯಾವುದೇ ರಾಜಿಗೆ ಅವಕಾಶವಿಲ್ಲ. ಆದರೆ 'ತೀವ್ರವಲ್ಲದ' ಪ್ರಸಂಗಗಳಲ್ಲಿ ಅನೇಕ ಬಾರಿ ರೂ. 2 - 3,000/- ದವರೆಗೆ ರಾಜಿಗೆ ಅವಕಾಶವಿದೆ. ರಾಜಿ ಮಾಡಿಕೊಳ್ಳದೇ ಇದ್ದರೆ ಆಗುವ ಪರಿಣಾಮಗಳ ಬಗ್ಗೆ ಕೆಲಸಗಾರನಲ್ಲಿ ಖುದ್ದಾಗಿ ಆಯುಕ್ತರುಗಳೆ 'ತಿಳಿಹೇಳಬಹುದು'. ಅಂದರೆ, ಮುಂಬರುವ ವಕಾಲತ್ತು, ಅವನು/ಳು ಕಳೆದುಕೊಳ್ಳುವ ಸಮಯ ಮತ್ತು ಹಣ, ಇವುಗಳಿಂದಾಗಿ ಅನೇಕ ಬರಿ ಕೆಲಸಗಾರನು ಕಡಿಮೆ ಮೊತ್ತ ಒಪ್ಪಿಕೊಳ್ಳಲು ಪ್ರಭಾವ ಬೀರುತ್ತದೆ.

ಕಾನೂನುವಿಶ್ಲೇತ ಊನತ್ವದ ಅಡಿಯಲ್ಲಿ ಬರುವ ಮಹಿಳೆ ಅಥವಾ ವ್ಯಕ್ತಿಗೆ ನೀಡಬೇಕಾದ ನಷ್ಟ ಪರಿಹಾರದ ವಿಷಯದಲ್ಲಿ, ಅಧಿನಿಯಮ ಬಯಸುವುದೇನೆಂದರೆ ಮೊತ್ತವನ್ನು ಆಯುಕ್ತರಲ್ಲಿ ಠೇವಣಿ ಇಡುವುದು. ಅಂಥಾ ವ್ಯಕ್ತಿಗಳಿಗೆ ಮಾಡಿದ ಯಾವುದೇ ನೇರಸಂದಾಯವನ್ನು ಕಾನೂನಿನ ಅಡಿಯಲ್ಲಿ ನಷ್ಟಪರಿಹಾರಕ್ಕಾಗಿ ಮಾಡಿದ ಸಂದಾಯವಲ್ಲ ಎಂದೇ ಪರಿಗಣಿಸಲಾಗುತ್ತದೆ.

**ಸೂಚನೆ:** ಆಯುಕ್ತರಲ್ಲಿ ನೋಂದಣಿ ಮತ್ತು ಸಂದಾಯ ಹಣವನ್ನು ಠೇವಣಿ ಇಡುವ ಈ ಅವಕಾಶಗಳು ಮಹಿಳೆಯರ ಮತ್ತು ಅವಲಂಬಿತರನ್ನು ಮೋಸ ಅಥವಾ ಬಲವಂತಿಕೆಯಿಂದ ಕಾಪಾಡುವ ಉದ್ದೇಶ ಹೊಂದಿದೆ. ವಿವೇಚನೆಯಿಲ್ಲದ ಮಾಲೀಕನೊಬ್ಬನು ಮೃತನ ಅವಲಂಬಿತರಿಗೆ ಕಡಿಮೆ ಮೊತ್ತ ನೀಡುವ ಸಾಧ್ಯತೆ ಇದೆ. ಅಂತೆಯೇ ಅವಿವೇಕಿ ಅವಲಂಬಿತನೊಬ್ಬ ಇತರ ಅವಲಂಬಿತರ ಪಾಲನ್ನು ಕಸಿದುಕೊಳ್ಳಲು ಮಾಲೀಕನ ಜೊತೆ ಕೈ ಜೋಡಿಸಬಹುದು. ಆದ್ದರಿಂದ ಮಹಿಳೆಯರ ಮತ್ತು ಮೃತನ ಅವಲಂಬಿತರ ವಿಷಯದಲ್ಲಿ ಮಾಲೀಕನೊಬ್ಬನು ಅವರೊಡನೆ ಒಪ್ಪಂದಕ್ಕೆ ಬರಬಹುದು, ಆದರೆ:

- ಅಂತಹ ಒಪ್ಪಂದವನ್ನು ನೋಂದಾಯಿಸತಕ್ಕದ್ದು, ಹಾಗೂ
- ಹಣವನ್ನು ನೇರವಾಗಿ ಕೊಡಕೂಡದು, ಆಯುಕ್ತರಲ್ಲಿ ಠೇವಣಿ ಇಡತಕ್ಕದ್ದು.

**ಇಷ್ಟಾದರೂ:**

- ಆಯುಕ್ತರು ಇಂತಹ ಅಪಘಾತದ ಬಗ್ಗೆ ತಿಳಿವಳಿಕೆಪತ್ರವನ್ನು ಪಡೆದ ಏಳು ದಿನಗಳು ಮುಗಿಯುವ ಮುನ್ನ ಯಾವ ಜ್ಞಾಪನವನ್ನೂ ಅವರು ನೋಂದಣಿ ಮಾಡಿಸಲು ಬರುವುದಿಲ್ಲ.[14]
- ಆಯುಕ್ತರು ಯಾವ ಸಮಯದಲ್ಲಾದರೂ ನೋಂದಣಿಯನ್ನು ಬದಲಾಯಿಸಬಹುದು. ಜೊತೆಗೆ, ಒಪ್ಪಂದವು ವಂಚನೆ, ಪ್ರಭಾವ-ಗಳಿಂದಾಗಿ ಮೂಡಿರುವುದೆಂದು ನಂಬಲು ಅವರಿಗೆ ಕಾರಣಗಳಿದ್ದರೆ, ಆಗ ಆತನು ಮಾಲೀಕನಿಂದ ಕಳುಹಿಸಲ್ಪಟ್ಟ ಜ್ಞಾಪನವನ್ನು ತಿರಸ್ಕರಿಸ-ಬಹುದು ಮತ್ತು ಒಂದು ಸಮರ್ಪಕ ಆಜ್ಞೆಯೊಂದನ್ನು ಜಾರಿ-ಗೊಳಿಸಬಹುದು.

## ಕೆ. & ಕಾ.

### 6. ನಷ್ಟ ಪರಿಹಾರದ ವಿತರಣೆ (ಕೆಲಸಗಾರನ ಸಾವಿನ ವಿಷಯವೂ ಸೇರಿದಂತೆ ಹಾಗೂ ಕಾನೂನುವಿಶ್ಲೇತ ಊನತ್ವಗಳಿರುವ ಮಹಿಳಾ ಕೆಲಸಗಾರರು/ವ್ಯಕ್ತಿಗಳಿಗೆ ನಷ್ಟ ಪರಿಹಾರ ನೀಡುವ ಬಗ್ಗೆ).

ಮಾಲೀಕನಿಂದ ಕೆಲಸಗಾರನಿಗೆ ನೀಡಿದ ಹಣವನ್ನು ಮಾತ್ರ ಈ ಅಧಿನಿಯಮದ ಅಡಿಯಲ್ಲಿ 'ನಷ್ಟ ಪರಿಹಾರ' ಎಂದು ಪರಿಗಣಿಸುವುದು, ಅದೂ ಆಯುಕ್ತರ

14 ಏಳು ದಿನಗಳ ಕಾಯುವಿಕೆ ಏಕೆಂದರೆ ಮೋಸ, ಇತ್ಯಾದಿಗಳ ವಿಷಯದಲ್ಲಿ ಆಕ್ಷೇಪಣೆಗಳಿಗೆ ಸಮಯ ನೀಡಲೋಸ್ಕರ.

ಮೂಲಕ ನೀಡಿದ್ದರಷ್ಟೆ.

- ಒಮ್ಮೆ ಆಯುಕ್ತರಲ್ಲಿ ನಷ್ಟ ಪರಿಹಾರವು ಠೇವಣಿ ಮಾಡಿದರಾಯಿತು, ಕೆಲಸಗಾರನೇ ಹಾನಿಗೊಂಡ ವ್ಯಕ್ತಿ ಆಗಿದ್ದರೆ ಆಯುಕ್ತರು ಅವನಿಗೇ ನೇರವಾಗಿ ಹಣವನ್ನು ನೀಡಬಹುದು.

- ಹಾನಿಯಿಂದಾದ ಸಾವಿಗೀಡಾದ ಕೆಲಸಗಾರನ ವಿಧವೆಯೊಬ್ಬಳಿಗೆ ಮತ್ತು ಇತರೆ ವಾರಸುದಾರರಿಗೆ ಹಣ ಸಂದಾಯ ಮಾಡಿದ್ದಲ್ಲಿ, ಮಾಲೀಕನಿಂದ ಮೃತನ ಅವಲಂಬಿತರಿಗೆ ಹಾಗೇ ಸಂದಾಯ ಮಾಡಿದ ಯಾವುದೇ ಗಂಟು ಮೊತ್ತವನ್ನು ನೀಡಬೇಕಾದ ನಷ್ಟ ಪರಿಹಾರದ ನಿಜವಾದ ಮೊತ್ತದಿಂದ ಕಳೆಯಲು ಸಾಧ್ಯವಿಲ್ಲ (ಕಲಂ 8)[15]

## ಕ. ಸಂ.

- ಕರ್ನಾಟಕ ನಿಯಮಾವಳಿಯ ನಿಯಮ 11ರ ಅವಕಾಶದಂತೆ ಅಧಿನಿಯಮವು ತಿಳಿಸಿರುವ ಎಲ್ಲಾ ಕೆಲಸಗಾರರೂ ತಮ್ಮ ಮಾಲೀಕನಲ್ಲಿ ಮತ್ತು ಆಯುಕ್ತರಲ್ಲಿ ತಮ್ಮ ತಮ್ಮ ಅವಲಂಬಿತರುಗಳ ಹೆಸರುಗಳು ಮತ್ತು ವಿಳಾಸಗಳನ್ನು ನೋಂದಣಿ ಮಾಡಿಸಬಹುದಾಗಿದೆ. ಕೆಲಸಗಾರನು ಮೃತಪಟ್ಟ ಸಂದರ್ಭದಲ್ಲಿ, ನಷ್ಟ ಪರಿಹಾರದ ವಿತರಣೆಗಾಗಿನ ವಿಚಾರಣೆಯೊಂದರಲ್ಲಿ, ಇನ್ಯಾವುದೇ ವ್ಯಕ್ತಿ ಅದಕ್ಕೆ ಹಕ್ಕು ತೋರದಿದ್ದಲ್ಲಿ, ಮೃತ ಕೆಲಸಗಾರನು ನೋಂದಾಯಿಸಿದ್ದ ವ್ಯಕ್ತಿಗಳೇ ಅವಲಂಬಿತರೆಂದು ಆಯುಕ್ತರು ಭಾವಿಸಬೇಕಾಗುತ್ತದೆ.[16]

- ಆಯುಕ್ತರಲ್ಲಿ ನಷ್ಟ ಪರಿಹಾರವನ್ನು ಠೇವಣಿ ಇಡಲ್ಪಟ್ಟ ನಂತರ, ಅವರಿಗೆ ಸೂಕ್ತವೆನಿಸಿದರೆ ಪ್ರತಿಯೊಬ್ಬರಿಗೂ ಎಷ್ಟೆಷ್ಟು ನಷ್ಟ ಪರಿಹಾರ ಸಿಗಬಹುದೆಂದು ನಿರ್ಧರಿಸಲು ಅವಲಂಬಿತರುಗಳನ್ನು ತಮ್ಮೆದುರಿಗೆ ಬರುವಂತೆ ಕರೆಸಬಹುದು.

- ಅಂಥಾ ನಷ್ಟ ಪರಿಹಾರವು ನೀಡಿರುವುದಕ್ಕೆ ಮಾಲೀಕನಿಗೆ ಆಯುಕ್ತರು ಕೊಡುವ ರಸೀದಿಯೇ ಕೆಲಸಗಾರನಿಗೆ ಪರಿಹಾರ ಕೊಟ್ಟದ್ದಕ್ಕೆ ಸಾಕಷ್ಟು

15 ಕ್ಯಾಥಲೀನಾ ಡಯಾಸ್ ವಿ/ರು. ಎಚ್. ಎಂ. ಕೋರಿಯಾ ಅಂಡ್ ಸನ್ಸ್ ಎ.ಐ.ಆರ್. 1951 ಕಾಲ್ 877ರಲ್ಲಿ ಮುಂದುವರೆದದ್ದು ಲ್ಯಾಬ್ ಐಸಿ 1399.

16 ಕಾರ್ಮಿಕ ಅಧಿಕಾರಿಯವರೊಡನೆಯ ಚರ್ಚೆಯಿಂದ ಕಂಡುಬಂದುದೇನೆಂದರೆ ಈ ಅವಕಾಶವು ಉಪಯೋಗದಲ್ಲಿಲ್ಲ. ಆದರೂ ಇದು 'ಕಾನೂನು' ಎಂದಾದ್ದರಿಂದ ಕೆಲವು ಕೆಲಸಗಾರರಿಗೆ ಉಪಯುಕ್ತವಾಗಬಹುದೆಂದು ಕಾಣುತ್ತದೆ.

ಪುರಾವೆ ಮತ್ತು ಮಾಲೀಕನ ಮೇಲೆ ಇನ್ನೆಂದಿಗೂ ಅದರ ಹೊರೆ ಇಲ್ಲ.

- ಕರ್ನಾಟಕದಲ್ಲಿನ ಅಭ್ಯಾಸವೆಂದರೆ, ಮೃತನ ವಿಧವೆಯೆಂಬುವಳು ಇದ್ದರೆ ಅವಳಿಗೆ 50% ನೀಡಲಾಗುತ್ತದೆ ಮತ್ತು ಉಳಿದದ್ದನ್ನು ಅಧಿನಿಯಮ-ದಲ್ಲಿನ ಸೆಕ್ಷನ್ 2(ಡ) ರಲ್ಲಿ (ಮೇಲೆ ಹೇಳಿದ) ತಿಳಿಸಿರುವ ಅವನ ಅವಲಂಬಿತರುಗಳಿಗೆ ಸಮನಾಗಿ ಹಂಚಲಾಗುತ್ತದೆ.

- ಅಂಥಾ ವಿಚಾರಣೆ ಮಾಡಿದ ನಂತರ, ಮತ್ತು ಯಾವುದೇ ಅವಲಂಬಿತ-ರಿಲ್ಲ ಎಂದು ಆಯುಕ್ತರಿಗೆ ಕಂಡುಬಂದಲ್ಲಿ, ಆಗ ಅವರು ಮಾಲೀಕನಿಗೆ ಹಣವನ್ನು ಹಿಂದಿರುಗಿಸಬೇಕು. ಜೊತೆಗೆ, ಏನಾದರೂ ಉಳಿದ ಹಣ ಇದ್ದರೆ, ಆಯುಕ್ತರು ಅದನ್ನೂ ಮಾಲೀಕರಿಗೆ ವಾಪಸ್ಸು ಮಾಡಬೇಕು.

- ಮಾಲೀಕನು ವಿತರಿಸಿದ ನಷ್ಟಪರಿಹಾರದ ವಿವರವಾದ ಲೆಕ್ಕವನ್ನು ತಗಾದೆ ಮಾಡಿ ಕೇಳಬಹುದು.

- ಕಾನೂನುವಿಶ್ಲೇತ ಊನತ್ವದ ಅಡಿಯಲ್ಲಿ ಬರುವ ಮಹಿಳೆ ಅಥವಾ ವ್ಯಕ್ತಿಯೊಬ್ಬರಿಗೆ, ಆಯುಕ್ತರಲ್ಲಿ ಠೇವಣಿ ಇಟ್ಟಿದ್ದ ಗಂಟು ಹಣ ನಷ್ಟ ಪರಿಹಾರ ನೀಡುವ ವಿಷಯದಲ್ಲಿ ಅದನ್ನು ತೊಡಗಿಸಿಟ್ಟಿರಬಹುದು ಇಲ್ಲವಾದರೆ ಅಂತಹ ವ್ಯಕ್ತಿಗಳ ಲಾಭಕ್ಕಾಗಿ ಆಯುಕ್ತರು ಅದರ ವಿಷಯದಲ್ಲಿ ನಡೆದುಕೊಳ್ಳಬಹುದು [ಕ. 8(7)]. ಕರ್ನಾಟಕ ನಿಯಮಾವಳಿಗಳ ನಿಯಮ 10 ರ ಅಡಿಯಲ್ಲಿ ಮೃತ ಕೆಲಸಗಾರರ ಅವಲಂಬಿತರಿಗೆ ಸಲ್ಲಬೇಕಾದ ನಷ್ಟಪರಿಹಾರವನ್ನು ಆಯುಕ್ತರು ಕೇವಲ (ಅ) ಸರ್ಕಾರೀ ಕ್ಷೇಮ ನಿಧಿಗಳು ಅಥವಾ; (ಆ) ಸರ್ಕಾರೀ ಉಳಿತಾಯ ಬ್ಯಾಂಕ್ ಅಥವಾ; (ಇ) ಅಂಚೆ ಕಚೇರಿ ಉಳಿತಾಯ ಬ್ಯಾಂಕ್ ಗಳಲ್ಲಿ ತೊಡಗಿಸಬಹುದು. ಕಾನೂನು ಊನತ್ವದ ಅಡಿಯಲ್ಲಿ ಬರುವ ಮಹಿಳಾ ಕೆಲಸಗಾರ್ತಿ/ವ್ಯಕ್ತಿಗಳಿಗೆ (ಅಂದರೆ ಇನ್ನೂ ವಯಸ್ಕರಾಗಿರದ ಕೆಲಸಗಾರರು) ಸಲ್ಲಬೇಕಾದ ನಷ್ಟ ಪರಿಹಾರಗಳಿಗೂ ಈ ನಿಯಮ ಅನ್ವಯವಾಗುತ್ತದೆ.

**ಸೂಚನೆ:** ನಷ್ಟ ಪರಿಹಾರ ಹಣದ ಎಷ್ಟು ಪಾಲು ನಗದು ರೂಪದಲ್ಲಿ ಕೊಡಬೇಕು ಹಾಗೂ ಎಷ್ಟನ್ನು ತೊಡಗಿಸಿಟ್ಟಿರಬೇಕು ಎಂಬುದು ಸಂಪೂರ್ಣವಾಗಿ ಆಯುಕ್ತರ ವಿವೇಚನೆಗೇ ಬಿಟ್ಟದ್ದು. ಆದರೆ ಪುರುಷರಿಗಿಂತ ಮಹಿಳಾ ಕೆಲಸಗಾರರ ವಿಷಯದಲ್ಲೇ ತೊಡಗಿಸುವಿಕೆಯು ಹೆಚ್ಚು ಎನ್ನುವುದು

ಸಮಂಜಸವಾಗುತ್ತದೆ, ಅದಾಗ್ಯೂ ಆಯುಕ್ತರು ಪರಿಹಾರ ಧನವನ್ನು ಪುರುಷ ಕೆಲಸಗಾರರ ವಿಷಯದಲ್ಲೂ ತೊಡಗಿಸಬಹುದಾಗಿದೆ. ಜೊತೆಗೆ, ಪುರುಷರಿಗೆ ಹೋಲಿಸಿದರೆ, ಮಹಿಳಾ ಫಲಾನುಭವಿಗಳ ವಿಷಯದಲ್ಲಿ, ಪರಿಹಾರಧನದ ಹೆಚ್ಚಿನ ಭಾಗ ತೊಡಗಿಸುವಿಕೆಗೇ ಮೀಸಲಾಗಿಡುತ್ತದೆ ಮತ್ತು ಉಳಿದದ್ದನ್ನು ನಗದಾಗಿ ನೀಡಲಾಗುತ್ತದೆ. ಇದನ್ನು ಸಂಪೂರ್ಣವಾಗಿ ಪ್ರತಿಯೊಂದು ಪ್ರಸಂಗಕ್ಕೆ ಅನುಗುಣವಾಗಿಯೇ ನಿರ್ಧರಿಸಲಾಗುತ್ತದೆ.

**ವಿಮರ್ಶೆ:** ಇಂತಹ ಅವಕಾಶಗಳಾದ– (ಅ) ಈಗಾಗಲೇ ಮಾಡಿರುವ ಹಣಸಂದಾಯಗಳ ಹೊರತಾಗಿಯೂ ಪರಿಹಾರದ ಪೂರ್ಣ ಮೊತ್ತ ನೀಡುವ; ಹಾಗೂ (ಆ) ನೇರವಾಗಿ ಪರಿಹಾರವನ್ನು ನೀಡದಿರುವ; ಇವುಗಳು ಮಹಿಳಾ ಕೆಲಸಗಾರರೊಡನೆ (ಕಾನೂನುವಿಶ್ಲೇತ ಊನತ್ವಗಳ ಅಡಿಯಲ್ಲಿ ಬರುವ ವ್ಯಕ್ತಿಗಳೆಂದು ಪರಿಗಣಿಸಲಾದ) ವ್ಯವಹರಿಸುವ / ಸಂಬಂಧಿಸಿದ ಕಾನೂನುಗಳನ್ನು ಮಾಡುವಾಗ ಶಾಸನ ಅನುಸರಿಸುವ 'ರಕ್ಷಣಾತ್ಮಕ ಮಾರ್ಗ' ('ಹಕ್ಕು ಆಧಾರಿತ ಮಾರ್ಗ' ಕ್ಕೆ ವಿರುದ್ಧವಾದ್ದು) ಕ್ಕೆ ಇವು ಉದಾಹರಣೆ–ಗಳಾಗಿವೆ. ಇದೇ ಸಂದರ್ಭದಲ್ಲಿ ಮರೆಯಬಾರದ ಅಂಶವೆಂದರೆ ಮಹಿಳಾ ಕೆಲಸಗಾರರು ಸಾಮಾನ್ಯವಾಗಿ ಹೆಚ್ಚು ಸೂಕ್ಷ್ಮವಾದವರು, ಮತ್ತು ದುರ್ಬಳಕೆಯಾಗಬಹುದಾದವರು.

## ಅವಲಂಬಿತರಿಗೆ ನೀಡುವ ಪರಿಹಾರದ ಪರಿಷ್ಕರಣೆ

ಪೋಷಕರೊಬ್ಬರಿಂದ ಮಕ್ಕಳು ಅಲಕ್ಷ್ಯಕ್ಕೊಳಗಾಗುವ ಕಾರಣದಿಂದಲೋ ಅಥವಾ ಯಾವುದೇ ಅವಲಂಬಿತನ ಪರಿಸ್ಥಿತಿಗಳಲ್ಲಿನ ವ್ಯತ್ಯಾಸದ ಕಾರಣ–ದಿಂದಲೋ ಅಥವಾ ಇನ್ಯಾವುದೇ ಸಮರ್ಪಕ ಉದ್ದೇಶಕ್ಕಾಗಿ, ಆಯುಕ್ತರು ಅವಲಂಬಿತರುಗಳಿಗೆ ನೀಡಬಹುದಾದ ಪರಿಹಾರದಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದ ಆದೇಶಗಳನ್ನು ಹೊರಡಿಸಬಹುದು. ಇದನ್ನು ಆಯುಕ್ತರಿಗೆ ಬಂದ ಅರ್ಜಿಯೊಂದರ ಆಧಾರವಾಗಿ ಅಥವಾ ತಮಗೇ ದೊರೆತ ಮಾಹಿತಿಯ ಆಧಾರದ ಮೇಲೆ ಆಯುಕ್ತರು ತಾವೇ ಕಾರ್ಯೋನ್ಮುಖರಾಗಿ ಮಾಡ–ಬಹುದಾಗಿದೆ.

## ಕೆ. & ಕಾ.

## ಮಾಲೀಕನು ಪರಿಹಾರದ ಮಟ್ಟವನ್ನು ಒಪ್ಪಿಕೊಳ್ಳದಿದ್ದರೆ ಏನು ಮಾಡುವುದು?

ಅಗತ್ಯರೀತ್ಯಾ, ಪರಿಹಾರವನ್ನು, ಅದೂ ಸಕಾಲದಲ್ಲಿ ನೀಡಬೇಕಾದ್ದು, ಅಂದರೆ ಅಪಘಾತ ಘಟಿಸಿದಾಗ – ನಿಧಾನವೆಂದರೆ 30 ದಿನಗಳೊಳಗಾಗಿ.

ಪಡೆಯಲಾಗುತ್ತಿರುವ ಪರಿಹಾರದ ಮಟ್ಟವನ್ನು ಮಾಲೀಕನು ಒಪ್ಪದ ಪಕ್ಷದಲ್ಲಿ, ಆಗ ಮಾಲೀಕನು ತನಗೆ ಒಪ್ಪುವಷ್ಟು ಜವಾಬ್ದಾರಿಯ ಮಟ್ಟಕ್ಕೆ ಪರಿಹಾರಧನವನ್ನು ಸಾಧ್ಯವಾದಷ್ಟು ಬೇಗ ನೀಡುವುದಾಗುತ್ತದೆ. ಅವನು ಹಾಗೆ ಮಾಡಬೇಕಾದರೆ ಹಣವನ್ನು ಆಯುಕ್ತರ ಕಚೇರಿಯಲ್ಲಿ ಠೇವಣಿ ಇಡಬೇಕು ಅಥವಾ ಕೆಲಸಗಾರನಲ್ಲಿ ಇಡಬೇಕು.

ಹೀಗೆ ಮಾಡುವುದರಿಂದ, ಉಳಿದ ಪರಿಹಾರಧನಕ್ಕಾಗಿ ಕಾರ್ಮಿಕರ ಆಯುಕ್ತರಲ್ಲಿ ಕೆಲಸಗಾರನು ಇನ್ನಷ್ಟು ಹಕ್ಕು ಚಲಾಯಿಸುವುದನ್ನು ತಪ್ಪಿಸಲಾಗದು.

## ಅಪಘಾತವೊಂದು ಘಟಿಸಿದಾಗ ಅನುಸರಿಸಬೇಕಾದ ವಿಧಾನದ ಸಂಕ್ಷಿಪ್ತ ರೂಪ (ಪುಟ 41 ನೋಡಿ)

ಅಪಘಾತವೊಂದು ಅಥವಾ ಸಾವಿಗೆ ಎಡೆಮಾಡುವಂಥಾ ಅಪಘಾತವೊಂದಾದಾಗ, ಹಾಗೆ ಆದ ಅಪಘಾತದ ನಂತರ ಸಾಧ್ಯವಾದಷ್ಟು ಬೇಗ ಮಾಲೀಕನಿಗೆ ಅಥವಾ ಅದೇ ಸಂಸ್ಥೆಯಲ್ಲಿ ಕೆಲಸ ಮೇಲ್ವಿಚಾರಿಸಲು ನೌಕರಿಯಲ್ಲಿರುವ ಇನ್ಯಾವುದೇ ವ್ಯಕ್ತಿಗೆ ತಿಳಿವಳಿಕೆಪತ್ರವನ್ನು ಮಾಲೀಕನ ಕಚೇರಿ ಅಥವಾ ಮನೆಗೆ ರಿಜಿಸ್ಟಾರ್ ಪೋಸ್ಟ್ ಮೂಲಕ ಕಳಿಸಬಹುದು ಅಥವಾ ಅಂಥಾ ಪತ್ರವನ್ನು ತಿಳಿವಳಿಕೆಪುಸ್ತಕದಲ್ಲಿ ಬರೆಯಬಹುದು.

▼

ಕೆಲಸಗಾರರ ನಷ್ಟ ಪರಿಹಾರಕ್ಕೆ ಇರುವ ಆಯುಕ್ತರಿಗೆ, ಕೆಲಸಗಾರನಿಗೆ ಹಾನಿಯಾದಂಥ ಯಾವುದಾದರೂ ಅಪಘಾತದ ಬಗ್ಗೆ ತಿಳಿದು ಬಂದರೆ ತಿಳಿವಳಿಕೆ ಪತ್ರವೊಂದನ್ನು ಪಡೆಯದೆಯೂ ತಾವಾಗೇ ಸಕ್ರಿಯರಾಗುವ ಅಧಿಕಾರಗಳಿದೆ. ಅವರು ಹಾನಿಗೆ ಕಾರಣವೇನೆಂದು ಮಾಲೀಕರನ್ನು ಕೇಳಿ, ಆತನು/ಅವಳು ನಷ್ಟ ಪರಿಹಾರ ನೀಡಲು ಬಾಧ್ಯನು/ಳು ಎಂದೆನಿಸುತ್ತದೆಯೇ ಎಂದೂ ಕೇಳಿ ತಿಳಿವಳಿಕೆಪತ್ರವೊಂದನ್ನು ಕಳಿಸಬಹುದು.

▼

ಸಾವಿಗೆ ಎಡೆಮಾಡುವಂಥಾ ಹಾನಿಯಾಗಿಲ್ಲದಿದ್ದಲ್ಲಿ, ಮಾಲೀಕನಿಗೆ ಅಪಘಾತ ಕುರಿತ ತಿಳಿವಳಿಕೆ ರವಾನೆ ಮಾಡಿದಾಗ, ಹಾನಿಗೊಳಗಾದ ಕೆಲಸಗಾರನಿಗೆ ವೈದ್ಯಕೀಯ ತಪಾಸಣೆಗೆ ಒಳಪಡಲು ಬರಬೇಕೆಂದು ಮಾಲೀಕನು ತಿಳಿಸಬೇಕಾಗುತ್ತದೆ.

▼

ಮಾಲೀಕ ಮತ್ತು ನೌಕರ, ಒಪ್ಪಂದವೊಂದಕ್ಕೆ ಬರುವ ಆಯ್ಕೆ ಇದೆ: ಪರಿಹಾರವಾಗಿ ನೀಡಬಹುದಾದ ಯಾವುದೇ ಗಂಟುಮೊತ್ತದ ವ್ಯವಹಾರ ಇತ್ಯರ್ಥಗೊಳಿಸುವುದು, ಅಂದರೆ, ಮಾಲೀಕನ ಅರ್ಧಮಾಸಿಕ ಸಂದಾಯಗಳ ಬಾಧ್ಯತೆಯನ್ನು ಪರಿವರ್ತಿಸಲು ಅಥವಾ ಅದರ ಅದಲು–ಬದಲು ರೀತಿಯಾಗಿ (ಸಂಪೂರ್ಣ/ಭಾಗಶಃ ಊನತ್ವಕ್ಕೆ ಪರಿಹಾರ).

▲

ಅಂಥಾ ಸಂದರ್ಭದಲ್ಲಿ ಒಂದು ಜ್ಞಾಪನಪತ್ರ (ಆ ಇತ್ಯರ್ಥಗೊಳಿಸುವುದರ) ವನ್ನು ಆಯುಕ್ತರಿಗೆ ಕಳಿಸಬೇಕಾಗುತ್ತದೆ. ಆಯುಕ್ತರು ಅಂತಹ ಜ್ಞಾಪನದ ಅಪ್ಪಟತೆಯ ಬಗ್ಗೆ ಪರೀಕ್ಷಿಸಿದ ನಂತರ, ಸೂಚಿಸಿದ ರೀತಿಯಲ್ಲಿ ಅದನ್ನು ನೋಂದಣಿ ಮಾಡಿಸಬೇಕು.

▲

ಕಾನೂನುವಿಶ್ಲೇತ ಊನತ್ವದ ಅಡಿಯಲ್ಲಿ ಬರುವ ಮಹಿಳೆ (ಕೆಲಸಗಾರಳಾಗಿರಬಹುದು ಅಥವಾ ಸತ್ತ ಕೆಲಸಗಾರನ ಅವಲಂಬಿತ–ದವಳಾಗಿರಬಹುದು) ಅಥವಾ ವ್ಯಕ್ತಿಯ ವಿಷಯದಲ್ಲಿ, ಅಧಿನಿಯಮ ಬಯಸುವುದೇನೆಂದರೆ ಮೊತ್ತವನ್ನು ಆಯುಕ್ತರಲ್ಲಿ ಠೇವಣಿ ಇಡುವುದೇ ಹೊರತು ಹಾಗೆ ಕಾನೂನು ಊನತ್ವದ ಅಡಿಯಲ್ಲಿ ಬರುವ ಮಹಿಳೆ/ವ್ಯಕ್ತಿಗೆ ನೇರವಾಗಿ ಸಂದಾಯ ಮಾಡುವುದನ್ನಲ್ಲ, ಅವಳ ಜೊತೆಗೆ ಒಪ್ಪಂದಕ್ಕೆ ಬರಬಹುದಾಗಿದ್ದರೂ ಸಹ ಹಾಗೇ ಮಾಡಬೇಕು.

▲

ಪ್ರತಿಯೊಬ್ಬ ಅವಲಂಬಿತನಿಗೂ ಎಷ್ಟು ಪರಿಹಾರ ಸಿಗಬೇಕು ಎಂಬುದನ್ನು ನಿಗದಿಪಡಿಸುವ ಆಯುಕ್ತರ ಅಧಿಕಾರ ಅವರ ವಿವೇಚನೆಗೇ ಬಿಟ್ಟದ್ದು. ಕರ್ನಾಟಕದಲ್ಲಿನ ರೂಢಿಯೆಂದರೆ, ಮೃತಕೆಲಸಗಾರನಿಂದಾಗಿ ವಿಧವೆಯಾದವಳೇನಾದರೂ ಇದ್ದರೆ ಅವಳಿಗೆ 50% ನೀಡಲಾಗುತ್ತದೆ, ಹಾಗೂ ಉಳಿದದ್ದನ್ನು ಇತರೆ ಅವಲಂಬಿತರುಗಳಿಗೆ ಸಮನಾಗಿ ಹಂಚಿಬಿಡಲಾಗುತ್ತದೆ.

# ಅಧ್ಯಾಯ 5

# ಕಾನೂನಿನ ಪರಿಹಾರಗಳು (ತೀರ್ಮಾನಗಳು)

## ಕಾ.

ತಿಳಿವಳಿಕೆ ಸಲ್ಲಿಸಿದ ನಂತರ ಮತ್ತು ಅಪಘಾತವಾದ ದಿನಾಂಕದಿಂದ 30 ದಿನಗಳ ನಂತರ ಮಾಲೀಕನು ನಷ್ಟ ಪರಿಹಾರವನ್ನು ನೀಡದಿದ್ದಂತಹ ಪರಿಸ್ಥಿತಿಗಳಲ್ಲಿ, ಅಥವಾ ನೌಕರ ಮತ್ತು ಮಾಲೀಕ ಒಪ್ಪಂದವೊಂದಕ್ಕೆ ಬರಲು ವಿಫಲವಾದಂತಾದಾಗ, ಕೆಲಸಗಾರನಿಂದ ಕಾರ್ಮಿಕ ಅಧಿಕಾರಿಗೆ ಒಂದು ಅರ್ಜಿಯನ್ನು ಬರೆಯಲ್ಪಡಬಹುದು. ಕಾರ್ಮಿಕಾಧಿಕಾರಿಯ ಎದುರಿನ ನಡಾವಳಿಗಳು ಅರೆ-ನ್ಯಾಯಾಂಗ ಲಕ್ಷಣವುಳ್ಳದ್ದಾಗಿದೆ.

ಕೆಲಸಗಾರರ ಹಾನಿಗಳ ವಿಷಯದಲ್ಲಿ ಕೆಲಸಗಾರರ ಹಕ್ಕುಗಳನ್ನು ತ್ವರಿತವಾಗಿ ತುದಿಗಾಣಿಸುವ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. ಕೆಲಸಗಾರರ ಪರಿಹಾರದ ವ್ಯಾಜ್ಯಗಳಲ್ಲಿ ಯಾವುದೇ ತಾಂತ್ರಿಕ ವಿಧಾನವನ್ನೂ ಅನುಸರಿಸುವುದಿಲ್ಲ. ಆದರೆ, ಮಾಲೀಕನನ್ನು ವಿಚಾರಣೆಗೊಳಪಡಿಸ-ಬೇಕಾದ್ದರಿಂದ, ಮತ್ತು ವಿಷಯವನ್ನು ತನಿಖೆಗೆ ಒಳಪಡಿಸಬಹುದಾದ್ದರಿಂದ, ಕೆಲವು ಕನಿಷ್ಟ ವಿಧಾನಗಳನ್ನು ಅನುಸರಿಸಲಾಗುತ್ತದೆ. ಅದು ಸರ್ಕಾರದ ಸಮಯವನ್ನು ನುಂಗಿಹಾಕುವುದರಿಂದ, ಕಾರ್ಮಿಕ ಆಯುಕ್ತರನ್ನೊಬ್ಬರನ್ನು ಈ ಜವಾಬ್ದಾರಿ ನಿಭಾಯಿಸಲು ನೇಮಕ ಮಾಡಲಾಗುತ್ತದೆ. ಅವನಿ/ಳಿಗೆ ಅನುಕೂಲ ಕಲ್ಪಿಸಲೋಸ್ಕರ, ವ್ಯಾಜ್ಯಗಳನ್ನು ಇತ್ಯರ್ಥಮಾಡಲು ಆಯುಕ್ತರನ್ನು ಸಬಲೀಕರಿಸಲು ಸಾರ್ವಜನಿಕ ವಿಧಾನ ಸಂಹಿತೆಯ ಕೆಲವು ಅವಕಾಶಗಳನ್ನು ಉಪಯೋಗಿಸಿಕೊಳ್ಳಬಹುದೆಂದು ನಿಯಮಗಳೂ ಅನುಕೂಲ ಮಾಡಿಕೊಡುತ್ತವೆ.[17]

---

17 ಈ ಅವಕಾಶಗಳೆಂದರೆ: ಪ್ರಮಾಣ ಮಾಡಿ ಸಾಕ್ಷಿ ಪಡೆಯುವುದು; ಸಾಕ್ಷಿಗಳ ಹಾಜರಾತಿಯನ್ನು ಜಾರಿಗೊಳಿಸುವುದು; ಮತ್ತು ದಾಖಲಾತಿಗಳು ಮತ್ತಿತರ ಅವಶ್ಯಕ ವಸ್ತುಗಳನ್ನು ಪ್ರಸ್ತುತಪಡಿಸಲು ಒತ್ತಾಯಿಸುವುದೇ ಮುಂತಾದವುಗಳನ್ನು ಆಯುಕ್ತರು ಅವನ/ಪ್ರಕರಣಗಳನ್ನು ಇತ್ಯರ್ಥ ಮಾಡಲು ಉಪಯೋಗಿಸಬಹುದು.

## ಕೆ. & ಕಾ.

### i. ಯಾರು ಹಕ್ಕು ಚಲಾಯಿಸಬಹುದು? [ಕಲಮು 10 (1)]

ಕೆಲಸಗಾರರ ನಷ್ಟಪರಿಹಾರಕ್ಕಾಗಿ, ಗಾಯಗೊಂಡ ನೌಕರ ಅಥವಾ ಅವನ ಪರವಾಗಿ ಮತ್ತೊಬ್ಬರು ಆಯುಕ್ತರ ಮುಂದೆ ಹಕ್ಕು ಚಲಾಯಿಸಲು ಅರ್ಜಿ ಹಾಕಬಹುದು. ವಾಸ್ತವವಾಗಿ, ಹಕ್ಕು ಚಲಾವಣೆಗೆ ಅರ್ಜಿಯನ್ನು ಸಾಮಾನ್ಯವಾಗಿ ವಕೀಲರೊಬ್ಬರು ಹಾಕುತ್ತಾರೆ.

**ಸೂಚನೆ:** ಆಯುಕ್ತರ ಮುಂದೆ ವಿಷಯವು ಇತ್ಯರ್ಥಕ್ಕಾಗಿ ಕಾದು ನಿಂತಿರುವಾಗ, ಮಾಲೀಕನ ಬಾಧ್ಯತೆಯಾದ ನಷ್ಟಪರಿಹಾರ ನೀಡಿಕೆಯು ಅಮಾನತ್ತಿ–ನಲ್ಲಿರುವುದಿಲ್ಲ. ನೌಕರನು ಘಾತಕ್ಕೀಡಾದ ಕೂಡಲೆ ಈ ಅಧಿನಿಯಮದ ಅಡಿಯಲ್ಲಿ ತಿಳಿಸಿರುವ ದರದಲ್ಲಿ ನಷ್ಟ ಪರಿಹಾರವನ್ನು ನೀಡುವುದು ಮಾಲೀಕನ ಕರ್ತವ್ಯವಾಗಿರುತ್ತದೆ.

### ii. ಯಾರಲ್ಲಿ ಹಕ್ಕು ಚಲಾಯಿಸಬೇಕು? (ಕ. 19)

ಕೆಲಸದಲ್ಲಿ ತೊಡಗಿದ್ದ ತನ್ನ ನೌಕರರಿಂದ ಅನುಭವಿಸಲ್ಪಟ್ಟ ಅಪಘಾತಗಳಿಗೆ ಒಂದು ಪಕ್ಷ ಮಾಲೀಕನು ನಷ್ಟ ಪರಿಹಾರ ನೀಡದೇ ಹೋದಲ್ಲಿ, ಅಪಘಾತವಾದ ಸ್ಥಳದ ಪ್ರದೇಶದಲ್ಲಿನ ಕಾರ್ಮಿಕ ಅಧಿಕಾರಿಯಲ್ಲಿ ಹಕ್ಕು ಚಲಾಯಿಸಬಹುದು. ತೀವ್ರ ಅಪಘಾತದ ಸಂದರ್ಭದಲ್ಲಿ, ಹಕ್ಕುಚಾಲಕ ತಾನು ಮಾಮೂಲಾಗಿ ವಾಸಿಸುವ ಸ್ಥಳದಲ್ಲೇ, ಅಥವಾ ಮಾಲೀಕರು ನೋಂದಾಯಿ–ಸಿರುವ ತಮ್ಮ ಕಚೇರಿಯಲ್ಲಿ ಹಕ್ಕು ಚಲಾಯಿಸಬಹುದು.

**ಕ. ಸಂ.**

ಕರ್ನಾಟಕದಲ್ಲಿ, ಹಕ್ಕು ಚಲಾವಣೆ ನಿರ್ಧಾರದ ಪ್ರಾಧಿಕಾರಿಯು ಒಬ್ಬ 'ಕಾರ್ಮಿಕ ಅಧಿಕಾರಿ' – ಇವರು ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿನ ಅಧಿಕಾರಿಗಳಿಗಿಂತ ಕೆಳಗಿನ ದರ್ಜೆಯವರಾಗಿರುತ್ತಾರೆ. ಆ ರಾಜ್ಯಗಳ ಪ್ರಾಧಿಕಾರಿಯು ಸಹಾಯಕ ಕಾರ್ಮಿಕ ಆಯುಕ್ತರ ಮಟ್ಟಕ್ಕಿಂತ ಕಿರಿಯ ದರ್ಜೆಯವರಾಗಿರುವುದಿಲ್ಲ.

### iii. ಹಕ್ಕು ಚಲಾವಣೆ ಮಾಡಬೇಕಾದ ಕಾಲಾವಧಿ ಮಿತಿ (ಕ. 10)

ಅಂಥಾ ಎಲ್ಲಾ ಹಕ್ಕು ಚಾಲನೆಯನ್ನೂ ಕೆಲಸಗಾರನ ಅಪಘಾತ ಅಥವಾ ಸಾವು ಘಟಿಸಿದ ಎರಡು ವರ್ಷಗಳೊಳಗಾಗಿ ಮಾಡಬೇಕು. ಅಪಘಾತ ಘಟಿಸಿದಾಗ ಮಾಲೀಕನಿಗೆ ಯಾವುದೇ ತಿಳಿವಳಿಕೆಪತ್ರ ಸಲ್ಲಿಸಿಲ್ಲದಿದ್ದರೆ ಹಾಗೂ

ಎರಡು ವರ್ಷಗಳೊಳಗಾಗಿ ಆಯುಕ್ತರಲ್ಲಿ ಯಾವುದೇ ಹಕ್ಕು ಚಲಾವಣೆ ಮಾಡದಿದ್ದಲ್ಲಿ ಆಯುಕ್ತರು ವಿಷಯವನ್ನು ವಿಚಾರಣೆಗೆ ತೆಗೆದುಕೊಳ್ಳಲು ನಿರಾಕರಿಸಬಹುದು. ಅಂಥಾ ಒಂದು ಹಕ್ಕು ಚಲಾವಣೆ ಮಾಡುವಲ್ಲಿ ತಡವಾಗಿದ್ದರೆ, ಕೆಲಸಗಾರನು ತಕ್ಕಷ್ಟು ಕಾರಣ ನೀಡಿದ್ದೇ ಆದಲ್ಲಿ ಆಯುಕ್ತರಿಂದ ಆ ತಡವಾದದ್ದಕ್ಕೆ ಕ್ಷಮಿಸಲು ಸಾಧ್ಯವಿದೆ. ಅಧಿನಿಯಮವು 'ಪ್ರಯೋಜನಕರ ಅಧಿನಿಯಮ' ವಾದ್ದರಿಂದ, ಅಪರಾಧ ಮತ್ತು ನಾಗರಿಕ ತಪ್ಪುಗಳ ಪ್ರಕರಣಗಳಲ್ಲಿ ಆಗುವ ತಡಗಳಿಗೆ ಹಾಗೂ ತಾಂತ್ರಿಕ ಇತಿಮಿತಿಗಳಿಗೆ ಪ್ರಾಮುಖ್ಯತೆ ಇರುವಷ್ಟು ಇಲ್ಲಿ ಇರುವುದಿಲ್ಲ.

**'ತಕ್ಕಷ್ಟು ಕಾರಣ' ಎಂದರೇನು?**

**ಉದಾಹರಣೆ #1:** ಕೆಲಸದಲ್ಲುಂಟಾಗುವ ಅಪಘಾತವೊಂದರ ಫಲವಾಗಿ, ಕೆಲಸಗಾರನೊಬ್ಬನಿಗೆ ಅವನ ಎರಡೂ ಕಾಲುಗಳಲ್ಲಿ ಅನೇಕ ಮೂಳೆಮುರಿತ–ಗಳಾದವು (ಮಲ್ಟಿಪಲ್ ಫ್ರಾಕ್ಚರ್ಸ್) ಮತ್ತು ಎರಡು ಬಾರಿ ಅವನನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕಾಯಿತು. ಅವನು ಮೂರುವರೆ ವರ್ಷಗಳ ಕಾಲ ಚಿಕಿತ್ಸೆಯಡಿಯಲ್ಲೇ ಇದ್ದನು. ನ್ಯಾಯಾಲಯವು ಪರಿಹಾರ ವಿಷಯದಲ್ಲಿ ಹಕ್ಕು ಚಲಾಯಿಸುವಲ್ಲಿ ತಡವಾದುದಕ್ಕೆ ಸಾಕಷ್ಟು ಕಾರಣವಿರುವುದಾಗಿ ತಡವನ್ನು ಮನ್ನಿಸಿತು.

**ಉದಾಹರಣೆ #2:** ಮದ್ರಾಸಿನ ಉಚ್ಚನ್ಯಾಯಾಲಯದ ಪ್ರಕರಣವೊಂದರಲ್ಲಿ[18] ಈ ರೀತಿ ತೀರ್ಪನ್ನು ಎತ್ತಿ ಹಿಡಿಯಲಾಯಿತು – "___ತಡಕ್ಕೆ ಕಾರಣ, ಅಂದರೆ ಅನಕ್ಷರತೆ, ಮಕ್ಕಳಲ್ಲಿನ ಅಪ್ರಾಪ್ತ ವಯಸ್ಸು, ನೌಕರಿಯ ಒಟ್ಟಾರೆ ಲಕ್ಷಣ, ಇವುಗಳು ತಡವನ್ನು ಮನ್ನಿಸಲು ಸಾಕಷ್ಟು ಕಾರಣಗಳು____". ಈ ಪ್ರಕರಣದಲ್ಲಿ ಮೃತ ಕೆಲಸಗಾರನಿಂದಾದ ವಿಧವೆಯು 8 ವರ್ಷಗಳಷ್ಟು ತಡವಾದ ನಂತರ ಅರ್ಜಿಯನ್ನು ಹಾಕಿದ್ದಳು.

ಅಪಘಾತವು ಉದ್ಯೋಗಸಂಬಂಧೀ ಖಾಯಿಲೆಯೊಂದರ ಸೋಂಕು ಆಗಿದ್ದರೆ, ಕೆಲಸಗಾರನು ಮೊದಲ ಕೆಲವು ದಿವಸಗಳು ಅಂಥಾ ಖಾಯಿಲೆಯಿಂದಾಗಿ ಸತತ ಗೈರುಹಾಜರಿ ಆಗಿದ್ದಲ್ಲಿ, ಆ ಅವಧಿಯನ್ನು ಅಪಘಾತ ಘಟಿಸಿದ ದಿನವೆಂದೇ ಪರಿಗಣಿಸಬಹುದು. ಒಂದು ಪಕ್ಷ ಖಾಯಿಲೆಯಿಂದಾಗಿ ಕೆಲಸಗಾರನು ರಜೆ ತೆಗೆದುಕೊಳ್ಳುವಷ್ಟು ಬಲವಿಲ್ಲದಂಥವನಾಗಿರುವಾಗ, ಆಗ ಕೆಲಸಗಾರನು ತನ್ನ ಪರಿಸ್ಥಿತಿ ಕುರಿತು ಮಾಲೀಕನಿಗೆ ತಿಳಿವಳಿಕೆ ನೀಡುವ ದಿನಾಂಕವೇ ಸಮಯದ ಅವಧಿಗೆ ಮಿತಿ ಆಗಬೇಕಾಗುತ್ತದೆ.

18 ಲಕ್ಷ್ಮಿ ಹಾಗು ಅನ್ಯರು ವಿ/ರು ಮದ್ರಾಸ್ ಉಪ ಕಾರ್ಮಿಕ ಆಯುಕ್ತರು ಮತ್ತು ಇನ್ನೊಬ್ಬರು, 1998 ಐ ಎಲ್.ಎಲ್.ಜೆ. 158 (ಮದ್) (ಡಿ.ಬಿ)

### iv. ಅರ್ಜಿಯ ನಮೂನೆ (ಕ. 22)

- ನಷ್ಟ ಪರಿಹಾರಕ್ಕೆ ಅರ್ಜಿಯೊಂದನ್ನು ನಿಯಮಿಸಿದ ಮಾದರಿಯಲ್ಲಿ ಕೊಟ್ಟ ಹೊರತೂ ಆಯುಕ್ತರು ಇನ್ಯಾವುದೇ ಅರ್ಜಿಯನ್ನು ಆದರಿಸಲು ಬಾಧ್ಯರಾಗಿರುವುದಿಲ್ಲ. ಅಂದರೆ, ಅದು ಈ ಕೆಳಕಂಡ ವಿವರಗಳನ್ನು ನೀಡಲ್ಪಟ್ಟು ಮಾಡಿರಬೇಕು.[19]

  (ಅ) ಅರ್ಜಿಯನ್ನು ನೀಡುತ್ತಿರುವ ಪರಿಸ್ಥಿತಿಗಳನ್ನು ಕುರಿತು ಸಾಧಾರಣ ಭಾಷೆಯಲ್ಲಿ ಒಂದು ಬರಹ ಹಾಗೂ ಅರ್ಜಿದಾರನು ಹಕ್ಕು ಚಲಾಯಿಸುತ್ತಿರುವ ಪರಿಹಾರ ಅಥವಾ ಆದೇಶ.

  (ಆ) ನಷ್ಟ ಪರಿಹಾರಕ್ಕಾಗಿ ಮಾಲೀಕನ ವಿರುದ್ಧ ಹಕ್ಕು ಚಲಾಯಿಸಿದ್ದರೆ, ಅರ್ಜಿಯಲ್ಲಿ ಹಾಗೆ ಮಾಲೀಕನಿಗೆ ಸಲ್ಲಿಸಿದ ಆ ಅಪಘಾತ ಕುರಿತ ತಿಳಿವಳಿಕೆ ಪತ್ರದ ದಿನಾಂಕವನ್ನು ಮತ್ತು ಹಾಗೆ ಮಾಡುವಲ್ಲಿ ಏನಾದರೂ ತಡವಾಗಿದೆಯೋ, ಹಾಗಿದ್ದಲ್ಲಿ ಆ ತಡವಾದುದಕ್ಕೆ ಕಾರಣಗಳನ್ನು ಬರೆದಿರಬೇಕು.

  (ಇ) ಭಾಗೀದಾರರ ಹೆಸರು ಮತ್ತು ವಿಳಾಸ.

- ನಷ್ಟಪರಿಹಾರಕ್ಕೆ ಹಕ್ಕು ಚಲಾಯಿಸುವ ಎಲ್ಲಾ ಅರ್ಜಿಗಳನ್ನೂ ಸೂಕ್ತ ಶುಲ್ಕದೊಡನೆ ಆಯುಕ್ತರಿಗೆ ಬರೆಯಬೇಕು. ಹಕ್ಕು ಚಲಾಯಿಸಿರುವ ನಷ್ಟ ಪರಿಹಾರದ ಪ್ರತಿ ರೂ. 1000 ಕ್ಕೆ ರೂ.2 ಶುಲ್ಕವಾಗಿರುತ್ತದೆ. ಕೆಲಸಗಾರನು ಈ ಮೊತ್ತವನ್ನು ನೀಡಲು ಅಸಮರ್ಥನಾದರೆ ಅಂತಿಮ ಆದೇಶ ಹೊರಡಿಸುವ ತನಕ ವಿನಾಯಿತಿ ಕೋರಿ ಒಂದು ಅರ್ಜಿಯನ್ನು ಹಾಕಬಹುದು.

- ಒಂದು ಪಕ್ಷ ಅರ್ಜಿಯು ಮೃತ ಕೆಲಸಗಾರನ ಅವಲಂಬಿತರಿಂದ / ಅವಲಂಬಿತರ ಪರವಾಗಿ ಬರೆದದ್ದಾಗಿದ್ದರೆ, ಅರ್ಜಿಯ ಮೇಲೆ ಅವಲಂಬಿತರುಗಳ ಭಾವಚಿತ್ರವನ್ನು ಲಗತ್ತಿಸಿರಬೇಕು.

## ಕೆ. & ಕಾ.

ಇಲ್ಲಿ ಕಾರ್ಯಕರ್ತರು ನಿರ್ವಹಿಸಬಹುದಾದ ಪಾತ್ರವೇನೆಂದರೆ ಅಪಘಾತ ಘಟಿಸಿದ ಸಮಯದಲ್ಲಿ ಅಥವಾ ನಂತರ ಸಾಧ್ಯವಾದಷ್ಟು ಬೇಗನೆ ನಿರ್ದಿಷ್ಟ ಮಾಲೀಕನಲ್ಲಿ ಕೆಲಸಗಾರನ ನೌಕರಿಯ ವಿಷಯದ ಬಗ್ಗೆ ಮತ್ತು ಕೆಲಸದ

19 ಕೆಲಸಗಾರನು ನಷ್ಟ ಪರಿಹಾರಕ್ಕಾಗಿ ಹಾಕಬೇಕಾದ ಅರ್ಜಿಯ ಮಾದರಿ ನಮೂನೆಗಾಗಿ ಪರಿಶಿಷ್ಟ 7 ನೋಡಿ.


ಇವನು ನನ್ನಲ್ಲಿ ಕೆಲಸ
ಮಾಡುವುದಿಲ್ಲ. ವಾಸ್ತವವಾಗಿ,
ಇವನ್ಯಾರೋ ನನಗೆ
ಗೊತ್ತೇ ಇಲ್ಲ !

ಸಂದರ್ಭದಲ್ಲೇ ಹಾನಿಯುಂಟಾಯಿತು ಎಂಬುದರ ಬಗ್ಗೆ ಪುರಾವೆಗಳನ್ನು ಸಂಗ್ರಹಿಸುವುದು. ಕಾರ್ಮಿಕ ಅಧಿಕಾರಿಯಲ್ಲಿ ನಂತರ ಮಾಡುವ ಹಕ್ಕುಚಲಾವಣೆಯಲ್ಲಿ ಈ ಪುರಾವೆಗಳು ಬಹಳ ನಿರ್ಣಾಯಕ ಪಾತ್ರ ವಹಿಸುತ್ತದೆ. ಕೆಲವೊಮ್ಮೆ ಮಾಲೀಕನು/ಳು ಅಂಥಾ ಕೆಲಸಗಾರನನ್ನು ತಮ್ಮಲ್ಲಿ ನಿಯೋಜಿಸಿಕೊಂಡಿರುವುದನ್ನು ಮತ್ತು ಎರಡನೆಯದಾಗಿ, ಅಪಘಾತವು ಕೆಲಸದ ವೇಳೆಯಲ್ಲಿ ಸಂಸ್ಥೆಯ ಆವರಣದಲ್ಲೇ ಘಟಿಸಿತು ಎಂಬವುಗಳನ್ನು ಅಲ್ಲಗಳೆಯುತ್ತಾನೆ/ಳೆ.

**ಉದಾಹರಣೆ:** ರೇಷ್ಮೆ-ನೇಯ್ಗೆ ಮತ್ತು ಸಂಗ್ರಹಣಾ ಕಾರ್ಖಾನೆಯಲ್ಲಿ ನೌಕರಿಗಿರುವ ಬಾಲಕಾರ್ಮಿಕಳಾದ ಗಿರಿಜಾ, ಕುದಿವನೀರಿನ ಪಾತ್ರೆ ಅವಳ ಮೇಲೆ ಬಿದ್ದಾಗ ಸುಟ್ಟ ಗಾಯಗಳಿಂದ ಬಳಲಿದಳು. ಆನಂತರ ಹಕ್ಕು ಚಲಾಯಿಸಿದಾಗ, ಮಾಲೀಕನು ಆ ಕೆಲಸಗಾರಳು ತನ್ನಲ್ಲಿ ಕೆಲಸ ಮಾಡುತ್ತಿರುವುದನ್ನೇ ಅಲ್ಲಗಳೆದನು, ಹಾಗೂ ಆ ಅಪಘಾತವು ತನ್ನ ಕೆಲಸದ ಆವರಣದಲ್ಲಿ ಘಟಿಸಿದ್ದನ್ನೂ ಅಲ್ಲಗಳೆದನು. ಪ್ರಕರಣವು ಇನ್ನೂ ಜಟಿಲಗೊಂಡಿದ್ದೇಕೆಂದರೆ, ಆ ಕೆಲಸಗಾರಳನ್ನು ನೌಕರಿಗಿಟ್ಟುಕೊಂಡಿದ್ದನ್ನು ತೋರಿಸುವ ಯಾವ ನೌಕರಿಯ ದಾಖಲಾತಿಗಳನ್ನೂ ಮಾಲೀಕನು ಇಟ್ಟುಕೊಂಡಿರಲ್ಲಿಲ್ಲ. ಇಷ್ಟರ ಮೇಲೆ ಈ ಅಪಘಾತವನ್ನು ಕಂಡದ್ದಕ್ಕಾಗಿ ಕಾರ್ಮಿಕ ಅಧಿಕಾರಿಯ ಮುಂದೆ ಸಾಕ್ಷಿ ಹೇಳಲು, ಕೆಲಸಗಾರಳ ಸಂಬಂಧಿಕರನ್ನು ಬಿಟ್ಟು ಬೇರೆ ಯಾವೊಬ್ಬ ವ್ಯಕ್ತಿಯೂ ಸಿಗಲಿಲ್ಲ.

ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ ವ್ಯಾಪ್ತಿಗೆ ಬರುವ ಬಹುಪಾಲು ನೌಕರಿಗಳಲ್ಲಿನ ಪದ್ಧತಿ ಮೌಖಿಕವಾಗಿ ಮಾಡುವಂಥಾ ನೇಮಕಾತಿ-ಗಳಿಗಾಗಿರುವಂಥದ್ದು. ಇಂಥ ಪರಿಸ್ಥಿತಿಗಳಲ್ಲಿ, ಕೆಲಸಗಾರರು ವೇತನಗಳ ದಾಖಲಾತಿಪುಸ್ತಕದಂತಹ ದಾಖಲೆಪತ್ರಗಳ ಪುರಾವೆಯನ್ನು ಪಡೆಯಲು ಪ್ರಯತ್ನಿಸಬೇಕು. ಮಾಲೀಕನು ಅಂತಹ ದಾಖಲಾತಿಪುಸ್ತಕವನ್ನು ಇಟ್ಟಿಲ್ಲದಿದ್ದರೆ, ಆಗ ಕರ್ನಾಟಕ ಉಚ್ಚನ್ಯಾಯಾಲಯದ ಪ್ರಕಾರ, 'ಒಂದು ಪ್ರತಿಕೂಲ ಅನುಮಾನ'ಕ್ಕೆ ಮಾಲೀಕನು ಗುರಿಯಾಗಬೇಕಾಗುತ್ತದೆ. ಆದ್ದರಿಂದ, ವೇತನ ದಾಖಲಾತಿಪುಸ್ತಕದಂಥವುಗಳನ್ನು ಇಟ್ಟಿಲ್ಲದ ಪ್ರಕರಣಗಳಲ್ಲಿ, ಸಹ-ಕೆಲಸಗಾರರ ಬರಹವೇ ಸಾಕಷ್ಟು ಪುರಾವೆಯಾಗುತ್ತದೆ.[20]

---

20-21 ಎ.ಐ.ಟಿ.ಯು.ಸಿ.ಯ ರಾಜ್ಯ ಕಾರ್ಯದರ್ಶಿ ಮತ್ತು ಕಾರ್ಮಿಕ ವಕೀಲ ಮುರಳೀಧರ ಅವರು ಮತ್ತು ವಿ.ವಿ.ಗಿರಿ ಇನ್ಸ್ಟಿಟ್ಯೂಟಿನ ಶ್ರೀ ಎಸ್. ಬಜಾಜ್ ರವರುಗಳು 18 ಫೆಬ್ರವರಿ 2005 ರಂದು 'ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿ ಪ್ರಕರಣಗಳ ಇತ್ಯರ್ಥಕ್ಕಾಗಿ ವಿಭಾಗದ ಅಧಿಕಾರಿಗಳ

ಕೆಲವೊಮ್ಮೆ ತಮ್ಮ ಕೆಲಸಗಳನ್ನು ಕಳೆದುಕೊಳ್ಳುವ ಭಯದಿಂದ ಸಹ-ಕೆಲಸಗಾರರು ಸಾಕ್ಷಿಹೇಳಲು ಇಷ್ಟಪಡುವುದಿಲ್ಲ. ಇಂಥಾ ಪ್ರಕರಣಗಳಲ್ಲಿ, ಇತರೆ ದಾಖಲೆ ಪುರಾವೆಗಳಿಗಾಗಿ ಪರಿಕಿಸಬೇಕು. ಉದಾ: ಕೆಲಸಗಾರನ ಬ್ಯಾಂಕ್ ಪಾಸ್ ಬುಕ್, ಅಥವಾ ನೌಕರನ ಆಫೀಸಿನ ವಿಳಾಸಕ್ಕೆ ಕಳುಹಿಸಲ್ಪಟ್ಟ ಯಾವುದಾದರೊಂದು ಅಂಚೆಪತ್ರ (ವಲಸೆ ಕೆಲಸಗಾರರಲ್ಲಿ ಅಥವಾ ಕೊಳೆಗೇರಿಯಲ್ಲಿ ವಾಸಿಸುವ ಕೆಲಸಗಾರರಲ್ಲಿ ಇದನ್ನು ಕಾಣಬಹುದು)[21]

ಗಿರಿಜಾಳ ವಕೀಲರು ಏನು ಮಾಡಿದರು? ಇದು ಎಲ್ಲಾ ಕೆಲಸಗಾರರ ನಷ್ಟ ಪರಿಹಾರ ಪ್ರಕರಣಗಳಿಗೂ ಒಂದು ಪ್ರಮುಖ ಕಾನೂನು ತಂತ್ರವಾಗಿದೆ.

ಪರಿಸ್ಥಿತಿಗೆ ಅನುಗುಣವಾಗಿ, ಬಹಳ ಪರಿಣಾಮಕಾರಿಯಾದ ತಂತ್ರವೊಂದೆಂದರೆ, ಅಪರಾಧ ಅಹವಾಲೊಂದನ್ನು ಬರೆದುಕೊಡಲಾಗಿದೆಯೇ ಹಾಗೂ ಅದು ಯಾವ ಹಂತದಲ್ಲಿದೆ ಎಂಬುದು. ಸಾಮಾನ್ಯವಾಗಿ ಕೆಲಸಗಾರನನ್ನು ಅಪಘಾತದ ನಂತರ ಶುಶ್ರೂಷೆಗೆಂದು ಸರ್ಕಾರೀ ಆಸ್ಪತ್ರೆಯೊಂದಕ್ಕೆ ಕೊಂಡೊಯ್ದಾಗ, ಪೊಲೀಸರಿಗೆ ವರದಿ ನೀಡುವ ಒಂದು ಕಾನೂನುಬದ್ಧ ಕರ್ತವ್ಯ ಆಸ್ಪತ್ರೆ ಅಧಿಕಾರಿಗಳ ಮೇಲಿದೆ.

ಉದಾಹರಣೆಗೆ, ಮಾಲೀಕನು ತನ್ನ ಆವರಣದಲ್ಲಿ ಕೆಲಸದಲ್ಲಿ ನಿರತರಾಗಿರುವ ಕೆಲಸಗಾರರ ಸುರಕ್ಷತೆಗೆ ಸಾಕಷ್ಟು ಅನುಕೂಲಗಲನ್ನು ಕಲ್ಪಿಸಿಲ್ಲವಾಗಿ ಅಪರಾಧರೀತ್ಯಾ ಬಾಧ್ಯನಾಗಿರಬಹುದು, ಹಾಗಾಗಿ ಅಪರಾಧೀ ಅವಗಣನೆಯ ಆರೋಪ ಆಗಬಹುದು.

ಈ ದಾರಿ ಕ್ರಮಿಸುವುದರಿಂದ ಎರಡು ರೀತಿಯ ಲಾಭಗಳಿವೆ; ಅಪರಾಧ ವಿಚಾರಣೆಗಳಲ್ಲಿ ಮಾಲೀಕನ ದೋಷ ಸಾಬೀತಾದರೆ, ಕೆಲಸಗಾರರ ನಷ್ಟ ಪರಿಹಾರ ಪ್ರಕರಣ ನಿರ್ಧರಿಸುತ್ತಿರುವ ಕಾರ್ಮಿಕ ಅಧಿಕಾರಿಯ ಎದುರು ಇರುವ ದಾವೆಯಲ್ಲಿ ಅವನ/ಳ ಬಾಧ್ಯತೆಯನ್ನು ಸಾಬೀತು ಮಾಡಲು ಅಪಾರವಾಗಿ ಸಹಾಯವಾಗುತ್ತದೆ. ಎರಡಯೆಯದಾಗಿ, ವಿಷಯವನ್ನು ಇತ್ಯರ್ಥ ಮಾಡಲು ಮಾಲೀಕನ ಮೇಲೆ ಅದು ಒತ್ತಡ ಹೇರುತ್ತದೆ.

ಒಂದು ವೇಳೆ ಅರ್ಜಿ ಸಲ್ಲಿಸುತ್ತಿರುವ ಕೆಲಸಗಾರನು ಪ್ರಕರಣದ ಅಂತಿಮ ಫಲಿತಾಂಶ ಹೊರಬೀಳುವ ಮುನ್ನವೇ ಸಾವಿಗೀಡಾದರೆ, ಅರ್ಜಿಯನ್ನು ಮುಂದುವರೆಸಲು ಅವನ ಕಾನೂನುರೀತ್ಯಾ ಇರುವ ವಾರಸುದಾರರಿಗೆ

20-21 ...ಪಾತ್ರ ಹಾಗೂ ಅವರ ಅಧಿಕಾರ ಮತ್ತು ಕಾರ್ಯಗಳು, ಗ್ರಾಚೂಯಿಟಿ ಸಂದಾಯ ಅಧಿನಿಯಮ ಮತ್ತು ಕನಿಷ್ಟವೇತನ ಕಾಯ್ದೆಯಡಿಯ ಕನಿಷ್ಟ ವೇತನ ಹಕ್ಕು ಚಲಾವಣೆ' ಎಂಬ ವಿಷಯವಾಗಿ ನಡೆದ ಕಾರ್ಯಾಗಾರದಲ್ಲಿ ಒಬ್ಬರ ನಂತರ ಒಬ್ಬರು ಮಾತನಾಡುತ್ತಾ ಹೇಳಿದಂತೆ.

ಯಾವುದೇ ಅಭ್ಯಂತರವಿಲ್ಲ. ಸಾವಿಗೀಡಾದ ಅರ್ಜಿದಾರನು ಮೂಲವಾಗಿ ಹಾಕಿದ ಅಂಥಾ ಅರ್ಜಿಯನ್ನು ಮುಂದುವರೆಸಲು ಆ ಕಾನೂನು ರೀತ್ಯಾ ವಾರಸುದಾರರು ಇಷ್ಟೇ ಸಮಯದ ಒಳಗೆ ದಾಖಲಿಗೆ ಬರಬೇಕೆಂಬ ಯಾವ ನಿಗದಿತ ಅವಧಿಯೂ ಇಲ್ಲ.

## ಕಾ.

### v. ಕಾಣಿಸಿಕೊಳ್ಳುವುದು ಮತ್ತು ಪುರಾವೆಯ ದಾಖಲು (ಕ. 24 & 25)

- ಭಾಗೀದಾರರುಗಳು (ಕಕ್ಷಿದಾರರುಗಳು) ತಾವುಗಳೇ ಆಯುಕ್ತರ ಎದುರು ಅಥವಾ ಅವರ ಸಮ್ಮುಖದಲ್ಲಿ ಕಾಣಿಸಿಕೊಳ್ಳಬೇಕು. ಒಬ್ಬ ನೋಂದಾಿತ ವೃತ್ತಿಪರ ವಕೀಲ/ವಾಣಿಜ್ಯ ಒಕ್ಕೂಟದ ಸದಸ್ಯ/ಇನ್ಸ್‌ಪೆಕ್ಟರ್ ಅಥವಾ ಈ ಉದ್ದೇಶಕ್ಕೆ ಸರ್ಕಾರದಿಂದ ನೇಮಕವಾದ ಇತರೆ ವ್ಯಕ್ತಿ ಕೆಲಸಗಾರನನ್ನು ಪ್ರತಿನಿಧಿಸಬಹುದು ಅಥವಾ ಅವಶ್ಯಕವಾದರೆ ಕಕ್ಷಿದಾರರನ್ನು ಪ್ರತಿನಿಧಿಸಬಹುದು.

**ಸೂಚನೆ:** ಕೆಲವೊಮ್ಮೆ ಮಾಲೀಕನು ತಲೆಮರೆಸಿಕೊಂಡಿರುತ್ತಾನೆ, ಮತ್ತು ಆಯುಕ್ತರ ಮುಂದೆ ಹಾಜರಾಗಲು ಆಜ್ಞಾಪನೆಗಳಿಂದ ಸಫಲವಾಗಿ ತಪ್ಪಿಸಿಕೊಳ್ಳುತ್ತಾನೆ ಹಾಗೂ ತನ್ನ ಬರಹದ ಪತ್ರವನ್ನು ಪ್ರಸ್ತುತಪಡಿಸುತ್ತಾನೆ (ತಾನು ನಷ್ಟ ಪರಿಹಾರ ನೀಡಲು ಬಾಧ್ಯನಲ್ಲವೆಂದು ಸಾಬೀತು ಮಾಡುತ್ತಾ). ಆಗ ಅನುಸರಿಸುವ ರೀತಿಯೆಂದರೆ, ಅಂಥಾ ಆಜ್ಞಾಪನೆಗಳನ್ನು ರಾಜ್ಯ ಗೆಜ಼ೆಟ್ ಪುಸ್ತಕದಲ್ಲಿ ಮತ್ತು ಪತ್ರಿಕೆಯಲ್ಲಿ (ಸಾಕಷ್ಟು ಚಲಾವಣೆಯಲ್ಲಿರುವ ಸ್ಥಳೀಯ ಪತ್ರಿಕೆ) ಆಯುಕ್ತರ ಕಡೆಯಿಂದ ಮುದ್ರಿತವಾಗಿಸುವುದು, ಅಥವಾ, ಆ ಆಜ್ಞಾಪನೆಗಳ ಪ್ರತಿ ಒಂದನ್ನು ಮಾಲೀಕನ ಕಾರ್ಯಸ್ಥಳಗಳಲ್ಲಿ ಅಂಟಿಸುವುದು. ಇಷ್ಟಾದ ಮೇಲೂ, ಮಾಲೀಕನು ಕಾಣಿಸಿಕೊಳ್ಳದಿದ್ದರೆ, ಅವನಿಲ್ಲದೆಯೇ ವ್ಯಾಜ್ಯವು ಮುಂದುವರೆಯುವುದು ಹಾಗೂ ಅವನು/ಳು ಆಗಬಹುದಾದ ಪ್ರತಿಕೂಲಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

- ಪ್ರತಿಯೊಬ್ಬ ಸಾಕ್ಷಿದಾರರೂ ನೀಡಿದ ಸಾಕ್ಷಿಗಳ ಸಾರವನ್ನು ದಾಖಲಿಸಿ ಆಯುಕ್ತರು ಒಂದು ಜ್ಞಾಪನವನ್ನು ತಯಾರಿಸಬೇಕು. ಇದನ್ನು ಅವರ ಕೈಯ್ಯಾರೆ ಬರೆಯಬೇಕು ಮತ್ತು ಸಹಿ ಹಾಕಬೇಕು, ಹಾಗೂ ಈ ಜ್ಞಾಪನವು ಅಧಿಕೃತ ದಾಖಲುಗಳ ಒಂದು ಭಾಗವಾಗುತ್ತದೆ.

**ಸೂಚನೆ:** ಈ ಸಂಬಂಧದಲ್ಲಿ ಕೆಲಸಗಾರನಾಗಲೀ, ಮಾಲೀಕನಾಗಲೀ ಕೆಲಸಗಾರನಿಗೆ ಎಷ್ಟು ವೇತನ ನೀಡಲಾಗುತ್ತಿತ್ತು ಎಂಬುದಕ್ಕೆ ತಮ್ಮ ತಮ್ಮ

ಹಕ್ಕುಚಲಾವಣೆಯನ್ನು ಪುಷ್ಟೀಕರಿಸುವ ಯಾವುದೇ ಕಾಗದಪತ್ರಗಳನ್ನು ಪ್ರಸ್ತುತಪಡಿಸಲು ಸಾಧ್ಯವಾಗದಾಗ, ಬೆಂಗಳೂರಿನಲ್ಲಿ ರೂಢಿಯೆಂದರೆ, ಕಾರ್ಮಿಕ ಅಧಿಕಾರಿಯು ಕೆಲಸಗಾರನ ಹಕ್ಕುಚಲಾವಣೆಯನ್ನು ಬೆಂಬಲಿಸುತ್ತಾರೆ!

- ಎರಡೂ ಕಕ್ಷಿದಾರರುಗಳಿಂದ ವಾದಗಳನ್ನು ಮಂಡಿಸಲಾಗುತ್ತದೆ, ನಂತರ ಆಯುಕ್ತರಿಂದ ಆದೇಶವೊಂದನ್ನು ಹೊರಡಿಸಲಾಗುತ್ತದೆ.
- ಆಯುಕ್ತರು, ತಮಗೆ ಸರಿಯೆಂದು ತೋಚಿದರೆ, ಇಂಥ ಒಂದು ವಿಷಯವನ್ನು ಉಚ್ಚನ್ಯಾಯಾಲಯಕ್ಕೆ ಒಪ್ಪಿಸಬಹುದು.

## ಕೆ. & ಕಾ.

### vi. ಮಾಲೀಕನು ನಷ್ಟಪರಿಹಾರವನ್ನು ನೀಡುವಲ್ಲಿ ನಿಧಾನ ಮಾಡಿದರೆ ಏನಾಗುತ್ತದೆ? (ಸೆಕ್ಷನ್ 4–ಎ)

ನಷ್ಟಪರಿಹಾರವನ್ನು ಕೆಲಸಗಾರನಿಗೆ ಗಾಯವಾದ ಕೂಡಲೆ ನೀಡತಕ್ಕದ್ದು. ನಷ್ಟಪರಿಹಾರದ ಸಮಯ ಶುರುವಾದ ಒಂದು ತಿಂಗಳೊಳಗಾಗಿ ಊನತ್ವ ಹೊಂದಿದ ಕೆಲಸಗಾರನಿಗೆ ಮಾಲೀಕನು ಪರಿಹಾರಹಣವನ್ನು ನೀಡದಿದ್ದಲ್ಲಿ, ಆಗ ಆಯುಕ್ತರು ಅರ್ಜಿಯೊಂದರ ಮೇಲೆ ಕೆಲಸಗಾರನಿಗೆ ಈ ರೀತಿಯಲ್ಲಿ ಪರಿಹಾರ ನೀಡಬಹುದು:–

(ಅ) ಕೆಲಸಗಾರನಿಗೆ ನಷ್ಟಪರಿಹಾರವನ್ನು ನೀಡುವಂತೆ, ಜೊತೆಗೆ 12% ದರದಂತೆ ಅಥವಾ ಇನ್ನ್ಯಾವುದೇ ದರದಂತೆ, ಆದರೆ ಶೆಡ್ಯೂಲ್ಡ್ ಬ್ಯಾಂಕ್ ಒಂದರ ದರಕ್ಕಿಂತ ಹೆಚ್ಚಿಲ್ಲದಂತೆ, ಅಥವಾ ಅಧಿಕೃತ ಗೆಜೆಟ್ ಒಂದರಲ್ಲಿ ಪ್ರಕಟಗೊಂಡಂತೆ ಸರಳ ಬಡ್ಡಿ ನೀಡುವಂತೆ ಆಯುಕ್ತರು ಮಾಲೀಕನಿಗೆ ನಿರ್ದೇಶಿಸಬಹುದು; ಮತ್ತು

(ಆ) ಕೆಲಸಗಾರನಿಗೆ ನೀಡಿದ ಹಣದಲ್ಲಿ ತಡವಾದುದಕ್ಕೆ ಯಾವುದೇ ಸಮರ್ಥನೆ ಇರಲಿಲ್ಲ ಎಂದು ಆಯುಕ್ತರಿಗೆ ಅನ್ನಿಸಿದರೆ, ಈ ಸರಳ ಬಡ್ಡಿಯ ಜೊತೆಗೆ, ನೀಡಬೇಕಾದ ನಷ್ಟಪರಿಹಾರದ 50% ಕ್ಕಿಂತ ಹೆಚ್ಚಿಲ್ಲದಷ್ಟು ಜುಲ್ಮಾನೆ ನೀಡಲು ಅವರು ಆದೇಶಿಸಬಹುದಾಗಿದೆ.

ಹಕ್ಕುಚಲಾವಣೆಯ ನಡಾವಳಿಗಳನ್ನು ಪೂರ್ಣಗೊಳಿಸಿದ ನಂತರ ಮತ್ತು ಕೆಲಸಗಾರರ ನಷ್ಟಪರಿಹಾರದ ಆಯುಕ್ತರು ಕೆಲಸಗಾರನಿಗೆ ಪರಿಹಾರ ನೀಡಿದ ಆದೇಶವೊಂದನ್ನು ಹೊರಡಿಸಿದ ನಂತರ ಕೆಲಸಗಾರನು 'ಅರ್ಜಿಯನ್ನು ಹಾಕಿಕೊಂಡರೆ ಮಾತ್ರ' ಬಡ್ಡಿ ಮತ್ತು ಜುಲ್ಮಾನೆಯನ್ನು ಆಯುಕ್ತರು

ವಿಧಿಸಬಹುದು. 'ಸ್ವಾಭಾವಿಕನ್ಯಾಯ'[22] ದ ತತ್ವಗಳಿಗೆ ಹೊಂದುವಂತೆ, ಜುಲ್ಮಾನೆ ನೀಡುವಂತೆ ನಿರ್ದೇಶಿಸಿ ಅಂಥಾ ಆದೇಶವೊಂದನ್ನು ಹೊರಡಿಸುವ ಮುನ್ನ ಆಯುಕ್ತರಲ್ಲಿ ಹೇಳಿಕೆ ನೀಡುವ ಅವಕಾಶವನ್ನು ಮಾಲೀಕನಿಗೆ ಕೊಡಬೇಕಾಗುತ್ತದೆ.

**ಕ. ಸಂ.**

ಕರ್ನಾಟಕದಲ್ಲಿ ಹೆಚ್ಚಾಗಿ, ಜುಲ್ಮಾನೆ ವಿಧಿಸುವ ರೂಢಿ ಇಲ್ಲ, ಸಾಮಾನ್ಯವಾಗಿ ಕಾರ್ಮಿಕಾಧಿಕಾರಿಯೇ ಬಡ್ಡಿ ಹಾಕುತ್ತಾರೆ. ಅಪರೂಪವಾಗಿ, ಮಾಲೀಕನು ಬೇಕೆಂದೇ ಹಣವನ್ನು ಠೇವಣಿ ಇಡದಿದ್ದಲ್ಲಿ, ಅಧಿಕಾರಿಗಳು ಮಾಲೀಕನ ನಡವಳಿಕೆಯನ್ನು ಗಮನಿಸಿದ ನಂತರ ಜುಲ್ಮಾನೆಯೊಂದನ್ನು ವಿಧಿಸಬಹುದು.

## ನಷ್ಟಪರಿಹಾರ ನೀಡುವಲ್ಲಿ ತಡವಾದ ಪ್ರಕರಣಗಳಲ್ಲಿ ವಿಮಾಕಂಪನಿಯು ಬಡ್ಡಿ ಮತ್ತು ಜುಲ್ಮಾನೆ ನೀಡಲು ಬಾಧ್ಯವಾಗಿರುತ್ತದೆಯೇ?

ಸರ್ವೋಚ್ಚ ನ್ಯಾಯಾಲಯ ಎತ್ತಿಹಿಡಿದಿರುವಂತೆ[23] ಅವಧಿ ಶುರುವಾದ ಒಂದು ತಿಂಗಳೊಳಗಾಗಿ ನಷ್ಟಪರಿಹಾರವು ನೀಡಿಲ್ಲವಾದಲ್ಲಿ, ಆಗ ಬಡ್ಡಿ ನೀಡಬೇಕಾದ್ದು ಬಹುಪಾಲು ತಾನೇತಾನಾಗಿ ಅನ್ವಯಿಸುತ್ತದೆ. ನೀಡಬೇಕಾದ ನಷ್ಟಪರಿಹಾರವು ಬಾಧ್ಯತೆಯ ಅವಿಭಾಜ್ಯ ಅಂಗವೆಂದು ಅದನ್ನು ಪರಿಗಣಿಸಲಾಗಿದೆ. ಅದ್ದರಿಂದ, ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ ಅಡಿಯಲ್ಲಿ ಹುಟ್ಟಿಕೊಳ್ಳುವ ಯಾವುದೇ ಬಾಧ್ಯತೆಗಳಿಗೆ ಮಾಲೀಕನು ವಿಮೆ ಮಾಡಿಸಿದಾಗ, ವಿಮಾಕಂಪೆನಿಯು ನಷ್ಟಪರಿಹಾರವನ್ನೂ ಅದರ ಮೇಲಿನ ಬಡ್ಡಿಯನ್ನೂ ನೀಡಬೇಕಾಗುತ್ತದೆ. ಕೆಲಸಗಾರರ ನಷ್ಟಪರಿಹಾರಕ್ಕಿರುವ ಆಯುಕ್ತರು ಬಡ್ಡಿಯನ್ನು ಅಪಘಾತವಾದ ದಿನಾಂಕದಿಂದ ಇಲ್ಲವಾದರೆ ನಷ್ಟಪರಿಹಾರಕ್ಕಾಗಿ ಹೊರಡಿಸಿದ ಆದೇಶದ ದಿನಾಂಕದಿಂದ ಲೆಕ್ಕ ಹಾಕಬಹುದು. ಈ ಎರಡರಲ್ಲೊಂದನ್ನು ಮಾಡಲು ಅವನ/ಅವಳ ಅಧಿಕಾರಗಳೊಳಗೇ ಇದೆ.

ಜುಲ್ಮಾನೆ ನೀಡುವ ವಿಷಯವಾಗಿ ಎತ್ತಿ ಹಿಡಿದ ತೀರ್ಪು ಏನೆಂದರೆ, ಆಗಿರುವ ತಡವು, ವಿಮೆಗೊಂಡ ಮಾಲೀಕನ ವೈಯುಕ್ತಿಕ ತಪ್ಪು ಮತ್ತು

---

22 'ಸ್ವಾಭಾವಿಕ ನ್ಯಾಯ' ಎಂಬುದು ನ್ಯಾಯವನ್ನು ಖಚಿತವಾಗಿಸಲು ಮತ್ತು ನ್ಯಾಯವು ಭಂಗವಾಗುವುದನ್ನು ತಪ್ಪಿಸಲು ನ್ಯಾಯಾಲಯಗಳಿಂದ ವಿಕಾಸಗೊಂಡ ಪದ್ಧತಿಗೆ ಸಂಬಂಧಿಸುತ್ತದೆ.

23 ವೇದ್ ಪ್ರಕಾಶ್ ಗರ್ಗ್, ಮೇಲ್ಮನವಿಯವ, ವಿ/ರು ಪ್ರೇಮಿದೇವಿ ಮತ್ತು ಇತರರು, ಪ್ರತಿವಾದಿಗಳು, 998, 001 ಎಲ್.ಎಲ್.ಜೆ. 363 ಎಸ್.ಸಿ.

ಅಸಡ್ಡೆಯಿಂದಾಗಿರುವುದರಿಂದ, ಆತನೇ ಜುಲ್ಮಾನೆಯನ್ನು ನೀಡಬೇಕಾಗುವುದೇ ಹೊರತು, ವಿಮಾಕಂಪನಿ ಅಲ್ಲ.

ಸರ್ವೋಚ್ಚ ನ್ಯಾಯಾಲಯವು ಕರ್ನಾಟಕದ ಉಚ್ಚ ನ್ಯಾಯಾಲಯದ ತೀರ್ಪೊಂದನ್ನು ಸಮ್ಮತಿಸಿತು. ಕರ್ನಾಟಕದ ಅದೊಂದು ಪ್ರಕರಣದಲ್ಲಿ[25] ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ ಅಡಿಯಲ್ಲಿ ನೀಡಬೇಕಾದ ಯಾವುದೇ ನಷ್ಟಪರಿಹಾರದ ಸಂದರ್ಭದಲ್ಲಿ ಬಡ್ಡಿ ಮತ್ತು ಜುಲ್ಮಾನೆ ನೀಡುವುದನ್ನು ಮಾಲೀಕನು ತೆಗೆದುಕೊಂಡಿದ್ದ ವಿಮಾಪಾಲಿಸಿಯಲ್ಲಿ ಸ್ಪಷ್ಟೋಕ್ತವಾಗಿ ಹೊರಹಾಕಲಾಗಿತ್ತು. ಹಾಗಾಗಿ ಉಚ್ಚ ನ್ಯಾಯಾಲಯವು ಏನೆಂದು ನಿರ್ಣಯಿಸಿತೆಂದರೆ ನಷ್ಟ ಪರಿಹಾರದ ಜೊತೆಗೆ ಬಡ್ಡಿಯನ್ನು ನೀಡಲು ವಿಮಾಕಂಪನಿಯು ಬಾಧ್ಯವಾಗಿರುವುದಿಲ್ಲ ಎಂದು. ಆದ್ದರಿಂದ ತೆಗೆದುಕೊಂಡ ವಿಮಾಪಾಲಿಸಿಯ ಕರಾರು ನಿಬಂಧನೆಗಳ ಮೇಲೆ ಅದು ಅವಲಂಬಿಸಿದೆ.

### vii. ಮೇಲ್ಮನವಿ (ಕ. 30)

ಕೆಲಸಗಾರನೊಬ್ಬನು ಯಾವ ತೀರ್ಪಿನ ವಿರುದ್ಧವಾಗಿಯಾದರೂ ಮೇಲ್ಮನವಿ ಮಾಡಬಹುದು ಮತ್ತೆ ಅದನ್ನು ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಬಹುದು. ಇದನ್ನು ಕೆಲವು ಸನ್ನಿವೇಶಗಳಲ್ಲಿ ಮಾತ್ರ ಮಾಡಬಹುದು ಮತ್ತು ಆಯುಕ್ತರು ಅಂಥಾ ಮೇಲ್ಮನವಿಗೆ ಅನುವು ಮಾಡಿಕೊಟ್ಟರೆ ಮಾತ್ರ. ಹಾಗೆ ಅನುವು ಮಾಡಿಕೊಟ್ಟದ್ದಕ್ಕೆ ಮನವಿಯೊಡನೆ ಲಗತ್ತಿಸಲಾಗುವ ಅವರ ಪ್ರಮಾಣಪತ್ರ-ದಿಂದ ಮನವಿಯು ನಿರ್ಧರಿತವಾಗುತ್ತದೆ. ಮನವಿಯೊಂದನ್ನು ಮಾಡಲು ಇರುವ ನಿಬಂಧನೆಗಳನ್ನು ಪರಿಶಿಷ್ಟ 2 ರಲ್ಲಿ ತಿಳಿಸಲಾಗಿದೆ.

## ಕಾ.

### ಎರಡು ಪರಿಹಾರಗಳ ವಿರುದ್ಧ ಪ್ರತಿಬಂಧ [ಕ. 3 (5)]

ಗಾಯಗೊಂಡ ಕೆಲಸಗಾರನು ಒಮ್ಮೆ ಮಾಲೀಕನ ವಿರುದ್ಧ ಕಾರ್ಯ ಶುರುಮಾಡಿದರೆ, ಅಥವಾ ಅವನೊಡನೆ ಒಪ್ಪಂದವೊಂದಕ್ಕೆ ಬಂದರೆ ಆತು, ಅಂಥಾ ಕೆಲಸಗಾರನು ಅದೇ ಹಾನಿಗಾಗಿ ಸಿವಿಲ್ ನ್ಯಾಯಾಲಯವೊಂದರಲ್ಲಿ ಜೊತೆಜೊತೆಗೇ ನಡಾವಳಿಯನ್ನು ಶುರುಮಾಡಿಸುವ ಹಾಗಿಲ್ಲ. (ಆದರೆ ಅವನೋ/ಳೋ ಕ್ರಿಮಿನಲ್-ನ್ಯಾಯಾಲಯವೊಂದರಲ್ಲಿ ಹಾಗೆ ಮಾಡಬಹುದು). ಅದೇ ರೀತಿ, ಕೆಲಸಗಾರನೊಬ್ಬನು ಕೆಲಸದ ಸಂದರ್ಭದಲ್ಲಿ ಒಳಗಾದ ದೈಹಿಕ ಹಾನಿ ಕುರಿತು ನಷ್ಟಪರಿಹಾರಕ್ಕೆ ನಾಗರೀಕ

25 ಓರಿಯೆಂಟಲ್ ವಿಮಾ ಕಂಪನಿ ಲಿಮಿಟೆಡ್, ವಿರುದ್ಧ. ರಾಜು, 1994 ಎಸಿಜೆ 191

ನ್ಯಾಯಾಲಯವೊಂದರಲ್ಲಿ ದಾವೆಯೊಂದನ್ನು ಹೂಡಿದರೆ, ಆಗ ಅವನು/ಳು ಈ ಅಧಿನಿಯಮದಡಿ ಕಾರ್ಮಿಕ ಆಯುಕ್ತರಿಗೆ ಬರೆದುಕೊಳ್ಳುವಂತಿಲ್ಲ. ಆದ್ದರಿಂದ ಕೆಲಸಗಾರನು ತನಗೆ ಬೇಕಾದ ರೀತಿಯ ಪರಿಹಾರವನ್ನು ಆರಿಸಿಕೊಳ್ಳಬಹುದು, ಅವೆಂದರೆ, ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ ಅಡಿಯಲ್ಲಿ, ಇಲ್ಲವೇ ನಾಗರಿಕ ನ್ಯಾಯಾಲಯದ ಅಡಿಯಲ್ಲಿ ಅಥವಾ ಮೋಟಾರು ವಾಹನಗಳ ಕಾಯ್ದೆ (ಮೋಟಾರು ಅಪಘಾತವಾಗಿದ್ದರೆ), ಆದರೆ ಒಂದಕ್ಕಿಂತ ಹೆಚ್ಚು ಪರಿಹಾರಕ್ಕೆ ಅವನು/ಳು ಅರ್ಜಿ ಹಾಕಿಕೊಳ್ಳುವಂತಿಲ್ಲ.

**ಕ. ಸಂ.**

ಕೆಲಸಗಾರನೊಬ್ಬನು ಮೋಟಾರು ವಾಹನಗಳ ಅಪಘಾತಗಳ ಹಕ್ಕುಚಲಾವಣಾ ಪೀಠ (ಎಮ್.ವಿ.ಸಿ.ಟಿ) ಸಮ್ಮುಖಕ್ಕೆ ಅರ್ಜಿಯೊಂದನ್ನು ಹಾಕಿಕೊಂಡಿದ್ದರೆ, ಅದನ್ನು ನಂತರ ಆ ವೇದಿಕೆಯಿಂದ ಹಿಂತೆಗೆದುಕೊಳ್ಳಲು ಸಾಧ್ಯವಿದೆ ಮತ್ತು ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ ಅಡಿ ಮತ್ತೊಂದು ಅರ್ಜಿ ಹಾಕಿಕೊಳ್ಳಬಹುದು. ಒಂದೇ ಒಂದು ಅವಶ್ಯಕತೆ ಏನೆಂದರೆ ಅವಳು/ನು ಎಂ.ವಿ.ಸಿ.ಟಿ. ಮೂಲಕ ಯಾವ ನಷ್ಟಪರಿಹಾರವನ್ನೂ ಪಡೆದಿಲ್ಲವೆಂದು ಸಾಬೀತು ಮಾಡಬೇಕಾಗುತ್ತದೆ.

# ಪರಿಶಿಷ್ಟಗಳು

ಪರಿಶಿಷ್ಟಗಳು

# ಪರಿಶಿಷ್ಟ 1

# ಮಾಸಿಕ ವೇತನ ಲೆಕ್ಕಹಾಕುವ ರೀತಿ (ಕಲಂ 5)

ಮಾಸಿಕ ವೇತನದ ಲೆಕ್ಕಾಚಾರದಲ್ಲಿ ಒಂದು ಪರಿಸ್ಥಿತಿಯಿಂದ ಇನ್ನೊಂದು ಪರಿಸ್ಥಿತಿಗೆ ವ್ಯತ್ಯಾಸವಿರುತ್ತದೆ. ಅವುಗಳು ಹೀಗಿವೆ:

ಕೆಲಸಗಾರನು ಅಪಘಾತಕ್ಕೂ ಮುನ್ನ ಒಂದು ವರ್ಷಕ್ಕೂ ಮೇಲ್ಪಟ್ಟು ಸೇವೆಯಲ್ಲಿದ್ದರೆ, ಆಗ ಮಾಸಿಕ ವೇತನವನ್ನು ಕೆಲಸಗಾರನು ಕಳೆದ ವರ್ಷವಿಡೀ ತೆಗೆದುಕೊಂಡ ವೇತನಗಳ ಹನ್ನೆರಡನೇ–ಒಂದು ಭಾಗ ಎಂದು ಲೆಕ್ಕ ಹಾಕಲಾಗುತ್ತದೆ.

**ಸೂಚನೆ:** ಈ ಮೇಲಿನದು, ಅಪಘಾತಕ್ಕೆ ಮುಂಚೆ 12 ತಿಂಗಳು ಅದೇ ಮಾಲೀಕನ ಅಡಿಯಲ್ಲಿ ಸತತ ನೌಕರಿಯಲ್ಲಿ ಇದ್ದಂತಹ ಕೆಲಸಗಾರರುಗಳ ಪ್ರಕರಣಗಳನ್ನು ಮಾತ್ರ ಒಳಗೊಳ್ಳುತ್ತದೆ. ಕೆಲಸಗಾರನೊಬ್ಬ ಒಂದು ನಿರ್ದಿಷ್ಟ ಸಂಖ್ಯೆಯ ಮಾಲೀಕರುಗಳಿಂದ ಕೆಲಸದಲ್ಲಿ ಉಳಿಸಿಕೊಂಡಿದ್ದಕ್ಕಾಗಿ ದಾಖಲುಗಳನ್ನು ಸ್ವೀಕರಿಸಿಟ್ಟುಕೊಂಡಿರಬಹುದು ಮತ್ತು ಹಿಂದಿನ ವರ್ಷವಿಡೀ ನಿಯತಕಾಲಗಳಲ್ಲಿ ಅವರುಗಳಿಂದ ನೌಕರಿಗಿಟ್ಟುಕೊಂಡಿರಬಹುದು. ಆದರೂ ಸೆಕ್ಷನ್ 5(ಎ) ಇಲ್ಲಿ ಅನ್ವಯವಾಗುವುದಿಲ್ಲ.

ಕೆಲಸಗಾರನೇನಾದರೂ ಅಪಘಾತಕ್ಕೂ ಮುನ್ನ ಒಂದು ತಿಂಗಳಿಗಿಂತ ಕಡಿಮೆ ಕೆಲಸಮಾಡಿದ್ದರೆ, ಆಗ ಒಬ್ಬ ಅದೇ ಸಾಮರ್ಥ್ಯದ, ಅದೇ ಸ್ಥಳದಲ್ಲಿ ಅದೇ ರೀತಿಯ ಕೆಲಸ ಮಾಡುವವ ತನ್ನ ಮಾಸಿಕ ವೇತನವಾಗಿ ಏನು ಪಡೆಯುತ್ತಾನೋ ಅದೇ ಮಾಸಿಕ ವೇತನದ ಮೊತ್ತವಾಗಿರುತ್ತದೆ. [ಕಲಂ 5 (ಬಿ)].

ದಿನಗೂಲೀ ಕೆಲಸಗಾರನಿಗೆ ಮಾಸಿಕ ವೇತನ ಲೆಕ್ಕಹಾಕುವ ರೀತಿಯನ್ನು ಸೆಕ್ಷನ್ 5 (ಸಿ) ಅಡಿಯಲ್ಲಿ ಕೊಡಲಾಗಿದೆ. ಆ ಸೆಕ್ಷನ್ ಪ್ರಕಾರ, 'ಕೊನೆಯ ಸತತ ಅವಧಿಯ' ಕೆಲಸದಲ್ಲಿ ದಿನಗೂಲೀ ಕೆಲಸಗಾರನು ಸಂಪಾದಿಸಿದ ಒಟ್ಟು ಕೂಲಿಯನ್ನು ಮೂವತ್ತರಿಂದ ಗುಣಾಕಾರ ಮಾಡಿ, ಮತ್ತು ಆ ಅವಧಿಯಲ್ಲಿ ದಿನಗಳ ಸಂಖ್ಯೆಯಿಂದ ಭಾಗಿಸುವುದು. 'ಕೊನೆಯ ಸತತ ಅವದಿ' ಎಂದರೆ ಕೊನೆಯ ಮೂವತ್ತು ಕೆಲಸ ಮಾಡಿದ ದಿನಗಳು.

ದಿನಗೂಲೀ ಕೆಲಸಗಾರನಿಗೆ ಸದಾಕಾಲವೂ ಅವಶ್ಯಕವಾಗಿ ಕೆಲಸ ಸಿಗುವುದಿಲ್ಲವೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಪದದ ಸಾಮಾನ್ಯ ಅರ್ಥದಲ್ಲಿ ಈ ಕೆಲಸದ ಅವಧಿಯೂ 'ಸತತ' ಎಂದೆನಿಸಿಕೊಳ್ಳುವುದಿಲ್ಲ. ಕೆಲಸಗಾರನಿಗೆ 5 ದಿನಗಳು ಕೆಲಸ ಸಿಕ್ಕಿರುವ ಸಂದರ್ಭಗಳಿರಬಹುದು, ಆಮೇಲೆ ಮುಂದಿನ ಎಂಟು ದಿನಗಳಲ್ಲಿ ಕೆಲಸವಿಲ್ಲದೇ ಹೋಗಬಹುದು, ಮತ್ತೆ ಕೆಲಸ ಸಿಗಬಹುದು. ಎಲ್ಲಿಯವರೆಗೆ ಕೆಲಸವಿಲ್ಲದಿರುವ ಅವಧಿಯೂ ಹದಿನಾಲ್ಕು ದಿವಸಗಳಿಗಿಂತ ಹೆಚ್ಚಿಲ್ಲವೋ, ಆವರೆಗೆ ಕೊನೆಯ ಮೂವತ್ತು ದಿನಗಳ ಕೆಲಸವನ್ನು ಮಾಸಿಕ ವೇತನ ಲೆಕ್ಕಹಾಕಲು ಗಣನೆಗೆ ತೆಗೆದುಕೊಳ್ಳಬಹುದು.

ಕೆಲಸಗಾರನು ಆ ಅವಧಿಯಲ್ಲಿ ಒಬ್ಬನೇ ಒಬ್ಬ ಮಾಲೀಕನಿಂದ ನಿಯೋಜಿಸಲ್ಪಟ್ಟಿದ್ದನು ಎಂಬುದೂ ಅವಶ್ಯಕವಲ್ಲ. ಅವನು/ಳು ಅಪಘಾತ ಘಟಿಸಿದ ಸಮಯದಲ್ಲಿ ಯಾವ ಮಾಲೀಕನಿಂದಾಗಿ ಕೆಲಸ ಮಾಡುತ್ತಿದ್ದನೋ/ಳೋ ಆ ಮಾಲೀಕ ನಷ್ಟಪರಿಹಾರ ನೀಡಲು ಬಾಧ್ಯನಾಗುತ್ತಾನೆ.

ತುಣುಕು ದರ ಪಡೆಯುವ ಕೆಲಸಗಾರನ ತಿಂಗಳ ವೇತನವನ್ನು ಸೆಕ್ಷನ್ ೫ ರಲ್ಲಿ ಕೊಟ್ಟಿರುವ ಯಾವ ಪದ್ಧತಿಯನ್ನಾದರೂ ಉಪಯೋಗಿಸಿ ಲೆಕ್ಕ ಹಾಕಬಹುದು. ತಿಳಿಸಿರುವ ಸೆಕ್ಷನ್ನಿನ ಅನುಸೂಚಿ (ಬಿ) ಅಥವಾ (ಸಿ) ಯನ್ನು ಒಂದು ತಿಂಗಳಿಗಿಂತ ಕಡಿಮೆ ಕೆಲಸಮಾಡಿರುವ ತುಣುಕು ದರ ಪಡೆಯುವ ಕೆಲಸಗಾರನಿಗೆ ಉಪಯೋಗಿಸಬಹುದು. ಮಾಸಿಕ ವೇತನ ಗಣಕ ಮಾಡುವಾಗ ನೀಡಲಾಗುವ ವೇತನಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.

# ಪರಿಶಿಷ್ಟ 2 ಮೇಲ್ಮನವಿಗೆ ನಿಬಂಧನೆಗಳು

ಮೇಲ್ಮನವಿಗೆ ನಿಬಂಧನೆಗಳು ಯಾವುವೆಂದರೆ:

- ಒಂದು ಗಂಟು ಮೊತ್ತವನ್ನು ನಷ್ಟಪರಿಹಾರವಾಗಿ ನೀಡಲು ಹೊರಡಿಸಿದ ಆದೇಶವೊಂದು ಅರ್ಧ-ಮಾಸಿಕ ಸಂದಾಯದ ಬಿಡುಗಡೆಯ ರೀತಿಯಾಗಿಯೋ ಅಥವಾ ಒಟ್ಟಾಗಿಯೋ, ಅಥವಾ ಗಂಟು ಮೊತ್ತವನ್ನು ಒಟ್ಟಾಗಿ ಅಥವಾ ಭಾಗಶಃ ರೀತ್ಯಾ ನೀಡುವಂತೆ ಹಕ್ಕು ಚಲಾಸಲು ಅವಕಾಶ ನೀಡದಿದ್ದಾಗ;
- ಬಡ್ಡಿ ಅಥವಾ ಜುಲ್ಮಾನೆಗಾಗಿ ಹೊರಡಿಸಿದ ಒಂದು ಆದೇಶ;
- ಅರ್ಧಮಾಸಿಕ ಸಂದಾಯವೊಂದರ ರೀತ್ಯಾ ನಷ್ಟ ಭರ್ತಿ ಮಾಡದಿರಲು ಹೊರಡಿಸಿದ ಒಂದು ಆದೇಶ.
- ಮೃತ ಕೆಲಸಗಾರನೊಬ್ಬನ ಅವಲಂಬಿತರುಗಳ ನಡುವೆ ನಷ್ಟಪರಿಹಾರದ ಹಂಚಿಕೆಗೆ ಅನುವು ಮಾಡಿಕೊಡುವ ಒಂದು ಆದೇಶ, ಅಥವಾ ಅಂಥಾ ಅವಲಂಬಿತ ಎಂದು ತನ್ನನ್ನೇ ತಪ್ಪಾಗಿ ಹೇಳಿಕೊಳ್ಳುವ ವ್ಯಕ್ತಿಯೊಬ್ಬನಿಗೆ ಯಾವುದೇ ಹಕ್ಕುಚಲಾವಣೆಗೆ ಅವಕಾಶ ನೀಡದಿರುವಂತಹ ಆದೇಶ; ಅಥವಾ
- ಒಪ್ಪಂದದ ಜ್ಞಾಪನವೊಂದನ್ನು ನೋಂದಾಯಿಸಲೊಪ್ಪದ ಒಂದು ಆದೇಶ, ಅಥವಾ ಅದನ್ನು ನೋಂದಾಸುವಂತಹ ನಿಬಂಧನೆ-ಗಳಿಗೊಳಪಟ್ಟಂತೆ ನೋಂದಣಿಗೆ ಅವಕಾಶ ನೀಡುವಂಥ ಆದೇಶ; ಅಥವಾ
- ಇಂಥಾ ಮೇಲ್ಮನವಿಯೊಂದನ್ನು ಅರವತ್ತು ದಿನಗಳೊಳಗಾಗಿ ಸಲ್ಲಿಸತಕ್ಕದ್ದು.

# ಪರಿಶಿಷ್ಟ 3 ಪರಿಚ್ಛೇದ I

ಪರಿಚ್ಛೇದ I

[ಕಲಮುಗಳಾದ 2(1) ಮತ್ತು 4 ನೋಡಿ]

ಭಾಗ I

**ಶಾಶ್ವತ ಸಂಪೂರ್ಣ ಊನತ್ವವಾಗುವುದು ಎಂದು ಪರಿಗಣಿಸಲಾದ ಘಾತಗಳ ಪಟ್ಟಿ:–**

| ಕ್ರ.ಸಂ | ಘಾತದ ವರ್ಣನೆ | ಗಳಿಕಾ ಸಾಮರ್ಥ್ಯದ ಶೇಕಡಾ ನಷ್ಟ |
|---|---|---|
| 1. | ಎರಡೂ ಕೈಗಳ ನಾಶ ಅಥವಾ ಅವುಗಳ ಮೇಲ್ಭಾಗಗಳಲ್ಲಿನ ಊನತೆ/ಜಖಂ | 100 |
| 2. | ಕೈ ಮತ್ತು ಒಂದು ಪಾದದ ನಾಶ | 100 |
| 3. | ಎರಡೂ ಕಾಲು ಅಥವಾ ತೊಡೆಗಳ ಜಖಂ, ಅಥವಾ ಒಂದು ಕಡೆಯ ಕಾಲು ಅಥವಾ ತೊಡೆಯ ಜಖಂ ಹಾಗೂ ಮತ್ತೊಂದು ಪಾದದ ನಾಶ | 100 |
| 4. | ಹಕ್ಕು ಕೋರುವವನು ಮಾಡುವ ಕೆಲಸಕ್ಕೆ ಅವಶ್ಯಕವಾದ ದ್ರಷ್ಟಿ ಬೇಕಾಗಿರುವಾಗ ಅಂಥಾ ಯಾವುದೇ ಕೆಲಸ ಮಾಡಲಾಗದಷ್ಟು ದ್ರಷ್ಟಿಯ ನಾಶ | 100 |
| 5. | ಅತಿಗಂಭೀರವಾಗಿ ಮುಖವು ಜಜ್ಜಿಹೋಗಿರುವಿಕೆ | 100 |
| 6. | ಸಂಪೂರ್ಣ ಕಿವುಡು | 100 |

**ಭಾಗ II**

**ಶಾಶ್ವತ ಭಾಗಶಃ ಊನತ್ವವಾಗುವುದು ಎಂದು ಪರಿಗಣಿಸಲಾದ ಘಾತಗಳ ಪಟ್ಟಿ**

| | | |
|---|---|---|
| 1. | ಭುಜದ ಕೀಲು ಮೂಲಕ ಜಖಂ | 90 |
| 2. | ಭುಜದ ಕೆಳಗೆ ಆಕ್ರೋಮಿಯೋನ್ ಮೂಳೆ ತುದಿಯಿಂದ [20.32 ಸೆ.ಮೀ.]ಕ್ಕಿಂತ ಕಡಿಮೆ ಇರುವ ಗೂಟದಷ್ಟರೊಳಗೆ ಜಖಂ | 80 |
| 3. | ಆಕ್ರೋಮಿಯೋನ್ ಮೂಳೆ ತುದಿಯಿಂದ [20.32 ಸೆ.ಮೀ] ಅಂತರದಲ್ಲಾದ ಬಿಂದುವಿನಿಂದ ಓಲೆಕ್ರಾನೋನ್ ಮೂಳೆಯ ಅಚಿನಿಂದ [11.43 ಸೆ.ಮೀ.]ಗಿಂತ ಕಡಿಮೆ ಅಂತರದವರೆಗಿನ ಎಲ್ಲಾದರೂ ಜಖಂ. | 70 |

| ಕ್ರ.ಸಂ | ಘಾತದ ವರ್ಣನೆ | ಗಳಿಕಾ ಸಾಮರ್ಥ್ಯದ ಶೇಕಡಾ ನಷ್ಟ |
|---|---|---|
| 4. | ಕೈ ಅಥವಾ ಒಂದು ಕೈಯ ಹೆಬ್ಬೆರಳು ಹಾಗೂ ನಾಲ್ಕೂಬೆರಳುಗಳ ಅಥವಾ ಓಲೆಕ್ರಾನೋನ್ ಮೂಳೆಯ ತುದಿಯಿಂದ [೧೧.೪೩ ಸೆ.ಮೀ.] ದೂರದ ಬಿಂದುವಿನಿಂದ ಕೆಳಗೆ ಆದಂತಹ ಜಖಂ. | 60 |
| 5. | ಹೆಬ್ಬೆರಳ ನಾಶ | 30 |
| 6. | ಹೆಬ್ಬೆರಳು ಮತ್ತು ಅದರ ಮೆಟಾಕಾರ್ಪಲ್ ಮೂಳೆ | 40 |
| 7. | ಒಂದು ಕೈಯ ನಾಲ್ಕು ಬೆರಳುಗಳ ನಷ್ಟ | 50 |
| 8. | ಒಂದು ಕೈಯ ಮೂರು ಬೆರಳುಗಳ ನಷ್ಟ | 30 |
| 9. | ಒಂದು ಕೈಯ ಎರಡು ಬೆರಳುಗಳ ನಷ್ಟ | 20 |
| 10. | ಹೆಬ್ಬೆರಳಿನ ತುದಿಯ ಗಿಣ್ಣಿನ ನಷ್ಟ | 20 |
| 10. ಎ | ಹೆಬ್ಬೆರಳ ತುದಿ ಕತ್ತರಿಸಿಹೋಗಿರುವಂತಹ ಆದರೆ ಮೂಳೆ ನಾಶವಾಗದಂಥ ಜಖಂ | 10 |
| | **ಜಖಂ ಪ್ರಕರಣಗಳು – ಕೆಳ ಅವಯುವಗಳು** | |
| 11. | ಎರಡೂ ಪಾದಗಳ ಜಖಂ ಆಗಿ ಮೊಂಡು ಕಾಲಾಗುವ ಹಾಗೆ ಆಗುವ ಜಖಂ. | 90 |
| 12. | ಮೆಟಾಟಾರ್ಸೋ ಗಿಣ್ಣಿನ ಕೀಲಿಗೆ ಸನ್ನಿಹವಾದ ಜಾಗದಲ್ಲಿ ಎರಡೂ ಪಾದಗಳ ಜಖಂ | 80 |
| 13. | ಮೆಟಾಟಾರ್ಸೋ ಗಿಣ್ಣಿನ ಕೀಲಿಗೆ ಸನ್ನಿಹವಾದ ಎರಡೂ ಪಾದಗಳ ಎಲ್ಲಾ ಬೆಟ್ಟುಗಳ ನಷ್ಟ | 30 |
| 14. | ಯಾವುದೇ ಬೆಟ್ಟಿನ ಗಿಣ್ಣುಗಳ ನಡುವಿನ ಕೀಲಿನ ಹತ್ತಿರ ಎರಡೂ ಪಾದದ ಎಲ್ಲಾ ಬೆಟ್ಟುಗಳ ನಷ್ಟ | 30 |
| 15. | ಯಾವುದೇ ಬೆಟ್ಟಿನ ಗಿಣ್ಣುಗಳ ನಡುವಿನ ಕೀಲಿಗೆ ಕೊಂಚ ದೂರದಲ್ಲಿ ಎರಡೂ ಪಾದದ ಎಲ್ಲಾ ಬೆಟ್ಟುಗಳ ನಷ್ಟ | 20 |
| 16. | ಪಕ್ಕೆಯಲ್ಲಿ ಜಖಂ | 90 |
| 17. | ಪಕ್ಕೆಯ ಕೆಳಗೆ ದೊಡ್ಡ (ಟ್ರೆಂಚಾಂಟರ್) ಮೂಳೆಯ ತುದಿಯಿಂದ ಅಳತೆ ಮಾಡಿದರೆ [12.70 ಸೆ.ಮೀ] ಗಿಂತ ಉದ್ದದಲ್ಲಿ ಹೆಚ್ಚಿರದ ಕೋಲ್ಮೂಳೆಯ ಜಖಂ | 80 |
| 18. | ಪಕ್ಕೆಯ ಕೆಳಗೆ ದೊಡ್ಡ ಟ್ರೆಂಚಾಂಟರ್ ಮೂಳೆಯ ತುದಿಯಿಂದ ಅಳತೆ ಮಾಡಿದರೆ [12.70 ಸೆ.ಮೀ] ಗಿಂತ ಉದ್ದದಲ್ಲಿ ಹೆಚ್ಚಿರುವ ಆದರೆ ಮಧ್ಯ ತೊಡೆಯ ಬಿಂದುವಿರುವಲ್ಲಿಗಿಂತ ಉದ್ದವಿಲ್ಲದ ಜಾಗದ ಕೋಲ್ಮೂಳೆಯ ಜಖಂ | 70 |

| ಕ್ರ.ಸಂ | ಘಾತದ ವರ್ಣನೆ | ಗಳಿಕಾ ಸಾಮರ್ಥ್ಯದ ಶೇಕಡಾ ನಷ್ಟ |
|---|---|---|
| 19. | ಮಧ್ಯ ತೊಡೆಯಿಂದ ಕೆಳಗೆ [8.89 ಸೆ.ಮೀ.]ಳಷ್ಟು ಮಂಡಿ ಮೂಳೆಯಿಂದ ಕೆಳಗಿನವರೆಗೆ ಎಲ್ಲಾದರೂ ಜಖಂ | 60 |
| 20. | ಮಂಡಿಯಿಂದ ಕೆಳಗಿನ ಕೋಲ್ಮೂಳೆ [8.89 ಸೆ.ಮೀ] ಕ್ಕಿಂತ ಹೆಚ್ಚು ಆದರೆ [12.70 ಸೆ.ಮೀ.]ಗಿಂತ ಕಡಿಮೆ ಉದ್ದದಲ್ಲಿ ಎಲ್ಲಾದರೂ ಜಖಂ | 50 |
| 21. | ಮಂಡಿಯಿಂದ ಕೆಳಗಿನ ಕೋಲ್ಮೂಳೆ [12.70 ಸೆ.ಮೀ.] ಗಿಂತ ಹೆಚ್ಚು ಉದ್ದದಲ್ಲಿ ಎಲ್ಲಾದರೂ ಜಖಂ | 50 |
| 22. | ಒಂದು ಪಾದ ಜಖಂ ಆಗಿ ಕಾಲಿನ ಕೋಲ್ಮೂಳೆಗೇ ಅಂತ್ಯವಾಗಿಹೋಗುವುದು | 50 |
| 23. | ಮೆಟಾಟಾರ್ಸೋ ಗಿಣ್ಣಿನ ಕೀಲಿಗೆ ಸನ್ನಿಹದ ಒಂದು ಪಾದದ ಜಖಂ | 50 |
| 24. | ಮೆಟಾಟಾರ್ಸೋ ಗಿಣ್ಣಿನ ಕೀಲಿಗೆ ಮೂಲಕ ಒಂದು ಪಾದದ ಎಲ್ಲಾ ಬೆಟ್ಟುಗಳೂ ನಾಶ | 20 |

**ಇತರೆ ಘಾತಗಳು**

| | | |
|---|---|---|
| 25. | ಇನ್ನಾವುದೇ ತೊಡಕುಗಳಿಲ್ಲದಂತೆ, ಒಂದು ಕಣ್ಣಿನ ನಾಶ, ಮತ್ತೊಂದು ಸರಿಯಾಗಿದ್ದು. | 40 |
| 26. | ಒಂದು ಕಣ್ಣಿನ ದ್ರಷ್ಟಿ ನಾಶ, ಯಾವುದೇ ತೊಡಕುಗಳಿಲ್ಲದೆ, ಅಥವಾ ಕಣ್ಣಿನ ಗುಡ್ಡೆಯ ವಿಕಾರಗೊಳ್ಳದೆ, ಮತ್ತೊಂದು ಸರಿಯಾಗಿರುವಂಥದ್ದು | 30 |
| 26.ಎ | ಒಂದು ಕಣ್ಣಿನ ಭಾಗಶಃ ದ್ರಷ್ಟಿ ನಾಶ | 10 |

**ಅ. ಬಲಗೈ ಅಥವಾ ಎಡಗೈ ನ ಬೆರಳುಗಳು**
**ತೋರ್ಬೆರಳು**

| | | |
|---|---|---|
| 27. | ಇಡೀ | 14 |
| 28. | ಎರಡು ಗಿಣ್ಣುಗಳು | 11 |
| 29. | ಒಂದು ಗಿಣ್ಣು | 9 |
| 30. | ಮೂಳೆ ನಾಶವಿಲ್ಲದೆ ತುದಿ ಕತ್ತರಿಸಿಹೋಗಿರುವಂತಹ ಜಖಂ | 5 |

**ಮಧ್ಯದ ಬೆರಳು**

| | | |
|---|---|---|
| 31. | ಇಡೀ | 7 |
| 32. | ಎರಡು ಗಿಣ್ಣುಗಳು | 9 |
| 33. | ಒಂದು ಗಿಣ್ಣು | 7 |
| 34. | ಮೂಳೆ ನಾಶವಿಲ್ಲದೆ ತುದಿ ಕತ್ತರಿಸಿಹೋಗಿರುವಂತಹ ಜಖಂ | 4 |

| ಕ್ರ.ಸಂ | ಘಾತದ ವರ್ಣನೆ | ಗಳಿಕಾ ಸಾಮರ್ಥ್ಯದ ಶೇಕಡಾ ನಷ್ಟ |
|---|---|---|
| | **ಉಂಗುರದ ಬೆರಳು ಅಥವಾ ಕಿರುಬೆರಳು** | |
| 35. | ಇಡೀ | 7 |
| 36. | ಎರಡು ಗಿಣ್ಣುಗಳು | 6 |
| 37. | ಒಂದು ಗಿಣ್ಣು | 5 |
| 38. | ಮೂಳೆ ನಾಶವಿಲ್ಲದೆ ತುದಿ ಕತ್ತರಿಸಿಹೋಗಿರುವಂತಹ ಜಖಂ | 2 |
| | **ಬ. ಬಲಗಾಲಿನ ಅಥವಾ ಎಡಗಾಲಿನ ಬೆಟ್ಟುಗಳು** | |
| | **ಹೆಬ್ಬೆಟ್ಟು** | |
| 39. | ಮೆಟಾಟಾರ್ಸೋ ಗಿಣ್ಣಿನ ಕೀಲು ಮೂಲಕ | 14 |
| 40. | ಭಾಗ, ಸ್ವಲ್ಪ ಮೂಳೆ ನಷ್ಟದೊಂದಿಗೆ | 3 |
| | **ಇನ್ನಾವುದೇ ಕಾಲ್ಬೆಟ್ಟು** | |
| 41. | ಮೆಟಾಟಾರ್ಸೋ ಗಿಣ್ಣಿನ ಕೀಲು ಮೂಲಕ | 3 |
| 42. | ಭಾಗ, ಸ್ವಲ್ಪ ಮೂಳೆ ನಷ್ಟದೊಂದಿಗೆ | 1 |
| | **ಒಂದು ಪಾದದ ಎರಡು ಬೆಟ್ಟುಗಳು, ಹೆಬ್ಬೆಟ್ಟನ್ನು ಬಿಟ್ಟು** | |
| 43. | ಮೆಟಾಟಾರ್ಸೋ ಗಿಣ್ಣಿನ ಕೀಲು ಮೂಲಕ | 5 |
| 44. | ಭಾಗ, ಸ್ವಲ್ಪ ಮೂಳೆ ನಷ್ಟದೊಂದಿಗೆ | 2 |
| | **ಒಂದು ಪಾದದ ಮೂರು ಬೆಟ್ಟುಗಳು, ಹೆಬ್ಬೆಟ್ಟನ್ನು ಬಿಟ್ಟು** | |
| 45. | ಮೆಟಾಟಾರ್ಸೋ ಗಿಣ್ಣಿನ ಕೀಲು ಮೂಲಕ | 6 |
| 46. | ಭಾಗ, ಸ್ವಲ್ಪ ಮೂಳೆ ನಷ್ಟದೊಂದಿಗೆ | 3 |
| | **ಒಂದು ಪಾದದ ನಾಲ್ಕು ಬೆಟ್ಟುಗಳು, ಹೆಬ್ಬೆಟ್ಟನ್ನು ಬಿಟ್ಟು** | |
| 47. | ಮೆಟಾಟಾರ್ಸೋ ಗಿಣ್ಣಿನ ಕೀಲು ಮೂಲಕ | 9 |
| 48. | ಭಾಗ, ಸ್ವಲ್ಪ ಮೂಳೆ ನಷ್ಟದೊಂದಿಗೆ | 3 |

**ಸೂಚನೆ:** ಈ ಪರಿಚ್ಛೇದದಲ್ಲಿ ಉಲ್ಲೇಖಿಸಿರುವ ಯಾವುದೇ ಅವಯವದ ಅಥವಾ ಅಂಗದ ಸಂಪೂರ್ಣ ಮತ್ತು ಶಾಶ್ವತವಾಗಿ, ಉಪಯೋಗವಾಗದಷ್ಟು ಆಗುವ ನಾಶವನ್ನು ಆ ಅವಯವ ಅಥವಾ ಅಂಗವು ನಾಶವಾದಂತೆಯೇ ಎಂಬುದಕ್ಕೆ ಸಮ ಎಂದು ಪರಿಗಣಿಸಬೇಕು.

# ಪರಿಶಿಷ್ಟ 4 | ಪರಿಚ್ಛೇದ II

## ಪರಿಚ್ಛೇದ II

### [ಕಲಮುಗಳಾದ 2(1) (ಎನ್) ನೋಡಿ]

**ಕಲಮು 2(1)(ಎನ್)ರ ಅರ್ಥದ ಒಳಗೆ ಮತ್ತು ಈ ಕಲಮಿನ ಅವಕಾಶಗಳೊಳಗೆ ಈ ಕೆಳಗಿನ ವ್ಯಕ್ತಿಗಳನ್ನು ಕೆಲಸಗಾರರು ಎಂದು ಹೇಳಲಾಗುತ್ತದೆ. ಅಂದರೆ, ಯಾವುದೇ ವ್ಯಕ್ತಿಯು ಈ ಕೆಳಕಂಡವುಗಳಂತೆ ನಿಯೋಜಿಸಲ್ಪಟ್ಟಿದ್ದರೆ ಕೆಲಸಗಾರನೆನಿಸಿಕೊಳ್ಳುತ್ತಾನೆ–**

(i) ಗುಮಾಸ್ತ ಹುದ್ದೆಯೊಂದನ್ನು ಅಥವಾ ರೈಲ್ವೇ ಸೇವೆಯನ್ನು ಬಿಟ್ಟು, ಅಥವಾ ಹಬೆಂದ ಅಥವಾ ಇತರೆ ಯಾಂತ್ರಿಕ ಶಕ್ತಿಯಿಂದ ಅಥವಾ ವಿದ್ಯುಚ್ಛಕ್ತಿಯಿಂದ ಚಾಲಿತವಾದ ವಾಹನವೊಂದರ ಅಥವಾ ಲಿಫ್ಟ್ ಒಂದರ ನಿರ್ವಹಣೆ ಅಥವಾ ರಿಪೇರಿ, ಅಥವಾ ಅಂಥಾ ವಾಹನಕ್ಕೆ ಸರಕು ತುಂಬುವ ಕಾರ್ಯಾಚರಣೆಗೆ ಸಂಬಂಧಿಸಿದಂಥ ಅಥವಾ ಇಳಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ನಿಯೋಜಿಸಲ್ಪಟ್ಟಿದ್ದರೆ; ಅಥವಾ

(ii) ಗುಮಾಸ್ತ ಹುದ್ದೆಯಲ್ಲಾದರೂ ಸರಿ, ಎಲ್ಲಿ ಕೈಗಾರಿಕೆ ಕಾಯ್ದೆ 1948 (1948ರ 63ನೇ)ರ ಕಲಂ 2ರ ಅನುಚ್ಛೇದ (ಕೆ) ದಲ್ಲಿ ವ್ಯಾಖ್ಯಾನಿಸಲಾದಂತೆ ಉತ್ಪನ್ನ ಪ್ರಕ್ರಿಯೆಯೊಂದನ್ನು ನಡೆಸಲಾಗುತ್ತಿರುವ ಯಾವುದೇ ಆವರಣದಲ್ಲಿ, ಅಥವಾ ಪ್ರಾಕಾರದ ಪರಿಧಿಯೊಳಗೆ, ಅಥವಾ ಇಂಥಾ ಉತ್ಪನ್ನಪ್ರಕ್ರಿಯೆಗೆ ಅಥವಾ ಮಾಡಿದ ವಸ್ತುವಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಇನ್ಯಾವುದೇ ವಿಧದ ಕೆಲಸದಲ್ಲಿ [ಅಂಥಾ ಆವರಣದೊಳಗೆ ಅಥವಾ ಪ್ರಾಕಾರದೊಳಗೆ ಅಂಥಾ ಯಾವುದೇ ಕೆಲಸದ ನೌಕರಿ ಆಗಿರಲಿ, ಬಿಡಲಿ] ಮತ್ತು ಹಬೆ, ನೀರು ಅಥವಾ ಇತರೆ ಯಾಂತ್ರಿಕ ಶಕ್ತಿ ಅಥವಾ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

(iii) ಇಪ್ಪತ್ತು ಅಥವಾ ಹೆಚ್ಚು ವ್ಯಕ್ತಿಗಳು ಆ ರೀತಿಯ ನೌಕರಿಯಲ್ಲಿರುವ ಪ್ರಾಕಾರಗಳ ಒಳಗೇ ಅಥವಾ ಆವರಣಗಳೊಳಗೇ ಯಾವುದೇ ವಸ್ತುವೊಂದರ ಅಥವಾ ವಸ್ತುವೊಂದರ ಭಾಗದ ತಯಾರಿಸುವ,

ಬದಲಾಯಿಸುವ, ದುರಸ್ತಿ, ಅಲಂಕಾರಗೊಳಿಸುವ, ಮುಕ್ತಾಯ ಹಂತದಲ್ಲಿರುವ ಅಥವಾ ಉಪಯೋಗಕ್ಕಾಗಿ ಸಜ್ಜುಗೊಳಿಸುವ, ಸಾಗಾಣಿಕೆ ಅಥವಾ ಮಾರಾಟದ ಉದ್ದೇಶಕ್ಕಾಗಿ ನಿಯೋಜಿಸಲ್ಪಟ್ಟ;

[ವಿವರಣೆ: ತಯಾರಿಸುವ, ಬದಲಾಯಿಸುವ, ದುರಸ್ತಿಯು, ಅಲಂಕಾರಗೊಳಿಸುವ, ಮುಕ್ತಾಯ ಹಂತದಲ್ಲಿರುವ ಅಥವಾ ಉಪಯೋಗಕ್ಕಾಗಿ ಸಜ್ಜುಗೊಳಿಸುತ್ತಿರುವ, ಸಾಗಾಣಿಕೆ ಅಥವಾ ಮಾರಾಟಕ್ಕೆ ಸಂಬಂಧಿಸಿದ, ಇವೇ ಮುಂತಾದವಕ್ಕೆ ಪ್ರಾಸಂಗಿಕವಾದ ಇನ್ಯಾವುದೇ ಕೆಲಸದಲಿದ್ದರೆ ಈ ಅನುಚ್ಛೇದದ ಉದ್ದೇಶಗಳಿಗೆ, ಅಂಥಾ ಆವರಣಗಳ ಅಥವಾ ಪ್ರಾಕಾರಗಳ ಹೊರಗೆ ನಿಯೋಜಿಸಲ್ಪಟ್ಟಿದ್ದರೂ ಅಂಥಾ ಆವರಣಗಳು ಅಥವಾ ಪ್ರಾಕಾರಗಳ ಒಳಗೇ ನಿಯೋಜಿಸಲ್ಪಟ್ಟವರೆಂದು ಪರಿಗಣಿಸಲಾಗುತ್ತದೆ;] ಅಥವಾ

(iv) ಮಾಲೀಕನ ವ್ಯಾಪಾರ ಅಥವಾ ವಹಿವಾಟಿಗೆ ಸಂಬಂಧಿಸಿದಂತೆ ಸಿಡಿಮದ್ದು ತಯಾರಿಕೆ ಅಥವಾ ನಿಭಾಯಿಸುವಿಕೆಯಲ್ಲಿ ನಿಯೋಜಿಸಲ್ಪಟ್ಟ; ಅಥವಾ

(v) ಗಣಿಗಳ ಕಾಯ್ದೆ, 1953 (1952ರ 35 ನೇ) ರ ಸೆಕ್ಷನ್ 2 ರ ಅನುಚ್ಛೇದ (ಜೆ) ನಲ್ಲಿ ವ್ಯಾಖ್ಯಾನಿಸಿದ ರೀತ್ಯಾ, ಗಣಿಗಾರಿಕೆ ಕಾರ್ಯಾಚರಣೆ ಅಥವಾ ಸಿಕ್ಕಿರುವ ಖನಿಜಕ್ಕೆ ಸಂಬಂಧಪಟ್ಟ ಅಥವಾ ನೆಲದ ಕೆಳಗೆ ಎಂಥಹುದೇ ಕೆಲಸ, ಪ್ರಾಸಂಗಿಕವಾದ ಗುಮಾಸ್ತ ಕೆಲಸವನ್ನು ಬಿಟ್ಟು, ಇನ್ನಿತರ ಯಾವುದೇ ರೀತಿಯ ಗಣಿಗಾರಿಕೆ ಕಾರ್ಯದಲ್ಲಿ ನಿಯೋಜಿಸಲ್ಪಟ್ಟಿದ್ದರೆ, ಅಥವಾ

(vi) ಈ ಕೆಳಗಿನವುಗಳಲ್ಲಿ ಯಜಮಾನ ಅಥವಾ ಸಾಗರಯಾನಿಯಾಗಿ ನಿಯೋಜಿಸಲ್ಪಟ್ಟಿರುವ–

(ಅ) ಭಾಗಶಃ ಅಥವಾ ಸಂಪೂರ್ಣವಾಗಿ ವಿದ್ಯುಚ್ಛಕ್ತಿಯಿಂದ ಅಥವಾ ಇತರೆ ಯಂತ್ರಶಕ್ತಿಯಿಂದ ಅಥವಾ ಹಬೆಯಿಂದ ಚಾಲಿತವಾದ ಯಾವುದೇ ಹಡಗು ಅಥವಾ ಹಾಗೆ ಚಾಲಿತ ಮಾಡಿದ ಹಡಗೊಂದನ್ನು ಎಳೆದೊಯ್ಯಲಾಗುವ ಅಥವಾ ಎಳೆದೊಯ್ಯಲು ಉದ್ದೇಶಿಸಿರುವ ಹಡಗಿನ; ಅಥವಾ

(ಆ) ಉಪ ಅನುಚ್ಛೇದ (ಅ)ದಲ್ಲಿ ಸೇರ್ಪಡೆ ಮಾಡಿರದ ಇಪ್ಪತ್ತೈದು ಟನ್ ನಿವ್ವಳ ತೂಕದ ಅಥವಾ ಹೆಚ್ಚಿನ ಯಾವುದೇ ಹಡಗು; ಅಥವಾ

(ಇ) ಉಪ ಅನುಚ್ಛೇದ (ಅ) ಅಥವಾ ಉಪ ಅನುಚ್ಛೇದ (ಬ) ದಲ್ಲಿ ಸೇರ್ಪಡೆ ಮಾಡಿರದ, ಹಾಯಿಗಳಿಂದ ಮಾತ್ರವೇ ನೌಕಾಯಾನಕ್ಕೆ ಸಾಕಷ್ಟು ಪ್ರದೇಶದ ಅನುಕೂಲ ಕಲ್ಪಿಸಿರುವ ಸಮುದ್ರಕ್ಕೆ ಹೋಗುವ ಯಾವುದೇ ಹಡಗು; ಅಥವಾ

(vii) ಈ ಕೆಳಗೆ ತಿಳಿಸಿದ ಉದ್ದೇಶಗಳಿಗೆ ನಿಯೋಜಿಸಲ್ಪಟ್ಟಿದ್ದರೆ–

(ಅ) ಯಾವ ಹಡಗಿಗೆ ತಾನು ಧಣಿಯೂ ಅಲ್ಲದೆ, ಸಿಬ್ಬಂದಿಯ ಸದಸ್ಯನೂ ಅಲ್ಲವಗಿದ್ದು ಹಡಗಿಗೆ ತುಂಬಿಸುವ, ಇಳಿಸುವ, ಇಂಧನ ಹಾಕುವ, ನಿರ್ಮಿಸುವ, ದುರಸ್ತಿ ಮಾಡುವ, ಕೆಡವುವ, ಸ್ವಚ್ಛ ಮಾಡುವ ಅಥವಾ ಬಣ್ಣ ಬಳಿಯುವ ಕೆಲಸದಲ್ಲಿ ತೊಡಗುವ; ಅಥವಾ ಬಂದರು ಕಾಯ್ದೆ, 1908 (1908ರ 15ನೇ) ಅಥವಾ ಪ್ರಮುಖ ಬಂದರು ಟ್ರಸ್ಟ್ ಕಾಯ್ದೆ, 1963 (1963ರ 38ನೇ) ಇವುಗಳ ಅಡಿಯಲ್ಲಿ ಬರುವ ಯಾವುದೇ ಬಂದರಿನ ಪ್ರದೇಶಗಳೊಳಗೆ ಯಾವುದೇ ನೌಕೆಗೆ ತುಂಬಬೇಕಾದ ಅಥವಾ ನೌಕೆಯಿಂದ ಇಳಿಸಲಾದ ಸರಕುಗಳನ್ನು ನಿಭಾಯಿಸುವ ಅಥವಾ ಸಾಗಿಸುವ; ಅಥವಾ

(ಆ) ಹಗ್ಗದ ಮೂಲಕ ಹಡಗೊಂದನ್ನು ಸುತ್ತಿ ಹಾಕುವ; ಅಥವಾ

(ಇ) ಬಂದರಿನ ರೇವುಗೋಡೆಗಳಲ್ಲಿ ಅಥವಾ ಇಳಿದಾಣದಲ್ಲಿ ಲಂಗರು ಹಾಕುವ ಅಥವಾ ಲಂಗರು ಬಿಡಿಸುವ; ಅಥವಾ

(ಈ) ನೌಕೆಗಳು ಒಣಕಟ್ಟೆಯನ್ನು ಹೊಕ್ಕುವಾಗ ಅಥವಾ ಬಿಡುವಾಗ ಒಣಕಟ್ಟೆ ಪೆಟ್ಟಿಗೆಗಳನ್ನು ತೆಗೆಯುವ ಅಥವಾ ಬದಲಾಗಿಡುವ; ಅಥವಾ

(ಉ) ತುರ್ತು ಪರಿಸ್ಥಿತಿಯೊಂದರಲ್ಲಿ ಯಾವುದೇ ನೌಕೆಯೊಂದನ್ನು ಕಟಕಟೆಗೆ ತಳ್ಳುವ ಅಥವಾ ತೆಗೆಯುವ; ಅಥವಾ

(ಊ) ಅಡ್ಡತಂತಿಗಳನ್ನು ಮತ್ತು ನಾರಿನ ಸ್ಪ್ರಿಂಗ್ ಗಳನ್ನು ಹೊಸೆದು ತಳಕು ಹಾಕುವ, ಲಂಗರು ಬೀಗದ ಮಗ್ಗುಲುಗಳ ಮೇಲೆ ಆಳಮಾಪನಕ್ಕೆ ಬಣ್ಣದ ಗುರುತು ಮಾಡುವ, ಒಲೆಬೆಂಕಿ ರಕ್ಷಕಗಳನ್ನು ಅವಶ್ಯವಾದಂತೆಲ್ಲಾ ತೆಗೆಯುವ ಅಥವಾ ಬದಲಾಯಿಸುವ, ಹಡಗುದಾರಿಯನ್ನು ಹಾಸುವ, ಜೀವ-ರಕ್ಷಕ ತೇಲುಸಾಧನಗಳನ್ನು ಗುಣಮಟ್ಟಕ್ಕೆ ಕಾಪಾಡುವ,

ಅಥವಾ ತತ್ಸಮಾನ ಲಕ್ಷಣದ ಇನ್ಯಾವುದೇ ಇತರ ನಿರ್ವಹಣಾ ಕೆಲಸ; ಅಥವಾ

(ಋ) ಬಂದರುಕಟ್ಟೆಗೆ ಹಡಗಿನ ಸಾಲುದಾರಿಯನ್ನು ಉಪ್ಪುನೀರಿನಿಂದ ತೇವಮಾಡಲು ವಿಹಾರದೋಣಿಗಳ ಮೇಲಿನ ಯಾವುದೇ ಕೆಲಸ; ಅಥವಾ

viii) ಈ ಕೆಳಗಿನವುಗಳನ್ನು ನಿರ್ಮಿಸುವ, ನಿರ್ವಹಿಸುವ, ದುರಸ್ತಿಯ ಅಥವಾ ಕೆಡವುವ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದ್ದರೆ–

(ಅ) ನೆಲಮಟ್ಟದಿಂದ ಮೇಲಕ್ಕೆ ಒಂದು ಅಂತಸ್ತಿಗಿಂತ ಎತ್ತರ ಹೆಚ್ಚಾಗಿದ್ದ ಅಥವಾ ಹೆಚ್ಚಾಗಿರುವ ಅಥವಾ ಹೆಚ್ಚಾಗುವಂತೆ ನಕ್ಷೆ ಇರುವ ಯಾವುದೇ ಕಟ್ಟಡ ಅಥವಾ ನೆಲಮಟ್ಟದಿಂದ ಮೇಲ್ಛಾವಣಿಯವರೆಗೆ 12 ಅಡಿ ಅಥವಾ ಅದಕ್ಕಿಂತ ಹೆಚ್ಚಿರುವ; ಅಥವಾ

(ಆ) ಯಾವುದೇ ಅಣೆಕಟ್ಟು ಅಥವಾ ಅಡ್ಡಗೋಡೆ ಅದರ ಕೆಳತುದಿಂದ ಅದರ ಮೇಲ್ತುದಿಯವರೆಗೆ 12 ಅಡಿ ಅಥವಾ ಹೆಚ್ಚಿನ ಎತ್ತರದ; ಅಥವಾ

(ಇ) ಯಾವುದೇ ರಸ್ತೆ, ಸೇತುವೆ, ಸುರಂಗ ಅಥವಾ ಕಾಲುವೆ; ಅಥವಾ

(ಈ) ಯಾವುದೇ ಬಂದರುಕಟ್ಟೆ, ಹಡಗುಭರತಿಕಟ್ಟೆ, ಸಮುದ್ರ–ಗೋಡೆ ಅಥವಾ ಇತರೆ ನೌಕಾಸಂಬಂಧೀ ಕೆಲಸ (ಹಡಗುಗಳನ್ನು ಲಂಗರು ಹಾಕುವ ಯಾವುದೇ ಕೆಲಸಗಳನ್ನೊಳಗೊಂಡಂತೆ) ಅಥವಾ

ix) ಯಾವುದೇ ತಂತಿ ಅಥವಾ ದೂರವಾಣಿ ಸಂಪರ್ಕ ಸಂಕೇತಗಳನ್ನು ಬರೆದುಕೊಳ್ಳುವ ಅಥವಾ ಕಂಬವನ್ನು ಅಥವಾ ಯಾವುದೇ ತಲೆಮೇಲೆ ಹಾಯುವ ವಿದ್ಯುಚ್ಛಕ್ತಿ ತಂತಿ ಅಥವಾ ಕೇಬಲ್ ಅಥವ ಕಂಬ ಅಥವಾ ನೆಡುಗಂಬ ಅಥವಾ ಅದಕ್ಕಾಗಿ ಇರುವ ಜೋಡಿಕೆಗಳು ಮತ್ತು ಸ್ಥಿರೋಪಕರಣಗಳನ್ನು ರಿಪೇರಿ ಮಾಡುವ, ಸಜ್ಜುಗೊಳಿಸುವ, ಹದದಲ್ಲಿಡುವ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

x) ಗುಮಾಸ್ತನ ಹುದ್ದೆ ಹೊರತಾಗಿ, ಯಾವುದೇ ಗಾಳಿಯಲ್ಲಿ ತೂಗಾಡುವ ಹಗ್ಗಮಾರ್ಗದ, ಕಣಿವೆಯ, ಪೈಪ್ ಲೈನಿನ ಅಥವಾ ಚರಂಡಿಯ

ನಿರ್ಮಾಣ, ಕಾಮಗಾರಿ, ರಿಪೇರಿ ಅಥವಾ ಕೆಡವುವ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದರೆ; ಅಥವಾ

xi) ಯಾವುದೇ ಅಗ್ನಿಶಾಮಕ ದಳದ ಸೇವಾ ವಿಭಾಗದಲ್ಲಿ ನಿಯೋಜಿಸಲ್ಪಟ್ಟಿರುವ; ಅಥವಾ

xii) ರೈಲ್ವೇ ಕಾಯ್ದೆ, 1989 [1989ರ 24ನೇ]ರ ಕಲಮು 2 ರ ಹಾಗೂ ಕಲಂ 197ರ ಉಪಪರಿಚ್ಛೇದ (31) ಮತ್ತು ಉಪಕಲಮು (1)ರಲ್ಲಿ ವ್ಯಾಖ್ಯಾನಿಸಿರುವಂತೆ ರೈಲು ಸಂಬಂಧಿತ ಕಾರ್ಯಗಳಲ್ಲಿ ನೇರವಾಗಿ ನಿಯೋಜಿಸಲ್ಪಟ್ಟಿರುವವ ಅಥವಾ ರೈಲು ಆಡಳಿತದೊಡನೆ ಗುತ್ತಿಗೆ ಪೂರೈಸುವಂತಹ ಉಪ–ಗುತ್ತಿಗೆದಾರರೊಬ್ಬರ ಮೂಲಕ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xiii) ರೈಲ್ವೇ ಅಂಚೆ ಸೇವೆಯಲ್ಲಿ ನಿರೀಕ್ಷಕ, ಅಂಚೆ ಪಾಲಕ, ಅಂಚೆ ವಿಳಾಸ ಪಾಲಕ ಅಥವಾ ವ್ಯಾನ್‌ನ ಜವಾನ– ಹೀಗೆ ನಿಯೋಜಿಸಲ್ಪಟ್ಟಿರುವ [ಅಥವಾ ತಂತಿ ಸಂದೇಶ ಕಳುಹಿಸುವಾತ, ಅಥವಾ ಅಂಚೆ ಅಥವಾ ರೈಲು ಮಾರ್ಗ ಸಂಕೇತಗಾರನಾಗಿ], ಅಥವಾ ಭಾರತೀಯ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಸಾಮಾನ್ಯವಾಗಿ ಹೊರಾಂಗಣ ಕೆಲಸವಿರುವ ಇನ್ಯಾವುದೇ ಉದ್ಯೋಗದಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xiv) ಪ್ರಾಕೃತಿಕ ಪೆಟ್ರೋಲ್ ಅಥವಾ ನೈಸರ್ಗಿಕ ಅನಿಲ ತೆಗೆಯುವ ಕಾಮಗಾರಿಯಲ್ಲಿ ಗುಮಾಸ್ತ ಹುದ್ದೆಯೊಂದನ್ನು ಹೊರತಾಗಿ ಇನ್ಯಾವುದೇ ಕೆಲಸದಲ್ಲಿದ್ದರೆ; ಅಥವಾ

xv) ಸಿಡಿಸುವ ಕಾಮಗಾರಿಯಲ್ಲಿ ಯಾವುದೇ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xvi) ಯಾವುದೇ ಅಗೆತದ ಕಾರ್ಯದಲ್ಲಿ– ಅಲ್ಲಿ ಹಿಂದಿನ 12 ತಿಂಗಳಲ್ಲಿ ಯಾವುದೇ ಒಂದು ದಿನ [ಇಪ್ಪತ್ತೈದು] ವ್ಯಕ್ತಿಗಳಿಗಿಂತ ಹೆಚ್ಚು ಜನರನ್ನು ನಿಯೋಜಿಸಿದ್ದಂತಹ ಅಥವಾ ಸಿಡಿಮದ್ದುಗಳನ್ನು ಉಪಯೋಗಿಸಿರುವಲ್ಲಿ, ಅಥವಾ ಯಾವ ಅಗೆತವು ತನ್ನ ಉತ್ತುಂಗದಿಂದ ತಳಮಟ್ಟಕ್ಕೆ [ಹನ್ನೆರಡು] ಅಡಿಗಳಿಗಿಂತ ಹೆಚ್ಚು ಇದೆಯೋ ಅಂಥದರಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xvii) ಹತ್ತು ಜನರಿಗಿಂತ ಹೆಚ್ಚು ವ್ಯಕ್ತಿಗಳನ್ನು ಒಯ್ಯಬಲ್ಲ ಯಾವುದೇ

ಹಾದೋನಿಯ ಕಾಮಗಾರಿಯಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xviii) ಗುಮಾಸ್ತ ಹುದ್ದೆಯೊಂದನ್ನು ಬಿಟ್ಟು, ಯಾವುದೇ ಎಸ್ಟೇಟ್‌ನಲ್ಲಿ ಸಿಂಚೋನಾ, ಕಾಫೀ, ರಬ್ಬರ್ ಅಥವಾ ಚಹಾ ಎಲೆಗಳನ್ನು ಬೆಳೆಯುವ ಉದ್ದೇಶಕ್ಕಾಗಿ ಪಾಲಿಸಲಾಗುತ್ತಿದೆಯೋ; ಮತ್ತು ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಇಪ್ಪತ್ತೈದು ಅಥವಾ ಹೆಚ್ಚಿನ ಜನರನ್ನು ಆ ರೀತಿಯಲ್ಲಿ ನಿಯುಕ್ತಿಗೊಳಿಸಲಾಗಿದೆಯೋ ಅಲ್ಲಿ ನಿಯೋಜಿಸಪಟ್ಟಿದ್ದರೆ; ಅಥವಾ

xix) ಗುಮಾಸ್ತ ಕೆಲಸವನ್ನು ಬಿಟ್ಟು, ವಿದ್ಯುಚ್ಛಕ್ತಿಯನ್ನು ಹುಟ್ಟುಹಾಕುವಲ್ಲಿ, ಆ ಶಕ್ತಿಯನ್ನು ವರ್ಧಿಸುವ / ಕುಗ್ಗಿಸುವ, ಪ್ರಸರಣದ ಅಥವಾ ಹಂಚಿಕೆಯ ಕೆಲಸದಲ್ಲಿ ಅಥವಾ ಅನಿಲದ ಪೂರೈಕೆ ಅಥವಾ ಹುಟ್ಟುಹಾಕುವ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xx) ಭಾರತೀಯ ದೀಪದಮನೆ ಕಾಯ್ದೆ, 1927 (1927ರ 17ನೇ)ರ ಕಲಂ 2 ರ ಉಪಪರಿಚ್ಛೇದ (ಡಿ) ಯಲ್ಲಿ ವ್ಯಾಖ್ಯಾನಿಸುವಂತೆ ಇರುವ ದೀಪದಮನೆಯಲ್ಲಿ ಕೆಲಸಕ್ಕಿರುವ; ಅಥವಾ

xxi) ಸಾರ್ವಜನಿಕ ಪ್ರದರ್ಶನಕ್ಕಾಗಿ ಉದ್ದೇಶಿಸಿರುವ ಸಿನೆಮಾ ಚಿತ್ರೀಕರಣದ ನಿರ್ಮಾಣದಲ್ಲಿ ಅಥವಾ ಅಂಥಾ ಚಿತ್ರಗಳನ್ನು ಪ್ರದರ್ಶಿಸುವ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxii) ಆನೆಗಳ ಅಥವಾ ಕಾಡುಮೃಗಗಳನ್ನು ಇಟ್ಟುಕೊಳ್ಳುವ, ತರಬೇತು ನೀಡುವ ಅಥವಾ ಅದರ ಕೆಲಸಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxiii) ಈಚಲು ಮರಗಳಲ್ಲಿ ಸಾರ ತೆಗೆಯುವ ಅಥವಾ ಅವುಗಳನ್ನು ಕೆಡವುವ ಅಥವಾ ಅವುಗಳ ದಿಮ್ಮಿಗಳನ್ನು ಜೋಡಿಸುವ, ಅಥವಾ ಅದರ ಉರುವಲನ್ನು ಒಳನಾಡು ನದಿಗಳ ಮೂಲಕ ಸಾಗಿಸುವ, ಅಥವಾ ಕಾಳ್ಗಿಚ್ಚುಗಳನ್ನು ನಂದಿಸುವ ಅಥವಾ ಹತೋಟಿಯಲ್ಲಿಡುವ ಕಾರ್ಯಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxiv) ಆನೆಗಳನ್ನು ಅಥವಾ ಇತರೆ ಕಾಡುಮೃಗಗಳನ್ನು ಬೇಟೆಮಾಡುವ ಅಥವಾ ಬಂಧಿಸುವ ಕಾರ್ಯಾಚರಣೆಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxv) ವಾಹನಚಾಲಕನಾಗಿ ನಿಯೋಜಿಸಲ್ಪಟ್ಟಿದ್ದರೆ;

xxvi) ಈ ಕೆಳಕಂಡ ಆವರಣದೊಳಗೆ ಅಥವಾ ಪ್ರಾಂಗಣದಲ್ಲಿ ಸರಕುಗಳ ಸಾಕಾಣಿಕೆ ಅಥವಾ ನಿಭಾಯಿಸುವಿಕೆಯಲ್ಲಿ ನಿಯೋಜಿಸಲ್ಪಟ್ಟಿದ್ದರೆ–

ಅ) ಸರಕುಗಳನ್ನು ಸಂಗ್ರಹಿಸಲ್ಪಟ್ಟ ಯಾವುದೇ ಉಗ್ರಾಣ ಅಥವಾ ಇತರ ಸ್ಥಳ, ಹಾಗೂ ಎಲ್ಲಿ ಆ ಹಿಂದಿನ 12 ತಿಂಗಳುಗಳ ಅವಧಿಯಲ್ಲಿ ಯಾವುದಾದರೊಂದು ದಿನ 10 ಅಥವಾ ಅದಕ್ಕಿಂತ ಹೆಚ್ಚು ಜನರನ್ನು ನಿಯೋಜಿಸಲ್ಪಟ್ಟಿತ್ತೋ ಆಲ್ಲಿ; ಅಥವಾ

ಆ) ಯಾವುದೇ ಮಾರುಕಟ್ಟೆ – ಎಲ್ಲಿ ಆ ಹಿಂದಿನ 12 ತಿಂಗಳುಗಳ ಅವಧಿಯಲ್ಲಿ ಯಾವುದಾದರೊಂದು ದಿನ [50] ಅಥವಾ ಹೆಚ್ಚು ಜನರನ್ನು ನಿಯೋಜಿಸಲಾಗಿತ್ತೋ ಅಲ್ಲಿ; ಅಥವಾ

xxvii) ರೇಡಿಯಮ್ ಅಥವಾ ಕ್ಷ–ಕಿರಣಗಳ ಉಪಕರಣಗಳ ಕುಶಲ ನಿರ್ವಹಣೆ ಮತ್ತು ಅದರೊಡನೆಯ ಕೆಲಸ ಅಥವಾ ವಿಕಿರಣ ಸೂಸುವ ವಸ್ತುಗಳೊಡನೆ ಸಂಪರ್ಕವಿರುವಂತೆ ನಿಯೋಜಿಸಿರುವ; ಅಥವಾ

xxviii) ಭಾರತೀಯ ವಾಯುನೌಕೆ ಕಾಯ್ದೆ 1934 (1934 ರ 22 ನೇ) ರ ಕಲಮು 2 ರಲ್ಲಿ ವ್ಯಾಖ್ಯಾನಿಸಿದಂತೆ ಇರುವ ವಾಯುನೌಕೆಯೊಂದರ ನಿರ್ಮಾಣ, ಸ್ಥಾಪನೆ, ಬಿಡಿಮಾಡುವಿಕೆ, ಚಾಲನೆ ಅಥವಾ ನಿರ್ವಹಣೆಗೆ ಸಂಬಂಧಿಸಿದಂತೆ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxix) ವಿದ್ಯುಚ್ಛಕ್ತಿಯಿಂದ ಅಥವಾ ಹಬೆ ಅಥವಾ ಇತರೆ ಯಾಂತ್ರಿಕ ಶಕ್ತಿಯಿಂದ ಚಾಲಿತವಾದ ಟ್ರ್ಯಾಕ್ಟರ್‌ಗಳು ಅಥವಾ ಇತರ ಸಾಧನಗಳ ಉಪಯೋಗಸಂಬಂಧೀ [ರೇಷ್ಮೆ ಸಾಕಾಣಿಕೆ, ಅರಣ್ಯಾಭಿವೃದ್ಧಿ, ಜೇನು ಸಾಕಾಣಿಕೆ ಅಥವಾ ತೋಟಗಾರಿಕೆಗಳಲ್ಲಿ] ಚಟುವಟಿಕೆಗಳಲ್ಲಿ ನಿಯೋಜಿಸಲ್ಪಟ್ಟ; ಅಥವಾ

xxx) ಕೊಳವೆ ಬಾವಿಯೊಂದರ ನಿರ್ಮಾಣ, ಕೆಲಸ, ದುರಸ್ತಿ ಅಥವಾ ನಿರ್ವಹಣೆಯ ಚಟುವಟಿಕೆಗಳಲ್ಲಿ ಗುಮಾಸ್ತನ ಹುದ್ದೆ ಬಿಟ್ಟು ಇತರೆ ಕೆಲಸಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxxi) ಯಾವುದೇ ಕಟ್ಟಡದಲ್ಲಿನ ವಿದ್ಯುತ್ ಉಪಕರಣಗಳ ನಿರ್ವಹಣ, ದುರಸ್ತಿ ಅಥವಾ ಪುನರ್ ಸ್ಥಾಪನೆ ಕೆಲಸಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxxii) ಸರ್ಕಸ್ ಒಂದರಲ್ಲಿ ನಿಯೋಜಿಸಲ್ಪಟ್ಟಿದ್ದರೆ;

xxxiii) ಯಾವುದೇ ಕಾರ್ಖಾನೆ ಅಥವಾ ಸ್ಥಾಪನೆಯೊಂದರಲ್ಲಿ ಕಾವಲುಗಾರನಾಗಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxxiv) ಸಮುದ್ರದಲ್ಲಿ ಮೀನು ಹಿಡಿಯುವ ಚಟುವಟಿಕೆಗಳ್ಯಾವುದರಲ್ಲೂ ನಿಯೋಜಿಸಲ್ಪಟ್ಟಿರುವ; ಅಥವಾ

xxxv) ಹಾವುಗಳಿಂದ ವಿಷ ತೆಗೆಯುವ ಕಾರ್ಯಕಾಗಿ ಅಥವಾ ಅವುಗಳನ್ನು ನೋಡಿಕೊಳ್ಳುವುದಕ್ಕಾಗಿ ಅಥವಾ ಇನ್ನಾವುದೇ ಪ್ರಾಣಿ ಅಥವಾ ಕೀಟಗಳನ್ನು ನಿಭಾಯಿಸುವ ಕಾರ್ಯಗಳು ಅವಶ್ಯವಿರುವ ಯಾವುದೇ ನೌಕರಿಯಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxxvi) ಕುದುರೆ, ಹೇಸರಕತ್ತೆ ಮತ್ತು ಎತ್ತುಗಳೇ ಮುಂತಾದ ಪ್ರಾಣಿಗಳನ್ನು ನಿಭಾಯಿಸುವ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxxvii) ಯಾವುದೇ ಯಂತ್ರ ಚಾಲಿತ ವಾಹನದಿಂದ ಸರಕು ಇಳಿಸುವ ಅಥವಾ ಪೇರಿಸುವ ಉದ್ದೇಶಗಳಿಗೆ ಅಥವಾ ಅಂಥಾ ವಾಹನಗಳಲ್ಲಿ ತುಂಬಲಾಗಿರುವ ಸರಕುಗಳನ್ನು ಸಾರಿಗೆ ಮಾಡುವುದು ಅಥವಾ ನಿಭಾಯಿಸುವ ಕೆಲಸಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxxviii) ಸ್ಥಳೀಯ ಆಡಳಿತದ ಪರಿಮಿತಿಯೊಳಗೇ ಇರುವ ಚರಂಡೀ ಸಾಲುಗಳು ಅಥವಾ ಕೊಳೆತ ಟ್ಯಾಂಕುಗಳನ್ನು ಸ್ವಚ್ಛಗೊಳಿಸುವ ಕಾರ್ಯಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xxxix) ನದಿಗಳಲ್ಲಿ ಕೊರೆಯುವ ಕಾರ್ಯಗಳು, ದ್ರವಶಾಸ್ತ್ರಕ್ಕೆ ಸಂಬಂಧಿಸಿದ ಅವಲೋಕನ ಮತ್ತು ಪ್ರವಾಹ ಮುನ್ಸೂಚನಾ ಚಟುವಟಿಕೆಗಳು, ಅಂತರ್ಜಲ ಸಮೀಕ್ಷೆಗಳು ಮತ್ತು ಶೋಧಗಳನ್ನು ಒಳಗೊಂಡಂತೆ ಸಮೀಕ್ಷೆಗಳು ಮತ್ತು ತನಿಖೆಗಳಲ್ಲಿ ಶೋಧಗಳು ಅಥವಾ ಮಾಪನ ಅಥವಾ ಹೊರಹರಿವಿನ ಅವಲೋಕನಗಳಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xl) ಅರಣ್ಯಗಳನ್ನು ಸ್ವಚ್ಛ ಮಾಡುವ ಅಥವಾ ಕೊಳಗಳ ಇಲ್ಲವೇ ನೆಲದ ಜೀರ್ಣೋದ್ಧಾರದ ಕೆಲಸಗಳಲ್ಲಿ– ಅದರಲ್ಲೂ ಎಲ್ಲಿ ಹಿಂದಿನ 12 ತಿಂಗಳುಗಳಲ್ಲಿ ಯಾವುದೇ ಒಂದು ದಿನದ ಮಟ್ಟಿಗಾದರೂ 25 ಕ್ಕಿಂತ ಹೆಚ್ಚು ಜನರು ನೌಕರಿಗಿದ್ದಾರೋ ಅಲ್ಲಿ ನಿಯೋಜಿಸಲ್ಪಟ್ಟಿದ್ದರೆ; ಅಥವಾ

xli) ಕೃನೆಲ ಉತ್ತುವ ಅಥವಾ ಪ್ರಾಣಿಸಾಕಾಣಿಕೆಯ ನಿರ್ವಹಣೆ ಅಥವಾ ಅರಣ್ಯ ಕಾರ್ಯಗಳು ಅಥವಾ ಮೀನುಗಾರಿಕೆ ಮುಂತಾದವುಗಳಲ್ಲಿ ಹಿಂದಿನ 12 ತಿಂಗಳುಗಳಲ್ಲಿ ಯಾವುದೇ ಒಂದು ದಿನ 25 ಜನರಿಗಿಂತ ಹೆಚ್ಚು ನೌಕರಿಗಿದ್ದಂತಹ ಕೆಲಸದಲ್ಲಿ ನಿಯೋಜಿಸಲ್ಪಟ್ಟ; ಅಥವಾ

xlii) ಬಾವಿ, ಕೊಳವೆಬಾವಿ, ಕೊಳ, ಕೆರೆ, ಝರಿಗಳೇ ಮುಂತಾದವುಗಳಿಂದ ಜಲವನ್ನು ಏತ ಎತ್ತಲು ಉಪಯೋಗಿಸುವ ಪಂಪ್ ಉಪಕರಣಗಳ ಸ್ಥಾಪನೆ, ನಿರ್ವಹಣೆ ಅಥವಾ ದುರಸ್ತಿ ಕಾರ್ಯಗಳಲ್ಲಿ ನಿಯೋಜಿಸಲ್ಪಟ್ಟ; ಅಥವಾ

xliii) ಬಾವಿ, ಅಗೆದಬಾವಿ, ಕೊಳವೆಬಾವಿ, ಅಗೆದ–ಕೊಳವೆ ಬಾವಿ, ಪರಿಷ್ಕರಣ ಸ್ಥಾನ ಮುಂತಾದವುಗಳ ನಿರ್ಮಾಣ, ಕೊರೆಯುವಿಕೆ ಅಥವಾ ಆಳಮಾಡುವಿಕೆ ಮುಂತಾದ ಕೆಲಸಗಳಲ್ಲಿ ನಿಯೋಜಿಸಲ್ಪಟ್ಟ; ಅಥವಾ

xliv) ಬೇಸಾಯ ಕೃಗಳಲ್ಲಿ ಅಥವಾ ತೋಟಗಾರಿಕೆಗಳಲ್ಲಿ ಕೀಟನಾಶಕಗಳು ಅಥವಾ ಕಳೆನಾಶಕಗಳನ್ನು ಸಿಂಪಡಿಸುವ ಅಥವಾ ಕೊಡವುವ ಕಾರ್ಯಗಳಲ್ಲಿ ನಿಯೋಜಿಸಲ್ಪಟ್ಟ; ಅಥವಾ

xlv) ಯಂತ್ರರೀತ್ಯಾ ಪೈರುಸಂಗ್ರಹಣೆ ಮತ್ತು ತೆನೆಬಡಿಯುವ ಕಾರ್ಯಗಳಲ್ಲಿ ನಿಯೋಜಿಸಲ್ಪಟ್ಟ; ಅಥವಾ

xlvi) ಬುಲ್ ಡೋಜ಼ರ್, ಟ್ರ್ಯಾಕ್ಟರ್, ಯಂತ್ರಚಾಲಿತ ಟಿಲ್ಲರ್ ಗಳೇ ಮುಂತಾದ ಯಂತ್ರಗಳೊಂದಿಗೆ ಕೆಲಸ ಮಾಡುವ ಅಥವಾ ದುರಸ್ತಿ ಅಥವಾ ನಿರ್ವಹಿಸುವ ಕೆಲಸದಲ್ಲಿ ನಿಯೋಜಿಸಲ್ಪಟ್ಟ; ಅಥವಾ

xlvii) ನೆಲಮಟ್ಟದಿಂದ 3.66 ಮೀಟರ್ ಮತ್ತು ಅದಕ್ಕಿಂತ ಎತ್ತರವಿರುವ ಜಾಹೀರಾತು ಫಲಕಗಳ ಮೇಲೆ ಚಿತ್ರ ಬಿಡಿಸುವ ಕಲಾಕಾರನಾಗಿ ನಿಯೋಜಿಸಲ್ಪಟ್ಟವ; ಅಥವಾ

xlviii) ಕಾರ್ಯನಿರತ ಪತ್ರಕರ್ತರುಗಳು ಮತ್ತು ಇತರ ಪತ್ರಿಕಾ ಉದ್ಯೋಗಿಗಳ [ಸೇವಾ ನಿಬಂಧನೆಗಳು ಮತ್ತು ವಿವಿಧ ಅನುಕೂಲಗಳು] ಕಾಯ್ದೆ 1955ರ ವ್ಯಾಖ್ಯಾನದಂತೆ ಯಾವುದೇ ಪತ್ರಿಕಾಲಯದಲ್ಲಿ ನಿಯೋಜಿಸಲ್ಪಟ್ಟು ಹೊರಾಂಗಣ ಕೆಲಸದಲ್ಲಿ ತೊಡಗಿದ್ದರೆ,

xlix) ಜಲದಾಳದ ಕೆಲಸಗಳಲ್ಲಿ ಮುಳುಗುಹಾಕಲು ನೇಮಿಸಲ್ಪಟ್ಟಿದ್ದರೆ;

ಇವರುಗಳು ಕಲಮು 2 (1) ಎನ್ ಅಡಿಯಲ್ಲಿ ಕೆಲಸಗಾರರೆನಿಸಿಕೊಳ್ಳುತ್ತಾರೆ.

**ವಿವರಣೆ:** ಈ ಪರಿಚ್ಛೇದದಲ್ಲಿ, 'ಹಿಂದಿನ 12 ತಿಂಗಳುಗಳು' ಎಂದರೆ ಅಂತಹ ಪ್ರಸಂಗವೊಂದರಲ್ಲಿ ಆದ ಅಪಘಾತದ ದಿನಕ್ಕೆ ಹನ್ನೆರಡು ತಿಂಗಳು ಅಂತ್ಯಗೊಳ್ಳುವಂತಿರುವ ಪ್ರತೀ ಪ್ರಸಂಗಕ್ಕೆ ಸಂಬಂಧಿಸಿದ್ದಾಗಿದೆ.

# ಪರಿಶಿಷ್ಟ 5 ಪರಿಚ್ಛೇದ III

## ಪರಿಚ್ಛೇದ III

### (ಕಲಮು 3 ನೋಡಿ)

### ಉದ್ಯೋಗಸಂಬಂಧೀ ಖಾಯಿಲೆಗಳ ಪಟ್ಟಿ

| ಕ್ರ.ಸಂ. (1) | ಉದ್ಯೋಗಸಂಬಂಧೀ ಖಾಯಿಲೆ (2) | ನೌಕರಿ (3) |
|---|---|---|
| | **ಭಾಗ (ಅ)** | |
| 1. | ಸೋಂಕಿನ ಅಪಾಯ ನಿರ್ದಿಷ್ಟವಾಗಿ ಇರಬಹುದಾದ ಉದ್ಯೋಗವೊಂದರಲ್ಲಿ ಅಂಟಿಸಿಕೊಂಡ ಸಾಂಕ್ರಾಮಿಕ ಮತ್ತು ಪರೋಪಜೈವಿಕ ಖಾಯಿಲೆಗಳು | (ಅ) ಆರೋಗ್ಯದ ಒಡ್ಡುವಿಕೆಗೆ ತೊಡಗಿಕೊಳ್ಳುವ ಎಲ್ಲಾ ಕೆಲಸ ಅಥವಾ ಪ್ರಯೋಗಾಲಯ ಕೆಲಸ. (ಬ) ಪಶುವೈದ್ಯಕೀಯ ಕಾರ್ಯಕ್ಕೆ ಒಳಪಡುವ ಎಲ್ಲಾ ಕೆಲಸ. (ಕ) ಪ್ರಾಣಿಗಳು, ಪ್ರಾಣಿ ಶವಗಳು, ಅಂಥಾ ಶವಗಳ ಒಂದು ಭಾಗ, ಅಥವಾ ಪ್ರಾಣಿಗಳ ಇಲ್ಲವೇ ಪ್ರಾಣಿ ಶವಗಳಿಂದ ಸೋಂಕಿಗೆ ಒಳಗಾಗಿರಬಹುದಾದ ಸರಕು ಇವುಗಳನ್ನು ನಿಭಾಯಿಸುವ ಸಂಬಂಧೀ ಕೆಲಸ. (ಡ) ಸೋಂಕಿನ ಅಪಾಯವನ್ನು ನಿರ್ದಿಷ್ಟವಾಗಿ ಹೊತ್ತಿರುವ ಇತರ ಕೆಲಸ. |
| 2. | ಸಾಂದ್ರ ಕುಗ್ಗಿಸಿದ ಗಾಳಿಯಲ್ಲಿನ ಕೆಲಸದಿಂದಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 3. | ಸೀಸ ಮತ್ತದರ ವಿಷಕಾರೀ ಮಿಶ್ರಣಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 4. | ನೈಟ್ರಸ್ ವಾಯುವಿನ ಹೊಗೆಯಿಂದಾಗುವ ವಿಷಹಾನಿ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |

| ಕ್ರ.ಸಂ. (1) | ಉದ್ಯೋಗಸಂಬಂಧೀ ಖಾಯಿಲೆ (2) | ನೌಕರಿ (3) |
|---|---|---|
| 5. | ಜೈವಿಕ ರಂಜಕದ ಮಿಶ್ರಣಗಳಿಂದಾಗುವ ವಿಷಹಾನಿ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |

**ಭಾಗ ಬ**

| | | |
|---|---|---|
| 1. | ರಂಜಕದಿಂದ ಅಥವಾ ಅದರ ನಂಜಿನ ಮಿಶ್ರಣಗಳುಗಳಿಂದಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 2. | ಪಾದರಸ ಅಥವಾ ಅದರ ನಂಜಿನ ಮಿಶ್ರಣಗಳಿಂದಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 3. | ಬೆನ್‌ಜ್ಹೀನ್ ಅಥವಾ ಅದರ ನಂಜಿನ ಅನುರೂಪಗಳಿಂದಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 4. | ಬೆನ್‌ಜ್ಹೀನ್ ಅಥವಾ ಅದರ ನಂಜಿನ ಅನುರೂಪಗಳ ನೈಟ್ರೋ ಮತ್ತು ಅಮೈಡೋ ನಂಜುಳ್ಳ ಉಪರಾಸಾಯ–ನಿಕಗಳಿಂದುಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 5. | ಕ್ರೋಮಿಯಮ್ ಅಥವಾ ಅದರ ನಂಜುಳ್ಳ ಮಿಶ್ರಣಗಳಿಂದ ಉಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 6. | ಶಂಖ ಪಾಷಾಣ (ತಾಳಕ) ಮತ್ತದರ ನಂಜುಳ್ಳ ಮಿಶ್ರಣಗಳಿಂದುಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 7. | ವಿಕಿರಣ ವಸ್ತುಗಳು ಮತ್ತು ವಿದ್ಯುನ್ವಾಹೀ ಕಣೋತ್ಪತ್ತಿಕಾರಕ ಕಿರಣಪ್ರಸಾರಗಳು | ವಿಕಿರಣ ವಸ್ತುಗಳು ಅಥವಾ ಕಣೋತ್ಪತ್ತಿಕಾರಕ ಕಿರಣ ಪ್ರಸಾರಗಳಿಗೆ ಒಡ್ಡಿದಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 8. | ಡಾಂಬರು, ಕಪ್ಪುರಾಳ, ಶಿಲಾಜಿತು, ಖನಿಜತೈಲ, ಗಟ್ಟಿಕಲ್ಲಿದ್ದಲುಪುಡಿ ಅಥವಾ ಈ ವಸ್ತುಗಳ ಮಿಶ್ರಣಗಳು, ಉತ್ಪನ್ನಗಳು ಅಥವಾ ಶೇಷಗಳಿಂದ ಉಂಟಾದ ಚರ್ಮದ ಪ್ರಾಥಮಿಕ ಹೊರಮೈ ಕ್ಯಾನ್ಸರ್. | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |

| ಕ್ರ.ಸಂ. (1) | ಉದ್ಯೋಗಸಂಬಂಧೀ ಖಾಯಿಲೆ (2) | ನೌಕರಿ (3) |
|---|---|---|
| 9. | ಹೈಡ್ರೋಕಾರ್ಬನ್‌ಗಳ (ಇಂಗಾಲದ ಜಲ) [ಆಲಿಫಾಟಿಕ್ ಮತ್ತು ಆರೋಮ್ಯಾಟಿಕ್ ಸರಣಿಯ] ವಿಷಯುಕ್ತ ಹ್ಯಾಲೋಜನ್ ಉಪರಾಸಾಯನಿಕಗಳಿಂದ ಉಂಟಾದ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 10. | ಇಂಗಾಲದ ಡೈಸಲ್ಫೈಡ್‌ನಿಂದ ಉಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 11. | ಅತಿಕೆಂಪು ವಿಕಿರಣಗಳಿಂದುಂಟಾಗುವ ಉದ್ಯೋಗಸಂಬಂಧೀ ಕಣ್ಣುಪೊರೆ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 12. | ಮಂಡೂರ ಅಥವಾ ಅದರ ವಿಷಕಾರೀ ಮಿಷ್ರಣಗಳಿಂದುಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 13. | ಇಲ್ಲಿ ಇತರೆಡೆ ಉಲ್ಲೇಖಿಸಿಲ್ಲದ ಭೌತಿಕ, ರಾಸಾಯನಿಕ ಅಥವಾ ಜೈವಿಕ ವಾಹಕಗಳಿಂದ ಉಂಟಾಗುವ ಚರ್ಮದ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 14. | ಗಟ್ಟಿಶಬ್ದದಿಂದುಂಟಾಗುವ ಶ್ರವಣಹಾನಿ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 15. | ಡೈನೈಟ್ರೋಫಿನಾಲ್ ಅಥವಾ ಅದರ ಅನುರೂಪದಿಂದಾಗುವ ಅಥವಾ ಬದಲೀ ಡೈನೈಟ್ರೋಫಿನಾಲ್ ಅಥವಾ ಅಂಥಾ ವಸ್ತುಗಳ ಲವಣಗಳಿಂದುಂಟಾಗುವ ನಂಜು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 16. | ಬೆರಿಲಿಯಮ್ ಅಥವಾ ಅದರ ನಂಜುಳ್ಳ ಮಿಶ್ರಣಗಳಿಂದುಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 17. | ಕ್ಯಾಡ್ಮಿಯಮ್ ಅಥವಾ ಅದರ ನಂಜುಳ್ಳ ಮಿಶ್ರಣಗಳಿಂದುಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |

| ಕ್ರ.ಸಂ. (1) | ಉದ್ಯೋಗಸಂಬಂಧೀ ಖಾಯಿಲೆ (2) | ನೌಕರಿ (3) |
|---|---|---|
| 18. | ಕೆಲಸದ ಪ್ರಕ್ರಿಯೆಯಲ್ಲಿ ಅಂತರ್ಜಾತವಾಗಿರುವ ಅಧಿಕೃತ ಶೀಘ್ರಕಾರೀ ವಾಹಕಗಳಿಂದುಂಟಾಗುವ ಉದ್ಯೋಗಸಂಬಂಧೀ ಆಸ್ತಮಾ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 19. | ಫ್ಲೋರಿನ್ ಅಥವಾ ಅದರ ನಂಜುಳ್ಳ ಮಿಶ್ರಣಗಳಿಂದ ಉಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 20. | ನೈಟ್ರೋಗ್ಲಿಜ಼ರೀನ್ ಅಥವಾ ಅದರ ಇತರ ನೈಟ್ರೋಆಸಿಡ್ ಎಸ್ಟರ್ ಗಳಿಂದುಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 21. | ಮದ್ಯಾರ್ಕಗಳು ಮತ್ತು ಕೀಟೋನ್‌ಗಳಿಂದ ಉಂಟಾಗುವ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 22. | ಉಸಿರು ಕಟ್ಟಿಸುವ ರಾಸಾಯನಿಕಗಳಿಂದುಂಟಾಗುವ ಖಾಯಿಲೆಗಳು: ಇಂಗಾಲದ ಮಾನಾಕ್ಸೈಡ್, ಮತ್ತದರ ವಿಷಕಾರೀ ಉಪರಾಸಾಯನಿಕಗಳು, ಹೈಡ್ರೋಜನ್ ಸಲ್ಫೈಡ್. | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 23. | ಕಲ್ನಾರಿನಿಂದ ಉಂಟಾಗುವ ಶ್ವಾಸಕೋಶದ ಕ್ಯಾನ್ಸರ್ ಮತ್ತು ಮೀಸೋಥೆಲಿಯೋಮಾಸ್ ಎಂಬ ಖಾಯಿಲೆ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 24. | ಮೂತ್ರಕೋಶದ ಹೊರಮೈತೊಗಲಿನ ಅಥವಾ ಮೂತ್ರಜನಕಾಂಗದ ಅಥವಾ ಮೂತ್ರನಾಳದ ಪ್ರಾಥಮಿಕ ನವದ್ರವ್ಯಗೂಡುವಿಕೆ. | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 25. | ಹಿಮಾಚ್ಛಾದಿತ ಪ್ರದೇಶಗಳಲ್ಲಿ ಹಿಮಕುರುಡು ಉಂಟಾಗುವುದು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 26. | ತೀವ್ರ ಉಷ್ಣ ವಾತಾವರಣದಲ್ಲಿ ಶಾಖದ ಪ್ರಭಾವದಿಂದುಂಟಾಗುವ ಖಾಯಿಲೆ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |

| ಕ್ರ.ಸಂ. (1) | ಉದ್ಯೋಗಸಂಬಂಧೀ ಖಾಯಿಲೆ (2) | ನೌಕರಿ (3) |
|---|---|---|
| 27. | ತೀವ್ರಶೀತವಾತಾವರಣದಲ್ಲಿ ಶೀತದ ಪ್ರಭಾವದಿಂದುಂಟಾಗುವ ಖಾಯಿಲೆ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |

**ಭಾಗ ಕ**

| | | |
|---|---|---|
| 1. | ತುರಿಕೆಕಾರಕ ಖನಿಜ ಧೂಳಿನಿಂದ ಉಂಟಾಗುವ ನ್ಯೂಮೋಕೋನಿಯೋಸಿಸ್ ಎಂಬ ಖಾಯಿಲೆ (ಸಿಲಿಕೋಸಿಸ್, ಆಂಥ್ರವೋಸಿಲಿಕಾಸಿಸ್, ಆಸ್ಬೆಸ್ಟಾಸಿಸ್) ಮತ್ತು ಸಿಲಿಕೋ–ಕ್ಷಯರೋಗ–ಹಾಗೆ ಉಂಟಾಗುವ ನಿಸ್ಸಾಮರ್ಥ್ಯತೆ ಅಥವಾ ಸಾವಿಗೆ ಈ ಸಿಲಿಕಾಸಿಸ್ ಎಂಬುದೇ ಅವಶ್ಯ ಅಂಶವಾಗಿದ್ದರೆ ಮಾತ್ರ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 2. | ಬ್ಯಾಗಾಸ್ಸೋಸಿಸ್ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 3. | ಹತ್ತಿ, ನಾರು, ಸೆಣಬು ಮತ್ತು ಸೈಸಲ್ ಧೂಳಿನಿಂದ ಉಂಟಾಗುವ ಶ್ವಾಸಕೋಶಸಂಬಂಧೀ ಖಾಯಿಲೆ (ಬೈಸ್ಸಿನಾಸಿಸ್) | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 4. | ಜೈವಿಕಧೂಳನ್ನು ಉಛ್ವಾಸ ಮಾಡಿದರೆ ಉಂಟಾಗುವ ಬಾಹ್ಯ ಅಲರ್ಜಿಯ ಆಲ್ವೀಲೈಟಿಸ್ ಎಂಬ ಖಾಯಿಲೆ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 5. | ಗಟ್ಟಿ ಲೋಹಗಳಿಂದ ಉಂಟಾಗುವ ಶ್ವಾಸನಾಳ/ಕೋಶ ಸಂಬಂಧೀ ಖಾಯಿಲೆಗಳು | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |
| 6. | ಅತೀ ಎತ್ತರದಲ್ಲಿರುವುದರಿಂದುಂಟಾಗುವ ತೀವ್ರವಾದ ಶ್ವಾಸನಾಳದ ಈಡೆಮಾ ಎಂಬ ಖಾಯಿಲೆ | ಸಂಬಂಧಪಟ್ಟ ಅಪಾಯಕ್ಕೆ ಒಡ್ಡುವಂತೆ ತೊಡಗಿಕೊಳ್ಳುವ ಎಲ್ಲಾ ಕೆಲಸ. |

# ಪರಿಶಿಷ್ಟ 6 ಪರಿಚ್ಛೇದ IV

## ಪರಿಚ್ಛೇದ IV

### (ಕಲಮು 4 ನೋಡಿ)

**ಶಾಶ್ವತ ಊನತ್ವ ಮತ್ತು ಸಾವು ಸಂಭವಿಸಿದ ಪ್ರಸಂಗಗಳಲ್ಲಿ ನಷ್ಟಪರಿಹಾರ ಮೊತ್ತಕ್ಕೆ ಸಮನಾದ ಗಂಟುವೊತ್ತ ಲೆಕ್ಕಾಚಾರ ಮಾಡಲು ಅಪವರ್ತನಗಳು.**

| ನಷ್ಟಪರಿಹಾರ ಸಲ್ಲಲು ಬೀಳುವ ದಿನಾಂಕದ ದಿಢೀರ್ ಹಿಂದೆ ಬಂದ ಹುಟ್ಟುಹಬ್ಬದ ದಿನದಂದು ಪೂರ್ಣಗೊಂಡಿರುವ ಕೆಲಸಗಾರನ ವಯಸ್ಸಿನ ವರ್ಷಗಳು | ಅಪವರ್ತನಗಳು | ನಷ್ಟಪರಿಹಾರ ಸಲ್ಲಲು ಬೀಳುವ ದಿನಾಂಕದ ದಿಢೀರ್ ಹಿಂದೆ ಬಂದ ಹುಟ್ಟುಹಬ್ಬದ ದಿನದಂದು ಪೂರ್ಣಗೊಂಡಿರುವ ಕೆಲಸಗಾರನ ವಯಸ್ಸಿನ ವರ್ಷಗಳು | ಅಪವರ್ತನಗಳು |
|---|---|---|---|
| (1) | (2) | (1) | (2) |
| 16 ಕ್ಕಿಂತ ಹೆಚ್ಚಿಲ್ಲದ | 228. 54 | 41 | 181. 37 |
| 17 | 227. 49 | 42 | 178. 49 |
| 18 | 226. 38 | 43 | 175. 52 |
| 19 | 225. 22 | 44 | 172. 52 |
| 20 | 224. 00 | 45 | 169. 44 |
| 21 | 222. 71 | 46 | 166. 29 |
| 22 | 221. 37 | 47 | 163. 07 |
| 23 | 219. 95 | 48 | 159. 80 |
| 24 | 215. 28 | 49 | 156. 47 |
| 25 | 216. 91 | 50 | 153. 09 |
| 26 | 215. 28 | 51 | 149. 67 |
| 27 | 213. 57 | 52 | 146. 20 |
| 28 | 211. 79 | 53 | 142. 68 |
| 29 | 209. 92 | 54 | 139. 13 |
| 30 | 207. 98 | 55 | 135. 56 |
| 31 | 205. 98 | 56 | 131. 95 |
| 32 | 203. 85 | 57 | 128. 33 |
| 33 | 201. 66 | 58 | 124. 70 |
| 34 | 199. 40 | 59 | 121. 05 |
| 35 | 197. 06 | 60 | 117. 41 |
| 36 | 194. 64 | 61 | 113. 77 |
| 37 | 192. 14 | 62 | 110. 14 |
| 38 | 189. 56 | 63 | 106. 52 |
| 39 | 186. 90 | 64 | 102. 93 |
| 40 | 184. 17 | 65 ಅಥವಾ ಹೆಚ್ಚು | 99. 37 |

# ಪರಿಶಿಷ್ಟ 7 | ನಮೂನೆ 8

## ನಮೂನೆ 8

**(ನಿಯಮ 21 ನೋಡಿ)**

**ನಷ್ಟಪರಿಹಾರಕ್ಕಾಗಿ ಕೆಲಸಗಾರನಿಂದ ಹಾಕಲು ಅರ್ಜಿಯ ಸ್ವರೂಪ**

ಗೆ

ಆಯುಕ್ತರು– ಕೆಲಸಗಾರರ ನಷ್ಟಪರಿಹಾರಕ್ಕಾಗಿ.

..........................................................................................

..........................................................................................

ವಾಸಿಸುವ ವಿಳಾಸ ........................................................ ಅರ್ಜಿದಾರ

ವಿರುದ್ಧ

..........................................................................................

..........................................................................................

ವಾಸಮಾಡುವ ವಿಳಾಸ ...................................... ಎದುರಾಳಿ ಮೇಜವಾನಿ.

ಈ ಮೂಲಕ ಮಂಡಿಸುವುದೇನೆಂದರೆ

(1) ಅರ್ಜಿದಾರನ/ಳು ಎದುರಿನ ಮೇಜವಾನಿಂದ ನೌಕರಿಗಿಟ್ಟುಕೊಂಡಿರುವ ಒಬ್ಬ/ಳು ಕೆಲಸಗಾರನಾಗಿದ್ದು, ದಿನಾಂಕ ........... 20............. ರಂದು ನೌಕರಿಯ ಸಂದರ್ಭದಲ್ಲಿ ಮತ್ತು ನೌಕರಿಂದಾಗಿ ಆದ ಅಪಘಾತದಿಂದಾಗಿ ವೈಯಕ್ತಿಕ ಘಾತಗೊಂಡಿದ್ದಾನೆ/ಳೆ.

ಘಾತಕ್ಕೆ ಕಾರಣವೇನೆಂದರೆ (ಘಾತವಾಗಿದ್ದಕ್ಕೆ ಇಲ್ಲಿ ಸಾಧಾರಣ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಸೇರಿಸಿ)

..........................................................................................

..........................................................................................

..........................................................................................

(2) ಅರ್ಜಿದಾರನು/ಳು ಈ ಕೆಳಗೆ ತಿಳಿಸಿರುವ ಗಾಯಗಳನ್ನು ಅನುಭವಿಸಿರುತ್ತಾನೆ/ಳೆ

.........................................................................................

.........................................................................................

(3) ಅರ್ಜಿದಾರನ/ಳ ಮಾಸಿಕ ವೇತನ ರೂ. ............................ ಕ್ಕೆ ಮೊತ್ತವಾಗುತ್ತದೆ. ಅರ್ಜಿದಾರನು/ಳು 15 ವರ್ಷಗಳಿಗಿಂತ ಹೆಚ್ಚು /ಕಡಿಮೆ ವಯಸ್ಸು ಹೊಂದಿರುವವನಾಗಿದ್ದಾನೆ / ಳೆ .................

(4)* (ಅ) ಅಪಘಾತದ ವಿಷಯದ ತಿಳುವಳಿಕೆ ಪತ್ರವು 20 .......ದ .................... ದಿನದಂದು ನೀಡಲಾಗಿದೆ.

(ಬ) ತಿಳುವಳಿಕೆ ಪತ್ರವನ್ನು ಸಾಧ್ಯವಾದಷ್ಟೂ ತ್ವರಿತವಾಗಿ ನೀಡಲಾಗಿದೆ.

(ಕ) ಅಪಘಾತ ಕುರಿತ ತಿಳುವಳಿಕೆ ಪತ್ರವನ್ನು ಸೂಕ್ತ ಕಾಲದಲ್ಲೇ ನೀಡಲು ಸಾಧ್ಯವಾಗದಿರುವುದಕ್ಕೆ ಕಾರಣವೇನೆಂದರೆ

.........................................................................

(5) ಅರ್ಜಿದಾರನು/ಳು ಈ ರೀತಿಯಾಗಿ ಪಡೆಯಲು ಹಕ್ಕು ಉಳ್ಳವನಾ/ ಳಾ ಗಿರುತ್ತಾನೆ/ಳೆ–

(ಅ) 20 .......... ದ .............. ದಿನಾಂಕದಿಂದ .............. ದಿನಾಂಕದವರೆಗೆ ರೂ. ...................................... ಗಳ ಅರ್ಧಮಾಸಿಕ ಸಂದಾಯ.

(ಬ) ರೂ. ................. ಗಳ ಒಂದು ಗಂಟುಮೊತ್ತದ ಸಂದಾಯ.

(6) ಅರ್ಜಿದಾರನು ಒಪ್ಪಂದರೀತ್ಯಾ ಒಂದು ಇತ್ಯರ್ಥಕ್ಕೆ ಬರಲು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದ್ದಾನೆ/ಳೆ.

.........................................................................................

ಆದರೆ ವ್ಯಾಜ್ಯದಲ್ಲಿರುವ ಪ್ರಶ್ನೆಗಳನ್ನು ಇತ್ಯರ್ಥ ಮಾಡಲು ಅಸಾಧ್ಯ ಎಂದು ಸಾಬೀತಾಗಿದ್ದೇಕೆಂದರೆ

.........................................................................................

* ಆದ್ದರಿಂದ ನೀವು ವ್ಯಾಜ್ಯದಲಿರುವ ಈ ಕೆಳಗಿನ ಪ್ರಶ್ನೆಗಳನ್ನು ಸ್ಪಷ್ಟಪಡಿಸಿಕೊಳ್ಳಲು ಕೋರಲಾಗಿದೆ

(ಅ) ಅರ್ಜಿದಾರನು ಅಧಿನಿಯುಮದ ಅರ್ಥದ ಒಳಗೇ ಬರುವ ಕೆಲಸಗಾರನೇ?

(ಆ) ಆದ ಅಪಘಾತವು ಅರ್ಜಿದಾರನ ನೌಕರಿಂದಾಗಿ ಮತ್ತು ನೌಕರಿಯ ಸಂದರ್ಭದಲ್ಲೇ ಘಟಿಸಿತೇ?

(ಇ) ಹಕ್ಕು ಚಲಾಸುವ ನಷ್ಟಪರಿಹಾರದ ಮೊತ್ತವು ಅಥವಾ ಆ ಹೊತ್ತದ ಯಾವುದೇ ಭಾಗವು ನೀಡಬೇಕಾಗಿದೆಯೇ?

(ಈ) ಹಾಗೆ ಋಣವಿರುವ ನಷ್ಟಪರಿಹಾರವನ್ನು ನೀಡುವ ಬಾಧ್ಯತೆ ಎದುರಾಳಿ ಮೇಜುವಾನಿಗೆ ಇದೆಯೇ?

(ಉ) ಇತ್ಯಾದಿ (ಅವಶ್ಯಕವಿದ್ದಂತೆ)

.......................................... ..........................................

ದಿನಾಂಕ ಅರ್ಜಿದಾರ

# ಪರಿಶಿಷ್ಟ 8

# ಮಾಲೀಕನ ಬಾಧ್ಯತೆ ಕುರಿತು ಚರ್ಚೆ: ಪ್ರಕರಣ ಅಧ್ಯಯನ

ನಷ್ಟಪರಿಹಾರ ನೀಡಲೋಸ್ಕರ 'ನೌಕರಿಂದಾಗಿ ಮತ್ತು ನೌಕರಿಯ ಸಂದರ್ಭದಲ್ಲಿ' ಅಪಘಾತವೊಂದರಿಂದಾಗಿ ಹಾನಿಯೊಂದು ಸಂಭವಿಸಿತೇ ಇಲ್ಲವೇ ಎಂಬುದನ್ನು ಆಯುಕ್ತರು ನಿರ್ಧರಿಸುತ್ತಿರುವಾಗ, ಸಾಮಾನ್ಯ ನಿಯಮವೊಂದರಂತೆ, ಕೆಲಸಗಾನೊಬ್ಬನ ನೌಕರಿಯು ಆತ ನೌಕರಿಯ ಸ್ಥಳ ಹೊಕ್ಕದ ಹೊರತೂ ನೌಕರಿಯು ಶುರುವಾದಂತಲ್ಲ ಹಾಗೂ ಅವನು/ಳು ಆ ಸ್ಥಳ ಬಿಟ್ಟ ಮರುಕ್ಷಣ ಆ ನೌಕರಿಯು ಮುಗಿದಂತಲ್ಲ. ಆದರೆ ಇದು ಸಮಯ ಮತ್ತು ಸ್ಥಳ ಎರಡೂ ರೀತಿಯಲ್ಲಿ 'ಕಾಲ್ಪನಿಕ ವಿಸ್ತಾರ' ಸಿದ್ಧಾಂತಕ್ಕೆ ಒಳಪಡುತ್ತದೆ, ಹಾಗೂ ಕೆಲಸಗಾರನೊಬ್ಬನ/ಳನ್ನು ಮಾಲೀಕನ ಆವರಣಗಳೊಳಗೆ ತಲುಪಿಲ್ಲದಿದ್ದರೂ ಅಥವಾ ನಿರ್ಗಮಿಸಿದ್ದರೂ ಇನ್ನೂ ತನ್ನ ಕೆಲಸದ ಅವಧಿಯಲ್ಲಿಯೇ ಇದ್ದಂತೆಯೇ ಪರಿಗಣಿಸಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ, ನ್ಯಾಯಾಲಯಗಳು 'ಕಾರ್ಯಸ್ಥಳದ ಕಾಲ್ಪನಿಕ ವಿಸ್ತಾರ'ದ ಒಂದು ನಿಯಮಿತ ಕಲ್ಪನೆಯ ಮೇಲೆ ವಿಶ್ವಾಸವಿಡುತ್ತಿವೆ. ಹಾಗಾಗಿ ಕೆಲಸಗಾರನೊಬ್ಬನು/ಳು ತನ್ನ ಕೆಲಸದ ಸ್ಥಳಕ್ಕೆ ಹೋಗುವಾಗ ಸಂಭವಿಸುವ ಅಪಘಾತಗಳನ್ನು 'ಕೆಲಸದ ಸಂದರ್ಭದಲ್ಲಿ ಮತ್ತು ಹೊರಗೆ' ಉಂಟಾದ ಅಪಘಾತಗಳ ಪರಿಧಿಯೊಳಗೆ ಹಿಂದಿನ ನ್ಯಾಯಶಾಸ್ತ್ರದಲ್ಲಿ ನಷ್ಟಪರಿಹಾರ ಹಕ್ಕು ಸಾಧಿಸಲು ಅವಶ್ಯಕವಿತ್ತು ಎಂಬ ಅಂಶವನ್ನು ನ್ಯಾಯಾಲಯಗಳು ಸೇರ್ಪಡೆ ಮಾಡಿಕೊಳ್ಳುತ್ತಿಲ್ಲ.

ಆಯುಕ್ತರು, ಕೋವಿಲ್ಪಟ್ಟಿ ಮುನ್ಸಿಪಾಲಿಟಿ, ಕೋವಿಲ್ಪಟ್ಟಿ ವಿ/ರು., ತಮಿಳರಾಸನ್ ಮತ್ತು ಇನ್ನೊಬ್ಬರು, 1998 ಎಲ್.ಎಲ್.ಜೆ. (002) 0683–ಮದ್ರಾಸು, ಈ ಪ್ರಕರಣದಲ್ಲಿ, ಕೆಲಸಗಾರನೊಬ್ಬನನ್ನು ತನ್ನ ಕೆಲಸಕ್ಕೆ ಹೋಗುತ್ತಿರುವ ಮಾರ್ಗದಲ್ಲಿ ಕೆಲವು ದುಷ್ಕರ್ಮಿಗಳು ಆಕ್ರಮಣ ಮಾಡಿದರು ಹಾಗೂ ಅದರಿಂದಾದ ಗಾಯಗಳಿಂದ ಆ ಕೆಲಸಗಾರನು ಸತ್ತುಹೋದನು. ಪ್ರಾದೇಶಿಕ ನಿರ್ದೇಶಕರು ವಿರುದ್ಧ., ಫ್ರಾನ್ಸಿಸ್ ಡಿಕೋಸ್ಟಾ 1996 ಲ್ಯಾಬ್ ಐ.ಸಿ. 2720 ಎಂಬ ಸರ್ವೋಚ್ಛ ನ್ಯಾಯಾಲಯದ ಪ್ರಕರಣದ ತೀರ್ಪನ್ನು (ಈ ತೀರ್ಪು ನೌಕರರ ರಾಜ್ಯ ವಿಮಾ ಕಾಯ್ದೆ ಅಡಿಯಲ್ಲಿ ಅನ್ವಯಿಸುವ ಒಬ್ಬ ನೌಕರನ ವಿಷಯವಾಗಿನ ತೀರ್ಪು) ಆಧರಿಸಿ ಮದ್ರಾಸಿನ ಉಚ್ಚನ್ಯಾಯಾಲಯವು

ಮೃತಪಟ್ಟವನು ರಸ್ತೆಯ ಮೇಲೆ ಒಬ್ಬ ಸಾರ್ವಜನಿಕ ಸದಸ್ಯನ ರೀತಿ ಇದ್ದುದೆಂದೂ, ಖಂಡಿತವಾಗಿ ತನ್ನ ನೌಕರಿಯು ಸಂದರ್ಭದಲ್ಲಿ ಇರಲಿಲ್ಲವೆಂದೂ, ಹಾಗಾಗಿ ಅವನ ಅವಲಂಬಿತರುಗಳಿಗೆ ನಷ್ಟಪರಿಹಾರ ದೊರಕಿಸಿಕೊಡುವಂತಿಲ್ಲ ಎಂಬ ತೀರ್ಮಾನವನ್ನು ಕೊಟ್ಟಿತು. 'ಫ್ರಾನ್ಸಿಸ್ ಡಿಕೋಸ್ಟಾ' ಪ್ರಕರಣದ ತೀರ್ಪಿನ ಪ್ರಕಾರ, ಕೆಲಸಗಾರನು ತನ್ನ ನೌಕರಿಯ ಸ್ಥಳ ತಲುಪುವವರೆಗೂ ಅವನ ನೌಕರಿಯು ಶುರುವಾಗುವುದಿಲ್ಲ ಎಂದು.

ಮುಂದೆ ಕೆಲವು ಉಚ್ಚನ್ಯಾಯಾಲಯಗಳ ನಿರ್ಣಯಗಳು 'ನೌಕರಿಯಿಂದಾಗಿ ಮತ್ತು ಅದರ ಸಂದರ್ಭದಲ್ಲಿ' ಎಂಬ ಅಭಿವ್ಯಕ್ತಿಯನ್ನು ಕೆಲಸಗಾರರಿಗೆ ಅನುಕೂಲವಾಗುವಂತೆ ಹಿಗ್ಗಿಸಿವೆ. ಕೆಲವು ತೀರ್ಪುಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ನೀಡಲಾಗಿದೆ:

ಮದ್ರಾಸಿನ ಉಚ್ಚನ್ಯಾಯಾಲಯದ ಆ ವರ್ಷದ ತೀರ್ಪಿನಲ್ಲಿ- ಮ್ಯಾನೇಜ್‌ಮೆಂಟ್ ಆಫ್ ಪನ್ನಿಮೇಡು ಎಸ್ಟೇಟ್, ಟಾಟಾ ಟೀ ಲಿಮಿಟೆಡ್. ಪಿ.ಓ. ವಲ್ಪರಾ ವಿ/ರು., ಚಂದ್ರ 1998 (002) ಎಲ್.ಎಲ್.ಜೆ. 0693, ಮದ್., ಆ ಪ್ರಕರಣದಲ್ಲಿ ಹಲ್ಲೆಗೊಳಗಾಗಿ ಗಾಯಗೊಂಡ ಮಹಿಳಾ ಕೆಲಸಗಾರಳು ನಷ್ಟಪರಿಹಾರಕ್ಕೆ ಹಕ್ಕುಳ್ಳವಳು ಎಂದು ನಿರ್ಣಯಿಸಿತು. ಆಕೆಯ ತನ್ನ ಕೆಲಸದ ಸ್ಥಳವನ್ನು ನಿಗದಿಪಡಿಸಿಕೊಳ್ಳಲು ಸಂಬಂಧಿಸಿದ ಕೊಠಡಿಯ ಸಮೀಪದಲ್ಲಿ ಇದ್ದಾಗ ಸಂಭವಿಸಿದ ಘಟನೆಯಾದ್ದರಿಂದ, ಅದನ್ನು ನೌಕರಿಯ ಸಂದರ್ಭದಲ್ಲಿ ಇರುವ ತೊಂದರೆಯಿಂದಾಗಿ ಘಟಿಸಿದ್ದು ಎಂದೇ ನಿರ್ಧರಿಸಬೇಕಾದ್ದರಿಂದ ಪರಿಹಾರಾರ್ಹವಾದುದು (ಅಂದರೆ ನಷ್ಟ-ಪರಿಹಾರವನ್ನು ನೀಡಬಹುದು) ಎಂದು ನ್ಯಾಯಾಲಯವು ನಿರ್ಣಯಿಸಿತು.

ಅದೇ ರೀತಿ, ಎಮ್.ಎಲ್. ಅನೇಜಾ 1999(002) ಸಿ.ಎಲ್.ಆರ್. 0062 ರಾಜಾ., ಈ ಪ್ರಕರಣದಲ್ಲಿ ರಾಜಾಸ್ಥಾನದ ಉಚ್ಚನ್ಯಾಯಾಲಯವು ಎತ್ತಿ ಹಿಡಿದಂತೆ ಯಜಮಾನನ ಆವರಣಗಳೊಳಗೆ ಇರುವ ಸಹೋದ್ಯೋಗಿಯೂ ಸೇರಿದಂತೆ ಕೆಲಸಗಾರನೊಬ್ಬನಿಗೆ ಯಾವುದೇ ವ್ಯಕ್ತಿಯಿಂದ ಘಾತಕ್ಕೊಳಗಾದರೆ [ಹಲ್ಲೆಕಾರನ ಒಳನುಸುಳುವಿಕೆಯ ಬಗ್ಗೆ ಯಜಮಾನನಿಗೆ ತಕ್ಕಮಟ್ಟಿನ ಶಂಕೆ ಇಲ್ಲದಿದ್ದರ ಹೊರತು] ಅಂತಹ ಅಪಘಾತವನ್ನು 'ನೌಕರಿಯಿಂದಾಗಿ ಮತ್ತು ನೌಕರಿಯ ಸಂದರ್ಭದಲ್ಲಿ' ಘಟಿಸಿದ್ದೆಂದು ನಿರ್ಧರಿಸಬೇಕಾಗುತ್ತದೆ. ಇದನ್ನು ಹಾನಿಕರ ಎಂದು ಸಾಂಪ್ರದಾಯಿಕವಾಗಿ ಪರಿಗಣಿಸಿಲ್ಲಬಹುದಾಗಿದ್ದರೂ, ಅದು ಕೆಲಸದ ಲಕ್ಷಣಕ್ಕೆ ಸಂಬಂಧಿಸಿದ್ದು ಎಂಬುದು ಸ್ವಾನ್ವಯವಾಗುತ್ತದೆ. ಈ ಪ್ರಕರಣದಲ್ಲಿ ನೌಕರನು ಮತ್ತೊಬ್ಬ ನೌಕರನಿಂದ ಇರಿಯಲ್ಪಟ್ಟಿದ್ದನು. ಇಷ್ಟಾದರೂ ಹಾನಿಗೊಳಗಾದ ನೌಕರನಿಗೆ ನಷ್ಟಪರಿಹಾರ ಸಿಗಲಿಲ್ಲ ಏಕೆಂದರೆ

ಒಬ್ಬ ಗುಮಾಸ್ತನಾಗಿ ಆತನು ಈ ಅಧಿನಿಯಮದ ಅಡಿಯಲ್ಲಿ 'ಕೆಲಸಗಾರ' ಎಂಬ ವ್ಯಾಖ್ಯಾನದ ಒಳಗೆ ಬರಲಿಲ್ಲ. 1999ರ ಒರಿಸ್ಸಾ ಉಚ್ಚನ್ಯಾಯಾಲಯದ ತೀರ್ಪೊಂದರಲ್ಲಿ, – ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ, ರೂರ್ಕೆಲಾ, ಮೇಲ್ಮನವಿಯವ ವಿ/ರು., ಸಾಬಿತ್ರಿ ನಾಯಕ್ 1999 (002) ಸಿ.ಎಲ್.ಆರ್. 0062 ಓಆರ್ಐ, ಈ ಪ್ರಕರಣದಲ್ಲಿ ಮೃತಪಟ್ಟ ಕೆಲಸಗಾರನ ಪತ್ನಿ ಸಾಬಿತ್ರಿ ನಾಯಕ್ ಎಂಬುವಳು ಹಾಗೆ ಸತ್ತವನ ಅವಲಂಬಿತಳಾದ್ದರಿಂದಾಗಿ ನಷ್ಟಪರಿಹಾರಕ್ಕೆ ಹಕ್ಕುಳ್ಳವಳು ಎಂದು ಎತ್ತಿ ಹಿಡಿತು. ನೌಕರಿಯ ಸಂದರ್ಭದಲ್ಲಿ ಒಳಗಾದ ಆಯಾಸ ಮತ್ತು ಒತ್ತಡಗಳಿಂದಾಗಿ ಸಾವು ಸಂಭವಿಸಿದ್ದರಿಂದ ಅದನ್ನು ನೌಕರಿಯಿಂದಾಗಿ ಮತ್ತು ನೌಕರಿಯ ಸಂದರ್ಭದಿಂದಾಗಿ ಉಂಟಾದದ್ದು ಎಂದು ನ್ಯಾಯಾಲಯವು ಎತ್ತಿ ಹಿಡಿತು.

ಈ ಪ್ರಕರಣದಲ್ಲಿ ಮೃತಪಟ್ಟ ವ್ಯಕ್ತಿಯು ಆ ಮುನ್ನ ತನ್ನ ಕೆಲಸಕ್ಕೆ ಹೋಗುವ ಮಾರ್ಗದಲ್ಲಿ ಬಸ್ಸಿನಿಂದ ಬಿದ್ದುಬಿಟ್ಟಿದ್ದನು. ಸಾಮಾನ್ಯವಾಗಿ ಇಂತಹ ಘಾತಗಳು ಸಾವಿನಲ್ಲಿ ಪರ್ಯವಸನಗೊಳ್ಳುವುದಿಲ್ಲವಾದರೂ, ಕೆಲಸಗಾರನು ಕೆಲಸ-ಸಂಬಂಧೀ ಒತ್ತಡದಿಂದ ಹೃದಯದ ತೊಂದರೆಗಳಿಂದ ಬಳಲುತ್ತಿದ್ದು ಹಾಗೆ ಬಿದ್ದಾಗ ಹೃದಯಾಘಾತವಾಯಿತು.

ಇದಲ್ಲದೆ, ವ್ಯಕ್ತಿಯೊಬ್ಬನು ತನ್ನ ಮಾಲೀಕನಿಗೋಸ್ಕರ ತನ್ನ ಕರ್ತವ್ಯವನ್ನು ಸಾಕ್ಷಾತ್ತಾಗಿ ನಿಭಾಯಿಸುತ್ತಿರುವಾಗ ಮಾತ್ರವೇ 'ತನ್ನ ನೌಕರಿಯ ಸಂದರ್ಭ'ದಲ್ಲಿ ಇದ್ದಾನೆ ಎಂದಿರಬೇಕಿಲ್ಲ. ಅದರ ಪರಿಸ್ಥಿತಿಗನು-ಗುಣವಾಗಿರುವ ವಿಷಯಗಳೂ ಅದರಲ್ಲಿ ಸೇರಿಕೊಳ್ಳುತ್ತವೆ. ಆದ್ದರಿಂದ, ವಿಶ್ರಾಂತಿಯ ಅವಧಿಗಳಲ್ಲಿ ಅಥವಾ ತನ್ನ ದೈಹಿಕ ಅವಶ್ಯಕತೆಗಳಾದ ಆಹಾರ, ಪಾನ ಮತ್ತು ತಂಬಾಕೂ ಕೂಡ ಸೇರಿದಂತೆ ತೆಗೆದುಕೊಳ್ಳುತ್ತಿರುವಾಗ ಕೆಲಸಗಾರನು ಅಪಘಾತಕ್ಕೊಳಗಾದರೆ ಅದರಿಂದಾದ ಹಾನಿಯನ್ನೂ ನೌಕರಿಯ ಸಂದರ್ಭದಲ್ಲಾದದ್ದು ಎಂದು ಪರಿಗಣಿಸಬಹುದು.